# ಕರಡಿ ಮಜಲು

## (ಜಾನಪದ ಕರಡಿ ಮನೆತನ ಪರಂಪರೆ)

ಸಂಪಾದಕರು

ಶ್ರೀ ಚನ್ನಮಲ್ಲಪ್ಪ ಗಂಗಪ್ಪ ಕರಡಿ
ಜಾನಪದ ಕರಡಿಮಜಲು ಕಲಾವಿದರು

: ಪ್ರಕಾಶಕರು :

ಕಲಾಜ್ಯೋತಿ ಶ್ರೀ ವೀರಭದ್ರಪ್ಪನವರ ಕರಡಿಮಜಲು ಸಂಘ (ರಿ)
ಮಹಾಲಿಂಗಪುರ–587 312

**ಕರಡಿ ಮಜಲು**

**ಶ್ರೀ ಚನಮಲ್ಲಪ್ಪ ಕರಡಿ**
ಮಹಾಲಿಂಗಪುರ
ಮೋ : **9902853554**

ಮೊದಲ ಮುದ್ರಣ : **2016**

ಬೆಲೆ ರೂ. **50/-**

ಪುಟಗಳು : VIII **+ 72= 80**

ಪ್ರತಿಗಳು : **1000**

ಕಾಗದ ಬಳಕೆ : ಎನ್. ಎಸ್. ಮ್ಯಾಪಲೆಥೋ **70** ಜಿಎಸ್ಎಂ
ಪುಸ್ತಕದ ಆಕಾರ : ಡೆಮಿ **1 /8**

ಹಕ್ಕುಗಳು : ಪ್ರಕಾಶಕರದು

ಪ್ರಕಾಶಕರು :
**ಕಲಾಜ್ಯೋತಿ ಶ್ರೀ ವೀರಭದ್ರಪ್ಪನವರ**
**ಕರಡಿಮಜಲು ಸಂಘ (ರಿ)**
**ಮಹಾಲಿಂಗಪುರ–587 312**
ತಾ. ಮುಧೋಳ ಜಿ. ಬಾಗಲಕೋಟ
**ಮೋ : 9902853554**

ಮುದ್ರಕರು :
**ಅಕ್ಷರ ಆಫ್‌ಸೆಟ್‌ಪ್ರಿಂಟರ್ಸ್**
**ಡಬಲ್ ರೋಡ, ಮಹಾಲಿಂಗಪುರ**
**ಮೋ : 9035319325**
E-mail :akshargraphics2011@gmail.com

# ಆಶೀರ್ವಚನ



**ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ಕೀರುತಿ ತುಂಬಿ** ಎಂದು ಬಸವಣ್ಣನವರು ಹೇಳುವಂತೆ ಕಿವಿಗೆ ಇಂಪಾದ ನಾದವನ್ನು ನೀಡುವ ವಾದ್ಯ ಕರಡಿವಾದನ ಆಗಿದೆ. ಈ ಕರಡಿವಾದನ ಕಲೆ ನೂರಾರು ವರುಷಗಳಿಂದ ಉಳಿದು ಹಾಗೂ ಬೆಳೆದು ಬರಬೇಕಾದರೆ ಮಹಾಲಿಂಗಪುರದ **ಶ್ರೀ ಶಿವಯೋಗಿ ಮಹಾಲಿಂಗೇಶ್ವರರ ಕರುಣಾಮೃತದ ಕೊಡುಗೆ ಇದಾಗಿದೆ ಎನ್ನುವುದು ವಿಶೇಷ.**

ಇಂದಿನ ವಿಜ್ಞಾನ – ತಂತ್ರಜ್ಞಾನದ ಯುಗದಲ್ಲಿ ಇಂದಿಗೂ ಶುಭ ಸಂದರ್ಭ ಹಾಗೂ ಜಾತ್ರೆ, ಉತ್ಸವಗಳಲ್ಲಿ ಚರ್ಮವಾದ್ಯಗಳಲ್ಲಿಯೇ ಶ್ರೇಷ್ಠವಾದ್ಯ ಕರಡಿವಾದನ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಇಂದಿಗೂ ಕೂಡಾ ಅದು ಮುಂದುವರೆಯಲು ಅದರ ಸಂವಹನ ಮೌಲ್ಯವೇ ಕಾರಣವಾಗಿದೆ. ಇಂತಹ ಕಲೆಯ ಮೂಲಕ ನಾಡಿನಾದ್ಯಂತ ಮತ್ತು ಹೊರದೇಶದಲ್ಲಿಯೂ ಕರಡಿ ಕಲೆಯ ಕಾರ್ಯಕ್ರಮಗಳನ್ನು ನೀಡಿ ಅನೇಕ ಪ್ರಶಸ್ತಿಗಳನ್ನು ಪಡೆದು ಕೊಂಡಿರುವು ರುದ್ರಪ್ಪ ಕರಡಿ, ವೀರಭದ್ರಪ್ಪ ಕರಡಿ, ಇತ್ತಿಚಿಗೆ ರಾಜ್ಯೋತ್ಸವ ಪ್ರಶಸ್ತಿ ಪಡೆದ ವೀರಸಂಗಪ್ಪ ಕರಡಿ ಆದಿಯಾಗಿ ಇಂದಿನ ಯುವ ಕಲಾವಿದರ ವರೆಗೂ ಕರಡಿ ಮನೆತನದ ಕಲೆ ಪ್ರಸಿದ್ಧಿಯಾಗಿದೆ. ಈ ನಿಟ್ಟಿನಲ್ಲಿ ಕರಡಿ ಕಲೆಯ ಹಾಗೂ ಕರಡಿ ಮನೆತನವನ್ನು ಪರಿಚಯಿಸುವ ಒಂದು ಕಿರು ಹೊತ್ತಿಗೆಯನ್ನು ಪ್ರಕಟಿಸುತ್ತಿರುವುದು ಅಭಿನಂದನಿಯವಾಗಿದೆ.

ಈ ಕಲಾ ಸೇವೆಯು ಇನ್ನೂ ನೂರಾರು ವರ್ಷ ಮುಂದುವರೆಯಲಿ ಅವರ ಮನೆತನದ ಸರ್ವ ಸದಸ್ಯರಿಗೆ ಆಯುರಾರೋಗ್ಯ ಭೋಗ–ಭಾಗ್ಯಗಳನ್ನು ಜಗದ್ಗುರು ಶ್ರೀ ಮಹಾಲಿಂಗೇಶ್ವರರು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ***ಜೊತೆಗೆ ಶ್ರೀ ಮಹಾಲಿಂಗೇಶ್ವರ ಮಠಕ್ಕೆ ನೂರಾರು ವರ್ಷಗಳಿಂದ ವಂಶಪಾರಂಪರಿಕವಾಗಿ ನಡೆದು ಬಂದ ಕರಡಿ ಮನೆತನದ ಕಲಾ ಸೇವೆಯೂ ಮುಂದೆಯೂ ಇದಕ್ಕಿಂತ ಹೆಚ್ಚಿನ ರೀತಿಯಲ್ಲಿ ನಡೆಯಲೆಂದು ಸರ್ವರಿಗೂ ಆಶೀರ್ವದಿಸುತ್ತೇನೆ.***

ಆಶೀರ್ವಾದದೊಂದಿಗೆ

| | |
|---|---|
| ಶ್ರೀ ಮಹಾಲಿಂಗೇಶ್ವರ | ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು |
| ಸಿದ್ಧಸಂಸ್ಥಾನ ಮಠ | ಶ್ರೀ ಮಹಾಲಿಂಗೇಶ್ವರ ಶಿವಯೋಗಿ |
| ಮಹಾಲಿಂಗಪುರ | ರಾಜೇಂದ್ರ ಮಹಾಸ್ವಾಮಿಗಳು, |

# ಶುಭ ಸಂದೇಶ



ದೇಹ ಮಣ್ಣಿಗೆ, ಜೀವ ಜನಪದಕ್ಕೆ ಅನ್ನು ಜನ ನುಡಿಯುಂತೆ ಬಾಗಲಕೋಟ ಜಿಲ್ಲೆಯ ಮಹಾಲಿಂಗಪುರದ ಕರಡಿ ಮನೆತನದವರ ಕರಡಿ ಮಜಲು ಕಲೆ ರಾಜ್ಯ, ದೇಶ ಹಾಗೂ ವಿದೇಶಗಳ ಲ್ಲಿಯೂ ತಮ್ಮ ಕಲೆಯನ್ನು ಪ್ರದರ್ಶಿಸಿ ಅಪಾರ ಜನಮಣ್ಣನೆ ಪಡೆದಿದೆ.

ಕಳೆದ 40 ವರ್ಷಗಳಿಂದ ನನಗೆ ಹಲವಾರು ಭಾರಿ ಈ ಮನೆತನದ ಹಿರಿಯ ಕಲಾವಿದರು ಆದರ್ಶರಾಗಿ ಕಂಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಹಲವಾರು ಉತ್ಸವ ಕಾರ್ಯಕ್ರಮಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಕಲೆಯ ಮೂಲಕ ತಮ್ಮ ಕುಟುಂಬವನ್ನೆ ತಂಡವಾಗಿಸಿ ರಾಜ್ಯ ಏಕೀಕರಣಕ್ಕಿಂತ ಮುಂಚೆ ಮೈಸೂರ ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಮೂಲಕ ಯಾವುದೇ ಸಂಪರ್ಕ ಸಾಧನ ಇಲ್ಲದ ಕಾಲದಲ್ಲಿ ದೇಶದ ರಾಜಧಾನಿ ದೇಹಲಿಯಲ್ಲಿ ಕಾರ್ಯಕ್ರಮ ನೀಡಿ ಈ ದೇಶದ ಪ್ರಧಾನಮಂತ್ರಿ, ಘನವೆತ್ತ ರಾಜ್ಯಪಾಲರುಗಳ ಮುಂದೆ ಕರ್ನಾಟಕ ಸಾಂಸ್ಕೃತಿಕ ಪರಂಪರೆ ಪರಿಚಯಿಸಿದ ಮನೆತನ ಮಹಾಲಿಂಗಪುರದ ಕರಡಿ ಮನೆತನ ಎಂದರೆ ಅತಿಶೋಕ್ತಿಯಾಗಲಾರದು.

ಇವರ ಕಲಾ ಸೇವೆಯನ್ನು ಗುರುತಿಸಿದ ಅಂದಿನ **ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಅಕಾಡೆಮಿ ಪ್ರಶಸ್ತಿ** ಮತ್ತು ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಾನಪದ ಕ್ಷೇತ್ರದ **ಜಾನಪದ ಶ್ರೀ** ಮತ್ತು ಇತ್ತಿಚಿಗೆ ಕರ್ನಾಟಕ **ರಾಜ್ಯೋತ್ಸವ ಪ್ರಶಸ್ತಿ** ನೀಡಿ ಗೌರವಿಸಿದ್ದು ಕಲಾ ಮನೆತನಕ್ಕೆ ಒಂದು ಕಳಸಪ್ರಾಯವಾಗಿದೆ. ರಾಷ್ಟ್ರ ಮಟ್ಟದಲ್ಲಿ ಕಿರ್ತಿಗಳಿಸಿದ ಕರಡಿ ಮನೆತನದ ಕಲಾವಿದರು ಸಂಘ ಸ್ಥಾಪಿಸಿ ಸತತ ಏಳು ವರ್ಷಗಳಿಂದ ಜಾನಪದ ಉತ್ಸವಗಳನ್ನು ಆಚರಿಸುತ್ತಾ ಹಲವಾರು ಯುವ ಕಲಾವಿದರನ್ನು ಬೆಳೆಸುವತ್ತ ಪ್ರಯತ್ನಿಸುತ್ತಿದ್ದಾರೆ. ಇದಿಗ ಕರಡಿ ಮಜಲು ಹಾಗೂ ಕರಡಿ ಮನೆತನದ ಬಗ್ಗೆ ಒಂದು ಪುಸ್ತಕ ಪ್ರಕಟಿಸುವ ಪ್ರಯತ್ನಕ್ಕೆ ಕೈ ಹಾಕಿದ್ದು ತುಂಬಾ ಸಂತೋಷದ ವಿಷಯವಾಗಿದೆ. ಇದರಿಂದ ಇತರರಿಗೆ ಕಲೆಯ, ಕಲಾವಿದರ ಮಾಹಿತಿ ತಿಳಿದುಕೊಳ್ಳಲು ಸುಲಭವಾಗುತ್ತದೆ ಎಂಬುದು ನನ್ನ ಅನಿಸಿಕೆಯಾಗಿದೆ.

ಈ ಮನೆತನದ ಕಲೆಯು ಹಿಗೇಯೆ ಮುಂದೆ ಇನ್ನಷ್ಟು ಉತ್ತರೋತ್ತರ ಬೆಳೆಯಲು ಮತ್ತು ಜಾನಪದ ಕರಡಿ ಮಜಲು ಸಂಸ್ಕೃತಿ ಮುಂದಿನ ಪಿಳಿಗೆಗೂ ಉಳಿಯುವಂತಾಗಲಿ ಎಂದು ಆಶಿಸುತ್ತೇನೆ.

*ಧನ್ಯವಾದಗಳು*

ಶ್ರೀ ಶ್ರೀಶೈಲ ಕರಿಶಂಕರಿ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ, ಬಾಗಲಕೋಟ

# ಸಂಪಾದಕರ ಮಾತು



ಆತ್ಮೀಯ ಕಲಾಭಿಮಾನಿಗಳೆ, ಕಲಾವಿದರೆ, ಓದುಗರೆ ನಮ್ಮ ಕಲಾಜ್ಯೋತಿ ಶ್ರೀ ವೀರಭದ್ರಪ್ಪನವರ ಕರಡಿ ಮಜಲು ಸಂಘ(ರಿ) ಮಹಾಲಿಂಗಪುರ ವತಿಯಿಂದ “ಕರಡಿ ಮಜಲು” ಎಂಬ ಪುಸ್ತಕವನ್ನು ಹೊರತರುವ ಪ್ರಯತ್ನವನ್ನು ಬಹಳ ವರ್ಷಗಳಿಂದ ಮಾಡುತ್ತಾ ಬಂದಿದ್ದು ಅದು ಈಗ ಕೈಗೊಂಡಿದೆ. “ಕರಡಿ ಮಜಲು” ಎಂಬ ಪುಸ್ತಕವನ್ನು ನಾವು ಪ್ರಕಟಗೊಳಿಸಿ ತಮಗೆ ನೀಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಈ ಪುಸ್ತಕವನ್ನು ತಾವೆಲ್ಲ ಪ್ರೀತಿಯಿಂದ ಸ್ವೀಕರಿಸಿ ಓದಿ ಕರಡಿ ಮಜಲು ಕಲೆಗೆ ತಮ್ಮ ಪ್ರೋತ್ಸಾಹ ನೀಡಿ ಆಶೀರ್ವದಿಸುವ ವಿಶ್ವಾಸ ನನಗಿದೆ ನನ್ನ ಪುಸ್ತಕದ ಶೀರ್ಷಿಕೆ “ಕರಡಿ ಮಜಲು ಹಾಗೂ ಮನೆತನ” ಯಾಕೆ ಈ ಶೀರ್ಷಿಕೆ ? ಯಾಕೆ ಈ ಪುಸ್ತಕ ? ಎಂಬುದನ್ನು ಮೊದಲು ಹೇಳಬೇಕು. ನಮ್ಮ ಮನೆತನ ಸುಮಾರು 450 ವರ್ಷಗಳಿಂದ ಬಂದದ್ದು ಎಂದು ಹೇಳುತ್ತಾರೆ.

ನಮ್ಮ ಕರಡಿ ಮಜಲು ಕುರಿತಾಗಿ ವಿದ್ವಾಂಸರು, ಸಾಹಿತಿಗಳು, ಲೇಖಕರು ಹಲವಾರು ಪತ್ರಿಕೆಗಳು ಪುಸ್ತಕಗಳಲ್ಲಿ ಬರೆದಿದ್ದಾರೆ. ಹಾಗೂ ಹಲವಾರು ಪ್ರೋಪೆಸರ್‌ಗಳು ಕರಡಿ ಮಜಲು ಕಲೆಯ ಮೇಲೆ ಪಿ.ಎಚ್.ಡಿ ಪದವಿ ಪಡೆದಿದ್ದಾರೆ. ಆದರೇ ಬಾಯಿಂದ ಬಾಯಿಗೆ ಕೈಯಿಂದ ಕೈಗೆ ಬಂದ ಕರಡಿಮಜಲು ಕಲೆ ಮತ್ತು ನಮ್ಮ ಮನೆತನದಲ್ಲಿ ನಡೆದ ಹಲವಾರು ರೋಮಾಂಚಕ ಘಟನೆಗಳು ಎಲ್ಲಿಯ ದಾಖಲೆ ಆಗದೇ ಹಾಗೆಯೇ ಉಳಿದು ಇತಿಹಾಸದಲ್ಲಿ ಹೂತು ಹೋಗಿದೆ. ಕೆಲವು ಘಟನೆಗಳು ದಾಖಲೆ ಆದರೂ ಒಂದೇ ಕಡೆ ಇಲ್ಲದೆ ಹಲವಾರು ಪುಸ್ತಕಗಳಲ್ಲಿ ಹರೆದು ಹಂಚಿ ಹೋಗಿವೆ. ಕರಡಿಮಜಲು ಹುಟ್ಟಿದ ಬಗ್ಗೆ ಕರಡಿ ಮನೆತನ ಹುಟ್ಟಿದ ಬಗ್ಗೆ ಹಾಗೂ ಕೆಲವು ಘಟನೆಗಳನ್ನು ಮತ್ತು ನಮ್ಮ ಪೂರ್ವಜರಿಂದ ಬಂದ ಕರಡಿಮಜಲು ವಿಷಯವನ್ನು ಒಂದೇ ಪುಸ್ತಕದಲ್ಲಿ ತಂದು ಸಾಕ್ಷಿಕರಿಸುವ ಕೆಲಸ ನಾನು ಇಲ್ಲಿ ಮಾಡಿದ್ದೇನೆ.

ಕರಡಿ ಮಜಲು ಮತ್ತು ಕರಡಿ ಮನೆತನ ಸಾಕ್ಷೀಕರಿಸಲು ಒಂದು ದಾಖಲೆಯು ಇಲ್ಲದ ಕಾರಣ ಇದು ಒಂದು ಸಾಕ್ಷಿ ಪುಸ್ತಕ ಎಂದು ಸಾಕ್ಷೀಕರಿಸುವ ಕೆಲಸ ನಾನು ಮಾಡಿದ್ದೇನೆ.

ಮೂಲ ನಾನು ಲೇಖಕ ಅಲ್ಲವಾದರೂ ಒಬ್ಬ ಕರಡಿ ಮನೆತನದ ಕಲಾವಿದ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಈ ಪುಸ್ತಕ ಬರೆಯಲು ಈ ಕಾರ್ಯ ಯಶಸ್ವಿಯಾಗಲು ನನಗೆ ಸಹಾಯ ಸಹಕಾರ, ಸಲಹೆ ಸೂಚನೆ ನೀಡಿದ ನನ್ನ ಎಲ್ಲ ಮನೆತನದವರ ಆಶೀರ್ವಾದ ನಿರಂತರ ನನಗಿರಲಿ. ನಾನು ಸಂಪಾದನೆ ಮಾಡಿದ ಪ್ರಥಮ ಪುಸ್ತಕವಾಗಿರುವುದರಿಂದ ನನಗೆ ಸಹಕರಿಸಿದ ಎಲ್ಲರಿಗೂ ನಮನಗಳನ್ನು ಸಲ್ಲಿಸುವೆ. ಹಾಗೆಯೇ ಕರಡಿ ಮನೆತನದ ಎಲ್ಲ ಕುಟುಂಬಸ್ತರಿಗೆ ವಿಶೇಷ ವಂದನೆಗಳನ್ನು ಹೇಳುತ್ತೇನೆ, ಹಾಗೂ ಈ ಪುಸ್ತಕವನ್ನು ಅಂದವಾಗಿ ಡಿ.ಟಿ.ಪಿ ಮಾಡಿದ ಸಂಭ್ರಮ ಗ್ರಾಫಿಕ್ಸ್, ಮಹಾಲಿಂಗಪುರ ಮತ್ತು ಫೋಟೊಗಳನ್ನು ಸಂಗ್ರಹಿಸಲು ಸಹಕರಿಸಿದ ಶ್ರೀನಿವಾಸ ಡಿಜಿಟಲ್ ಸ್ಟುಡಿಯೋ ಮಹಾಲಿಂಗಪುರ ಹಾಗೂ ಪುಸ್ತಕವನ್ನು ಮುದ್ರಿಸಿದ ಅಕ್ಷರ ಪ್ರಿಂಟರ್ಸ್‌ದವರಿಗೂ ನನ್ನ ಪ್ರೀತಿಯ ಧನ್ಯವಾದಗಳು

ಇಂತಿ ಕಲಾವಿದ

**ಶ್ರೀ ಚನ್ನಮಲ್ಲಪ್ಪ ಗಂಗಪ್ಪ ಕರಡಿ**

# ಪರಿವಿಡಿ

1. ಕರಡಿ ಮಜಲು ಕಲೆಯ ಹುಟ್ಟು

2. ಕರಡಿ ಮನೆತನದ ಹುಟ್ಟಿನ ಹಿನ್ನೆಲೆ

3. ಶಬ್ದ ನುಡಿಸುವ ಕಲೆ ಹುಟ್ಟಿದ್ದು ಮತ್ತು ಉಳಿಸಿಕೊಂಡು ಬಂದದ್ದು

4. ಕರಡಿ ಮನೆತನ ಮರೆಯದ ಘಟನೆಗಳು ಮತ್ತು ಕಾರ್ಯಕ್ರಮಗಳು

   ಅ) ಕರಡಿ ಮಜಲು ಸೇವೆಗಾಗಿ ಜಮೀನ ಪಡೆದ ಕಥೆ

   ಆ) ಕರಡಿ ವಾದ್ಯ ನುಡಿಸಿ ಆನೆಯ ಮದವನ್ನು ಇಳಿಸಿದ ಕಥೆ

   ಇ) ಶ್ರೀ ಮಹಾಲಿಂಗೇಶ್ವರರು ಬಂದು ಊಟ ಕೊಟ್ಟು ಮಾಯವಾದ ಘಟನೆ

   ಈ) ಪ್ಲೇಗ್ ಮಹಾಮಾರಿ ಪವಾಡ

   ಉ) ದೆಹಲಿಯ "ಅಪನಾ ಉತ್ಸವ"

5. ಕರಡಿ ಮನೆತನದ ನಿರಂತರ ಸೇವಾ ಕಾರ್ಯಕ್ರಮಗಳು

6. ಕರಡಿ ಮನೆತನದ ಕಲಾವಿದರ ಕಿರು ಪರಿಚಯ

7. ಕರಡಿ ಮನೆತನದವರು ನೀಡಿದ ಪ್ರಮುಖ ಕಾರ್ಯಕ್ರಮಗಳು

8. ಕರಡಿ ಮನೆತನದ ವಿಶೇಷ ಭಾವ ಚಿತ್ರಗಳು

## * ಕರಡಿ ಮಜಲು ಕಲೆಯ ಹುಟ್ಟು

ಜಗತ್ತಿನ ಸೃಷ್ಟಿ, ಸ್ಥಿತಿ ಲಯಗಳಿಗೆ ಬ್ರಹ್ಮ, ವಿಷ್ಣು, ಮಹೇಶ್ವರರು ಕಾರಣ ಪುರುಷರೆಂಬುವುದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿದೆ. ಸೃಷ್ಟಿಕರ್ತ ನಾದ ಬ್ರಹ್ಮನು ತನ್ನ ಮಡದಿಯಾದ ವಿಧ್ಯಾದೇವತೆ ಶಾರದಾ ಸಮೇತ ಬ್ರಹ್ಮ ಲೋಕದಲ್ಲಿ ಸಂಭ್ರಮದಿಂದ ಇರುತ್ತಿದ್ದರು. ತನ್ನ ಮಡದಿಯ ಮತ್ತು ಸಕಲ ಸದ್ಭಕ್ತರ ಆನಂದಕ್ಕಾಗಿ ಸಂಗೀತ ಕಲೆ, ಸೃಷ್ಟಿ ಮಾಡಿದನು ಎಂದು ಕಲಾ ವಿದ್ವಾಂಸರು ಹಾಗೂ ಪಂಡಿತರು ಅಭಿಪ್ರಾಯ ಪಡುತ್ತಾರೆ. ಕರಡಿ ಮಜಲು ಮೂಲದ ಬಗ್ಗೆ ವಿದ್ವಾಂಸರು ಒಂದೊಂದು ರೀತಿ ಹೇಳುತ್ತಾರೆ. ಕರಡಿಮಜಲು ಅಥವಾ "ಕರಡಿ ಮೇಳ" ಎಂಬ ಹೆಸರಿನ ಈ ಕಲೆ "ಕರಡೆ" (ಡಿ) ಎಂಬ ಪ್ರಮುಖ ವಾದ್ಯ ವಿಶೇಷವಾದದ್ದು ಪದಕೋಶಗಳಲ್ಲಿ ಕರಡೆ, ಕರಡಿ ಎಂಬ ಪದಗಳಿದ್ದು ಅದಕ್ಕೆ ವಾದ್ಯ ವಿಶೇಷ ಎಂಬ ಅರ್ಥವಿದೆ. ಕರಟಿ, ಕರಟಿಪ್ಪ ಕೈ, ಕರತಿಕ್ಕೈ ಎನ್ನುವ ಪದಗಳು ತಮಿಳಿನಲ್ಲಿದ್ದು ಅದಕ್ಕೆ ಕರಡಿಯಂತೆ ನಾದಮಾಡುವ ವಾದನ ಎನ್ನುವ ಅರ್ಥವಿದೆ. ಕರಡಿ/ಡೆ ಪದಕ್ಕೆ ನಿಖರವಾದ ನಿಷ್ಪತ್ತಿಯನ್ನು ಭಾಷಿಕ ನೆಲೆಯಲ್ಲಿ ಹುಡುಕುವುದು ಕಷ್ಟ ಹಾಗೂ ಇದು ಇನ್ನು ನಿಗೂಢ.

ಶಿಷ್ಟ ಸಾಹಿತ್ಯದಲ್ಲಿ ಕರಡಿಯ ಉಲ್ಲೇಖವಿದೆ. ಕನ್ನಡ ವಾಕ್ಯಗಳಲ್ಲಿ ಸಂಸ್ಕೃತ ಅನ್ವಯಗಳನ್ನು ಸೇರಿಸಿದರೆ "ಉತ್ತುಂಗ ಮದ್ದಳೆಯ ಜಯುಗರ ಧ್ವನಿಗಳ ವೋಲ್" ಎಂಬುದು ಕೇಶಿರಾಜನ ಅಭಿಪ್ರಾಯ. ಮದ್ದಳೆಯ ಮಸಕದ ಕರಡೆಯ ಕಡುಪಿನ ಶಿರುಗಟ್ಟೆಯ ಮದ್ದಳೆಯ ಕರಡೆ ಧ್ವನಿಯೊಳಗೆ (ನೂಪುರ 346) **"ಪದ ಶಂಖದವರ ಕಹಳೆಗಳರವದಿ ಡಿಂಡಿಮರ ವರಗಳಾನು ಕದದವರ ಕರಡೆಗಳರವರ ನಿಸ್ಸಾಳರಮಂ ಭೇದಿರವರ ಮೃದಂಗ ರವಂಗಳ್"** ಎಂಬುದು ಹರಿಹರನ ಉಲ್ಲೇಖ, ಮಧುಕೇಶ್ವರನ ಪೂಜಾ ಸಮಯದಲ್ಲಿ ಕರಡೆಗಳ ವಾದನವಿತ್ತೆಂದು ಚಾಮರಸ (ಪ್ರ.ಲೀ.4–41)ನೂ ಮೆರವಣಿಗೆಯ ಮುಂದಿರುವ ವಾದ್ಯ ಸಮೂಹದಲ್ಲಿ ಕರಡೆಯಿರುತಿತ್ತೆಂದು ಪದ್ಮರಾಜ ಪುರಾಣ (3–53)ವೂ ತಿಳಿಸುತ್ತದೆ.

ಚನ್ನಬಸವ ಪುರಾಣ (5–7) ಸಿಂಗಿರಾಜ ಪುರಾಣ (224) ಸಿದ್ಧರಾಮ ಚರಿತೆ (5–20, 8–65) ಧರ್ಮಾಮೃತ (13–19)ಗಳ ಪುಷ್ಟೀಕರಣ ಇದರೊಂದಿಗೆ "ಗದಾಯುದ್ಧದಲ್ಲಿ" ರನ್ನನು 'ಕರಡೆ'ಯನ್ನು ಉಲ್ಲೇಖಿಸಿರುವು ದರಿಂದ ಆ ಕಾಲಕ್ಕೆ ಕರಡೆ ಒಂದು ಪ್ರಮುಖ ವಾದ್ಯ ವಿಶೇಷವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ.

ಹೀಗೆ ಕರಡೆಯ ಇತಿಹಾಸವು 9ನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ ಎಂದ ಕರ್ನಾಟಕ ಜಾನಪದ ಕಲೆಗಳ ಕೋಶದಲ್ಲಿ ಉಲ್ಲೇಖ ವಿದೆ. ಇತಿಹಾಸ ಮತ್ತಷ್ಟು ಹುಡುಕಿದಾಗ ಕಲಾವಿದ ಶ್ರೀ ವೆಂಕಪ್ಪ ಪುಲಿಯವರ "ಕರಡಿ ವಾದನ ದರ್ಪಣ" ಗ್ರಂಥದಲ್ಲಿ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಚರ್ಮ ವಾದ್ಯಗಳು ಹುಟ್ಟಿ ಬೆಳೆದು ಬಂದಿವೆ. ಅವನದ್ದ ಜಾತಿಯ ಈ ವಾಧ್ಯಗಳನ್ನು ಸ್ವತಃ ಬ್ರಹ್ಮ ದೇವನು ತಯಾರು ಮಾಡಿದ್ದನೆಂದು ಸಂಗೀತ ಶಾಸ್ತ್ರಗಳಲ್ಲಿ ಬಂದಿದೆ. ಚರ್ಮಾಂಬರ ದಾರಿಯಾದ ಶಿವನು ತಿಪುರಾಸುರ ಸಂಹಾರದ ನಂತರ ಮತ್ತು ದಕ್ಷಬ್ರಹ್ಮನ ಸಂಹಾರದ ನಂತರ ಆನಂದದಿಂದ ನೃತ್ಯ ಮಾಡುವಾಗ ನೃತ್ಯದ ಗತಿಗೆ ತಕ್ಕಂಯೆ ತಾಳ ವಾದ್ಯಗಳು ಬ್ರಹ್ಮ ನಿರ್ಮಿತವಾಗಿ ಬೆಳೆದು ಬಂದವು. ಈ ಕರಡೆ ವಾಧ್ಯವು ಕೂಡಾ ಹಾಗೆ ಬೆಳೆದು ಬಂದಿದೆ. ದಕ್ಷ ಬ್ರಹ್ಮನ ಯಾಗದ ಸಂದರ್ಭದಲ್ಲಿ ಪರಶಿವನು ಕಡು ಕೋಪದಿಂದ ಕಣ್ಣುಗಳಲ್ಲಿ ಕಿಡಿಕಾರುತ್ತ ಸಿಡಿಲಿನಂತೆ ಕಡೆ ಕಡೆ ಕಡೆ ಎಂಬ ಶಬ್ಧ ಉದ್ಭವಿಸಿತು. ನಮ್ಮ ಕರಡೆ ಮಜಲಿನ ಕರಡೆಗೆ ಈ "ಕಡ ಕಡ" ಎಂಬುದೆ ಮೊದಲ ಬೋಲು ತಾಂಡವ ನೃತ್ಯದ "ತಾ" ಎಂಬ ಶಬ್ಧವನ್ನು ಕೂಡಿಸಿ "ತಾಕಡ ಕಡ ಕಡ" ಎಂಬ ಬೋಲು ಹುಟ್ಟಿಕೊಂಡಿತು ಎಂದು ಹೇಳುತ್ತಾರೆ.

ಕರಡಿಮಜಲು ಕಲೆಯ ಬಗ್ಗೆ ನಮ್ಮ ಕರಡಿ ಮನೆತನದ ಹಿರಿಯರು "ಸ್ಕಂದ ಪುರಾಣದಲ್ಲಿ ಕರಡಿಮಜಲು ಕಲೆಯ ಉಲ್ಲೇಖವಿದೆ. ಮತ್ತು ಸುರರು, ಅಸುರರ ಮಧ್ಯ ಘೋರ ಯುದ್ಧವಾಯಿತು. ಯುದ್ಧದಲ್ಲಿ ಗಜಾಸುರ ಎಂಬ ರಾಕ್ಷಸನ ಒದೆ (ಸಾವು) ಆಯಿತು. ಗಜಾಸುರನು ಶಿವನ ಭಕ್ತನಾಗಿದ್ದ ಅವನು ಬ್ರಹ್ಮನಲ್ಲಿ ಕೇಳಿಕೊಂಡು ಶಿವನ ಪರಮಭಕ್ತನಾದ ನನಗೆ ನನ್ನ ಮರಣಾನಂತರವು ಶಿವನ ಸೇವೆಗೆ ನನ್ನನ್ನು ಮುಡಿಪಾಗಿಡು ಎಂದನು. ಆದ್ದರಿಂದ ಬ್ರಹ್ಮನು ಗಜಾಸುರ (ಆನೆಯ ಆಕಾರದಲ್ಲಿ ಇದ್ದ ಗಜಾಸುರ) ರಾಕ್ಷಸನಿಂದ ವಾದ್ಯವೊಂದನ್ನು ತಯಾರು ಮಾಡಿದನೆಂದು ಶಿವನು ತ್ರಿಪುರಾಸುರರ ಮತ್ತು ದಕ್ಷಬ್ರಹ್ಮನ ಸಂಹಾರದ ನಂತರ ಆನಂದ ದಿಂದ ನೃತ್ಯ ಮಾಡುವಾಗ ನಂದಿಯು ಈ 'ಕರಟ' ವಾಧ್ಯವನ್ನು ನುಡಿಸಿದ್ದನು. ಬ್ರಹ್ಮ ನಿರ್ಮಿತವಾದ ಈ 'ಕರಟ' ವಾಧ್ಯ ಆನೆಯ(ಗಜಾಸುರ) ಮಸ್ತಕದಿಂದ (ಮುಖ) ತಯಾರು ಮಾಡಿದನೆಂದು ಮಸ್ತಕದ ಒಳಗಿನ ಬುರುಡೆಯನ್ನು ಗೋಲಾಕಾರದ ಪಗಡ (ಮರ)ವಾಗಿ ಆನೆಯ ಎರಡು ಕಿವಿಗಳನ್ನು ಎರಡು ಬದಿಯ ಚರ್ಮವಾಗಿ ಮತ್ತು ಅದರ ಕೋರೆಗಳನ್ನು ನುಡಿಸುವ ಗುನಿ(ಬಡಿಗೆ)ಗಳಾಗಿ ಮಾಡಿದ ಎಂದು ಹೇಳುತ್ತಾರೆ.

ಕರಡಿ ಚರ್ಮವಾದ್ಯ ಅದು ಅನಾದಿ, ಪೌರಾಣಿಕ ಐತಿಹ್ಯಗಳಿಂದ ಸಂಪ್ರದಾಯಿಕ ಅದರವನ್ನು ಪಡೆದುಕೊಂಡು ಬಂದಿದೆ. ಶಬ್ಧ ಕೋಶಗಳಲ್ಲಿ ಕರಟ, ಕರಡಿ ಎಂಬುವುದಕ್ಕೆ ಒಂದು ಬಗೆಯ ತೊಗಲು ವಾದ್ಯ ಎಂಬ ಅರ್ಥವಿದೆ. ನಂತರ ಕರಟ ವಾದ್ಯ ಗ್ರಾಮೀಣರ ಭಾಷೆಯಲ್ಲಿ "ಕರಡಿ ಮಜಲು"ವಾಯಿತು. ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಚರ್ಮ ವಾದ್ಯಗಳು ಹುಟ್ಟಿ ಬೆಳೆದು ಬಂದಿವೆ. ಭಾರತದ ಹಳ್ಳಿ ಹಳ್ಳಿಗಳಲ್ಲಿ ಈ ಕರಡಿಮಜಲು ಕಲೆಗೆ ವಿಶೇಷ ಆಧ್ಯತೆ ಇದೆ. ಸ್ವಂತ ಬ್ರಹ್ಮ ದೇವನು ಸಂಗೀತ ಸಹಾಯಕ್ಕಾಗಿ ಅವನದ್ಧ ವಾದ್ಯಗಳು ಮತ್ತು ವೃಂದವಾದ್ಯಗಳನ್ನು ತಯಾರು ಮಾಡಿದನು. ಅವನದ್ದ ಜಾತಿಯ ಈ ಕರಡಿಮಜಲು ಕಲೆ ಎಂದು ಸಂಗೀತ ಶಾಸ್ತ್ರಗಳಲ್ಲಿ ಬಂದಿದೆ ಎಂದು ಹೇಳುತ್ತಾರೆ. ಈ ಕಲೆಯನ್ನು ಕರಗತ ಮಾಡಿಕೊಳ್ಳಲು ಪುಸ್ತಕ ಮತ್ತು ಅಕ್ಷರಗಳಿಂದ ಸಾಧ್ಯವಿಲ್ಲ. ಈ ಕಲೆಯನ್ನು ಪಂಡಿತರು, ವಿದ್ವಾಂಸರು, ಶಿಷ್ಯ ಪ್ರಶಿಷ್ಯ, ಗುರು–ಶಿಷ್ಯ ಪರಂಪರೆಯಿಂದ ಬಾಯಿಯಿಂದ, ಬಾಯಿಗೆ, ಕೈಯಿಂದ, ಕೈಗೆ ಮಾತ್ರ ಕಲೆಯು ಸಾಧ್ಯ. ಸಂಗೀತದ ಜೊತೆ ಹುಟ್ಟಿದ ಈ "ಕರಡಿಮಜಲು" ಶಾಸ್ತ್ರೀಯ ವಾಗಿದರೂ ಜಾನಪದಕ್ಕೆ ಸೇರಿಸಿದ ಕ್ರಮಕ್ಕೆ ಹಲವಾರು ವಿದ್ವಾಂಸರು ವಿರೋಧ ಮಾಡಿದ್ದರು. ಅವರಲ್ಲಿ ಪ್ರಮುಖರು ಶ್ರೀ ಮಲ್ಲಿಕಾರ್ಜುನ ಮನ್ಸೂರವರು ಈಗಲೂ ನಮ್ಮ ಕರಡಿ ವಾದ್ಯ ಶಾಸ್ತ್ರೀಯ ವಾದ್ಯಗಳಿಗೆ ಬರುವಂತೆ ಶೃತಿ, ರಾಗ, ತಾಳ, ಲಯ, ಭೋಲ ಇವೆಲ್ಲವು ಇರುವುದರಿಂದ ಜಾನಪದಕ್ಕೆ ಸೇರಿಸಿದ ಕ್ರಮವನ್ನು ಪ್ರಬಲವಾಗಿ ವಿರೋಧಿ ಸುತ್ತೇವೆ ಎನ್ನುತ್ತಾರೆ.

ಕರಡಿಮಜಲಿನ ವಾಧ್ಯಗಳು ಮೊದಲು ಕರಡೆ ಡೊಳ್ಳು (ದಿಮ್ಮು), ತಾಳ, ಸಂಭಾಳ, (ಚೌಗಾಡ) ಸೂರ್ಯವಾದ್ಯ, ಚಂದ್ರವಾದ್ಯ, ಶಹನಾಯಿ, ಶೃತಿ ಸೇರಿ 16 ಜನ ಕಲಾವಿದರಿಂದ ಕೂಡಿರುತ್ತಿತ್ತು. ನಂತರ ಸೂರ್ಯ ವಾದ್ಯ, ಚಂದ್ರವಾದ್ಯ, ಸಂಭಾಳ, ಕಲೆ ನಶಿಸುತ್ತಾ ಬಂದಹಾಗೆ ಅದುನಿಕತೆಯ ಬರಾಟೆಯಲ್ಲಿ 8 ರಿಂದ 9 ಜನ ಕಲಾವಿದರಿಗೆ ಸಿಮೀತವಾಗಿದೆ. ಕರಡಿ ಮಜಲಿನ ವೇಷ ಭೂಷಣ ಮೊದಲು ಸರಳವಾಗಿಯೂ ದಿನಾಲೂ ಬಳಸುವ ವಸ್ತ್ರಗಳನ್ನೇ ಸಾಮಾನ್ಯವಾಗಿ ಕಲಾವಿದರು ಬಳಸುತ್ತಿದ್ದರು. ಎಲ್ಲರೂ ಒಂದೇ ತೆರನಾದ ತಲೆಗೆ ರೇಷ್ಮೆಯ ಹಳದಿ ರುಮಾಲು ತಿಳಿ ನಿಲಿ ಹಾಗೂ ಬಿಳಿ, ಉದ್ದಂಗಿ, ಸೊಂಟಕ್ಕೆ ಕೆಂಪು ದಡಿ ವಸ್ತ್ರ ಹಸಿರು ದಡಿಯ ದೋತರ ಇವು ಕಲಾವಿದರ ವೇಷ ಭೂಷಣಗಳಾಗಿದ್ದವು.

ನಂತರ ಈಗ ತಲೆಗೆ ರುಮಾಲು (ಪೇಟ) ನೆಹರೂ ಅಂಗಿ, ಹಸಿರು ದಡಿಯ ದೋತರ, ಸೊಂಟಕ್ಕೆ ಕೆಂಪು ವಸ್ತ್ರ ಹೀಗೆ ಬಗೆ ಬಗೆ ಬಣ್ಣಗಳುಳ್ಳ ವೇಷಭೂಷಣಗಳನ್ನು ಆಧುನಿಕತೆಗೆ ತಕ್ಕಂತೆ ಬಳಸುತ್ತಿದ್ದಾರೆ. ಕರಡಿಮಜಲಿನ ಕುಣಿತ ಮೊದಲು ಮೂರು ವಿಧವಾಗಿ ಹೆಜ್ಜೆಯನ್ನು ಹಾಕುತ್ತಿದ್ದರು. ಎದುರು–ಬದರು, ವೃತ್ತಾಕಾರ, ಅರ್ಧ ಚಂದ್ರಾಕೃತ ಹೆಜ್ಜೆಗಳನ್ನು ಹಾಕುತ್ತಿದ್ದರು. ಈಗ ಆಧುನಿಕತೆಗೆ ತಕ್ಕಂತೆ ಬದಲಾವಣೆಯನ್ನು ಕಂಡುಕೊಂಡಿದ್ದಾರೆ.

## * ಕರಡಿ ಮನೆತನದ ಹುಟ್ಟಿನ ಹಿನ್ನೆಲೆ

ಸುಮಾರು 17ನೆಯ ಶತಮಾನ ಕಿಂತಲೂ ಮೊದಲು "ಜಾಡಗೌಡ್ರು" ಎಂಬ ಮನೆತನದವರು ಬಿಜಾಪುರ ತಾಲೂಕಿನ ಇಂದಿನ ನಿಂಬರಗಿ ಅಥವಾ ಅಂದಿನ ಕೇದರ ಕೆಂಬಾಗಿ ಎಂಬ ಊರಿನಲ್ಲಿ ಇದ್ದರು. ಆ ಮನೆತನದ ಈರಪ್ಪ ಎಂಬವರು ಒಕ್ಕಲುತನ (ಕೃಷಿ) ಮಾಡುತ್ತ ತಮ್ಮನ್ನು ತಾವು ತೊಡಗಿಸಿಕೊಂಡು ಹವ್ಯಾಸಕ್ಕಾಗಿ ಕರಡಿಮಜಲು ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಹಬ್ಬ ಹರಿದಿನ, ಜಾತ್ರೆ, ಮದುವೆ ಮಂಗಳ ಕಾರ್ಯ ಮುಂತಾದ ಶುಭ ಸಂದರ್ಭಗಳಲ್ಲಿ ಕರಡಿಮಜಲು ಕಲೆಯನ್ನು ಪ್ರದರ್ಶಿಸಿ ಸಂಭ್ರಮ ಪಡುತ್ತಿದ್ದರು. ಭಕ್ತಿ, ಶ್ರದ್ಧೆಯಿಂದ ಕರಡಿ ವಾಧ್ಯ ಬಾರಿಸುವುದನ್ನು ಕರಗತ ಮಾಡಿಕೊಂಡು ಮಕ್ಕಳು ಮೊಮ್ಮಕ್ಕಳಿಗೆ ತಮ್ಮ ಕಲೆಯನ್ನು ಧಾರೆ ಏರೆದರು. ಇವರ ನಂತರ ಹತ್ತು ತಲೆಮಾರುಗ ಳವರೆಗೆ ಈರಪ್ಪನವರ ಕಲೆಯನ್ನು ವಂಶ ಪಾರಂಪರಿಕವಾಗಿ ಮುಂದುವರೆಸಿ ಕೊಂಡು ಬಂದರು. ಹೀಗಿರುವಾಗ ಅವರೆಲ್ಲ ಭೀಕರ ಬರಗಾಲಕ್ಕೆ ಬಲಿಯಾ ದವರು, ನಾಲ್ಕಾರು ವರ್ಷ ಮಳೆ ಆಗದೆ ಯಾವುದೇ ಬೆಳೆ ಬೆಳೆಯದೆ ಕಂಗಾಲಾದ ಈ ಮನೆತನದವರು ನಿಂಬರಗಿ ಅಥವಾ ಕೇದರ ಕೆಂಬಾಗಿ ಊರನ್ನು ಬಿಟ್ಟು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಈಗಿನ ಹುಣಶ್ಯಾಳ ಗ್ರಾಮಕ್ಕೆ ವಲಸೆ ಹೋಗಿ ನೆಲೆ ನಿಂತರು. ಈ ಮನೆತನದವರು ನೇಕಾರಿಕೆ ವೃತ್ತಿಯನ್ನು ಆರಂಭಿಸಿ ತಮ್ಮ ನಿತ್ಯ ಜೀವನವನ್ನು ಸಾಗಿಸುತ್ತಾ ವಂಶ ಪಾರಂಪರಿಕವಾಗಿ ಬಂದ ಕರಡಿಮಜಲು ಕಲೆಯನ್ನು ಮುಂದು ವರೆಸಿಕೊಂಡು ಜೀವನ ಸಾಗಿಸುತ್ತಾ ನಡೆದಿದ್ದರು. ಇದೇ ಸಂದರ್ಭದಲ್ಲಿ ಮುಧೋಳ ಆಸ್ಥಾನದ ಮಾಲೋಜಿರಾವ ಘೋರ್ಪಡೆ ಮಹಾರಾಜರು ಇವರ ಕರಡಿ ಮಜಲು ಕಲೆಯನ್ನು ಮೆಚ್ಚಿ ತಮ್ಮ ಆಸ್ಥಾನದ ಕಲಾವಿದರನ್ನಾಗಿ ನೇಮಿಸಿಕೊಂಡಿದ್ದರು.

ಘೋರ್ಪಡೆ ಮಹಾರಾಜರು ತಮ್ಮ ರಾಜ್ಯದರ್ಬಾರು ಪ್ರಾರಂಭಿಸುವ ಪೂರ್ವದಲ್ಲಿ, ಜಾತ್ರೆ ಉತ್ಸವ, ನಡೆಸುವಾಗ ಊರ ಕೋಟೆಯ ಬಾಗಿಲು ತೆರೆಯುವಾಗ ರಾತ್ರಿ ಮುಚ್ಚುವಾಗ ಕರಡಿ ಮೇಳದವರು ಕರಡಿ ನುಡಿಸುವ ಸೇವೆ ಮಾಡುವುದು ಅವರ ನಿತ್ಯ ಕಾಯಕವಾಗಿತ್ತು.

18ನೇ ಶತಮಾನದಲ್ಲಿ ಒಬ್ಬ ಶರಣರು ಸಂಚಾರಾರ್ಥವಾಗಿ ಲೋಕ ಕಲ್ಯಾಣವನ್ನು ಬಯಸಿ ಮುಧೋಳ ತಾಲೂಕಿನ ನರಗಟ್ಟಿ ಗ್ರಾಮಕ್ಕೆ ಬಂದರು. ಅವರು ಥಪಳಾಪೂರದ ಗುರುಲಿಂಗ ಜಗದಾರ್ಯರ ಶಿಷ್ಯರು, ಅರಭಾವಿ ಮಠದ ಶ್ರೀ ದುರದುಂಡೇಶ್ವರರ ಸಹಪಾಠಿಗಳು ಆದ ಶ್ರೀ ಮಹಾಲಿಂಗೇಶ್ವರ ಶಿವಶರಣರು ಗುರುಗಳ ಸಾನಿಧ್ಯದಲ್ಲಿ ಜ್ಞಾನ, ಮೌನ ಇತ್ಯಾದಿಗಳ ಅಭ್ಯಾಸಕ್ರಮ ಮುಗಿದು ಅವರ ಆದೇಶದಂತೆ ವೀರಶೈವ ಧರ್ಮೋಪದೇಶ ನಿಮಿತ್ಯವಾಗಿ ಸಂಚಾರ ಹೊರಡುತ್ತಾರೆ, ಗುರುಗಳ ಅಪ್ಪಣೆಯಾಗಿದೆ, ನಿಲ್ಲುವಂತೆ ಇಲ್ಲ. ನಮ್ಮ ವಾಸ್ತವ್ಯ ಯಾವುದು ಎಂದು ನಿವೇದಿಸಿಕೊಂಡು ಲೋಕ ಸಂಚಾರಾರ್ಥವಾಗಿ ತಿರುಗುತ್ತಾ ಅನಂತನ ಹುಣ್ಣಿಮೆಯ ದಿವಸ ನೀವು ಯಾವ ಜಾಗದಲ್ಲಿರುತ್ತಿರೋ ಅದು ನಿಮ್ಮ ಕರ್ಮಭೂಮಿ, ತಪೋಭೂಮಿ, ಪುಣ್ಯ ಭೂಮಿಯಾಗುತ್ತದೆ ಎಂದು ಆಶೀರ್ವದಿಸಿ ಕಳುಹಿಸಿಕೊಡುತ್ತಾರೆ.

ಶಿಷ್ಯರಿಬ್ಬರು ಕೃಷ್ಣಾ ನದಿಯನ್ನು ದಾಟಬೇಕಿತ್ತು. ರಾತ್ರಿಯಾಗಿದೆ ಭರಪೂರ ತುಂಬಿದ ಕೃಷ್ಣಾ ನದಿಯಲ್ಲಿ ನಾವಿಗರು ನಾವೆಯನ್ನು ನಡೆಸಲು ನಿರಾಕರಿಸುತ್ತಾರೆ. ಈ ರಾತ್ರಿ ಇಲ್ಲಿಯೇ ಇದ್ದರೆ ಬೆಳಿಗ್ಗೆ ನಿಮ್ಮನ್ನು ದಾಟಿಸು ತ್ತೇವೆ ಎನ್ನುತ್ತಾರೆ. ಇಲ್ಲಿ ನಾವು ಈಗಲೇ ಹೋಗಬೇಕು ಎಂದು ಶಿಷ್ಯರಿಬ್ಬರು ಪಟ್ಟು ಹಿಡಿಯುತ್ತಾರೆ. ನಾವಿಗರು ಒಪ್ಪಲೊಲ್ಲರು ಏನು ಮಾಡುವುದು ಎಂದು ಅಲೋಚಿಸಿ ಕೃಷ್ಣೆಯನ್ನೇ ಬೇಡಿಕೊಳ್ಳುತ್ತಾರೆ. ಸಾಧಕರಿಬ್ಬರ ವಿನಂತಿ ಮೇರೆಗೆ ಕೃಷ್ಣೆ ಇಬ್ಭಾಗವಾಗಿ ದಾಟಿ ಈಚೆಗೆ ಬಂದರು. ಇದು ಮಹಾಲಿಂಗೇಶ್ವರರ ಮೊದಲ ಪವಾಡದೆಂತಲೂ ಜನಮನದಲ್ಲಿ ಇಂದಿಗೂ ಉಳಿದಿದೆ. ಅಲ್ಲಿಂದ ಧರ್ಮೋಪದೇಶ ಮಾಡುತ್ತ ಸಂಚರಿಸಿ ನರಗಟ್ಟಿ ಗ್ರಾಮಕ್ಕೆ ಬಂದರು. ನರಗಟ್ಟಿಯಲ್ಲಿ ವಾಸವಾಗಿರುವ ಸಾಧಕಳಾದ ಸಿದ್ಧಾಯಿಯ ಕನಸಿನಲ್ಲಿ ಒಬ್ಬ ಶರಣರು ಬಂದು ನಾನು ನಿಮ್ಮ ಊರಿಗೆ ಬರುತ್ತೇನೆ ನನ್ನನ್ನು ಬರಮಾಡಿಕೊಳ್ಳಿರಿ ಎಂದಂತಾಯಿತು. ಈ ಸಂಗತಿ ಯನ್ನು ಊರ ಹಿರಿಯರಿಗೆ ಹೇಳಿದರೆ ಸಿದ್ಧಾಯಿಯ ಮಾತನ್ನು ಉಪೇಕ್ಷೆ ಮಾಡಿದರು. ಆದರೆ ಸಿದ್ಧಾಯಿಯ ಕನಸು ಸುಳ್ಳಾಗಲಿಲ್ಲ.

ಅನಂತನ ಹುಣ್ಣಿಮೆಯಂದು ಸಾಯಂಕಾಲ ಹೊತ್ತು ಮುಳುಗಿದ ಸಂದರ್ಭದಲ್ಲಿ ಸ್ವಾಮಿಯೊಬ್ಬರು ಬಂದು ನಿಂತಿರುವ ಸುದ್ಧಿ ಊರಲ್ಲಿ ಗೊತ್ತಾಗುತ್ತದೆ. ಎಚ್ಚೆತ್ತ ಜನತೆ ಭಯ, ಭಕ್ತಿ ಮತ್ತು ಸಡಗರದಿಂದ ಆ ಸ್ವಾಮಿಗಳನ್ನು ಮೆರೆವಣಿಗೆಯ ಮೂಲಕ ಊರಿಗೆ ಕರೆದುಕೊಂಡು ಬಂದರು. ಅವರು ತಂಗಿದ್ದ ಸ್ಥಾನವು ಇವತ್ತಿಗೂ ಪಾದಗಟ್ಟಿಯಂದೂ ಕೆರೆಸಿಕೊಳ್ಳುತ್ತದೆ. ಊರಿಗೆ ಬಂದ ಶಿವಯೋಗಿಗಳು ಧ್ಯಾನ–ಮೌನ, ಜಪ–ತಪಗಳನ್ನು ಮಾಡಲು ನನಗೆ ನಿರ್ಜನ ಪ್ರದೇಶ ಬೇಕು ಎಂದು ಕೇಳಿದರು. ಆಗ ಊರ ಹಿರಿಯರು ಇಂದಿನ "ಚನ್ನಗಿರಿ"ಯನ್ನು ತೋರಿಸಿದರು. ಆಗ ಅದು ದಟ್ಟಕಾಡಿನಿಂದ ತುಂಬಿತ್ತು. ಜನ ಸಂಪರ್ಕವಿದ್ದಿದಿಲ್ಲ, ಅಲ್ಲಿ ತಪೋನಿರತರಾದರು. ಅತ್ತ ದುರದುಂಡೇಶ್ವರರು ಅರಬಾವಿ ಮಠಕ್ಕೆ ಸ್ವಾಮಿಗಳಾಗಿ ಲೋಕಕಲ್ಯಾಣ ಕೈಕೊಂಡರು.

ಶ್ರೀ ಮಹಾಲಿಂಗೇಶ್ವರರು ಚನ್ನಗಿರಿಯಲ್ಲಿ ತಪೋನಿರತರಾದ ಕೆಲವು ದಿವಸಗಳಲ್ಲಿ ಒಂದು ಕನಸು ಕಂಡರು. ಆ ಕನಸು ಏನೆಂದರೆ, ಇಲ್ಲಗೆ ಸಮೀಪದಲ್ಲಿ ರಜತಪೂರದ (ಶಾಸನದಲ್ಲಿ ಈ ಹೆಸರು ಉಲ್ಲೇಕವಿದೆ) ನದಿಯ ದಂಡೆಗೆ ಒಂದು ಲಿಂಗವಿದೆ. ಅದರ ಹಿಂದೆ ಬಿಳಿಯ ಈಶ್ವರ ಮೂರ್ತಿ ಇದ್ದ ಕುರುಹು ಇದೆ, ಅದನ್ನು ತಂದು ಇಲ್ಲಿ ಸ್ಥಾಪನಾ ಮಾಡಿರಿ ಎಂದು ಹೇಳಿದಂತಾಯಿತು. ಈ ಸಂಗತಿಯನ್ನು ಊರ ಹಿರಿಯರಿಗೆ ಹೇಳಲಾಗಿ ಸ್ವಾಮಿಗಳ ಸಮೇತ ಆ ಸ್ಥಳಕ್ಕೆ ಹೋಗುತ್ತಾರೆ. ಆದರೆ ನದಿಯ ದಂಡೆ ಈಶ್ವರಲಿಂಗ ಇದ್ದ ಕುರುಹು ಸಿಗಲಿಲ್ಲ. ನಾವು ಅಲ್ಪರು ನಿನ್ನನ್ನು ಪತ್ತೆ ಹಚ್ಚುವುದು ನಮಗೆ ಸಾಧ್ಯವಾಗುವುದಿಲ್ಲ, ಆದ್ದರಿಂದ ನಿನ್ನಲ್ಲಿ ಸತ್ವವಿದ್ದರೆ ನೀನೆ ನಿನ್ನ ಕುರುಹು ತೋರು ಎಂಬುದು ಭಕ್ತರ ಸಂಕಲ್ಪ. ಆಗ ತಕ್ಷಣ ಒಂದೆಡೆ ನೆಲ ಅದುರಿತಂತೆ ಅಲ್ಲಿ ಅಗಿಯುತ್ತಾರೆ. ಮಹಾಲಿಂಗೇಶ್ವರರು ಕಂಡ ಕನಸಿನಂತೆ ಅಚ್ಚ ಬಿಳಿಯ ಶಿವಲಿಂಗವಿದ್ದುದು ಗೊತ್ತಾಗುತ್ತದೆ. ಆದ್ದರಿಂದ ಧವಳೇಶ್ವರ ಎಂಬ ಪ್ರತಿತಿಯೂ ಬಂದಿದೆ. ಇನ್ನು ಆ ಲಿಂಗವನ್ನು ನರಗಟ್ಟಿಗೆ ತರುವುದು ಹೇಗೆ ? ಹೆದರಿದ ಹಿರಿಯರು ನಿನ್ನಲ್ಲಿ ಶಕ್ತಿ ಇದ್ದರೆ ನೀನೆ ಬಾ ಎಂದು ಬೇಡಿಕೊಂಡರು. ಆಗ ಆ ಲಿಂಗವು ತಾನೆ ನರಗಟ್ಟಿಗೆ ಬಂದಿತು. ಶ್ರೀ ಮಹಾಲಿಂಗೇಶ್ವರರು ಚನ್ನಗಿರಿಯಲ್ಲಿ ಸ್ಥಾಪಿಸಿದರು. ಅಲ್ಲಿಂದ ಚನ್ನಗಿರೇಶ್ವರ ಮಹಾಸ್ವಾಮಿಗಳ ಮಠವೆಂದು ಹೆಸರಾಯಿತು. ಮಹಾಲಿಂಗಪೂರದ ಜನಮನದಲ್ಲಿ ಅವಿಸ್ಮರಣೀಯವಾಗಿ ಬೆರೆತುಕೊಂಡಿತು ಎಂದು ಇತಿಹಾಸ ಸಂಗತಿಗಳಿಂದ ತಿಳಿದು ಬರುತ್ತದೆ.

ಶ್ರೀ ಮಹಾಲಿಂಗೇಶ್ವರರು ಜೀವಿಸಿದ್ದ ಕಾಲದಲ್ಲಿ ಮುಧೋಳದ ಆಸ್ತಾನವನ್ನು ಆಳುತ್ತಿದ್ದ ಮಾಲೋಜಿರಾವ್ ಘೋರ್ಪಡೆ ರಾಜನು ಕ್ರಿ.ಶ. 1770 ರಿಂದ 1805 ರವರೆಗೆ ಜೀವಿಸಿದ್ದನೆಂದು ತಿಳಿದು ಬರುತ್ತದೆ. ಮುಧೋಳದ ಮಾಲೋಜಿರಾವ್ ಘೋರ್ಪಡೆ ಮಹಾರಾಜರು ವಿಷ್ಣು ಭಕ್ತರಾಗಿದ್ದರು. ವೀರಶೈವ ಧರ್ಮದ ಬಗ್ಗೆ ಸಂಪ್ರೀತಿಯನ್ನು ತೆಳೆದಿದ್ದರು. ಅವರು ಮಹಾಲಿಂಗೇಶ್ವರರ ಮಹಿಮೆಯನ್ನು ಕೇಳಿ ದರ್ಶನಕ್ಕಾಗಿ ಬಂದರು, ಮಹಾರಾಜರು ಆನೆಯ ಮೇಲೆ ಅಂಬಾರಿ ಕಟ್ಟಿ ಸಕಲ ವೈಭವಗಳೊಂದಿಗೆ ನರಗಟ್ಟಿ ಗ್ರಾಮದ ಸೀಮೆಗೆ ಬಂದರು. ಅಂಬಾರಿಯಿಂದ ಇಳಿದು ಕಾಲುನಡಿಗೆಯಿಂದಲೇ ಶ್ರೀಗಳ ದರ್ಶನಕ್ಕೆ ಅಣಿಯಾದರು. ಆದರೆ ಆನೆ ಅಂಬಾರಿ ಇತ್ಯಾದಿ ಸಡಗರ ನೋಡಲಿಕ್ಕೆ ಜನಸಾಮಾನ್ಯರು ಕಿಕ್ಕಿರಿದಿದ್ದರು. ಈ ಗಲಾಟೆಯಲ್ಲಿ “ಮಹಾಲಿಂಗ” ಎಂಬ ಬಾಲಕನನ್ನು ಆನೆ ತನ್ನ ಸೊಂಡಿಲಿನಿಂದ ಬಡಿಯಿತು. ಮಗು ಸತ್ತು ಹೋಯಿತು. ನಾ ಬಂದ ನೆಪದಲ್ಲಿ ಶಿಶುಹತ್ಯೆ ಆಯಿತಲ್ಲ ಎಂದು ಪರಿತಪಿಸುತ್ತ ಇದರ ಪಾಪ ಪರಿಹಾರಕ್ಕಾಗಿ ಮಹಾಸ್ವಾಮಿಗಳಲ್ಲಿ ಕ್ಷಮೆಯಾಚಿಸಿದರು. ಆತನ ವಿನಯತೆಗೆ ಮೆಚ್ಚಿದ ಶ್ರೀ ಮಹಾಲಿಂಗೇಶ್ವರರು ಬಾಲಕನಿಗೆ ವಿಭೂತಿ ಹಚ್ಚಿ ಪುನರ್‌ಜನ್ಮ ನೀಡಿದರು. ಇದರಿಂದ ನನ್ನ ಪಾಪ ಪರಿಹಾರವಾಯಿತು ಎಂದು ಖುಷಿ ಗೊಂಡು ನರಗಟ್ಟಿ ಗ್ರಾಮವನ್ನು ಉಂಬಳಿಯಾಗಿ ಕೊಡುತ್ತಾನೆ.

ನರಗಟ್ಟಿಯ ಅಷ್ಟದಿಕ್ಕು ಗಳಲ್ಲಿ ಅಷ್ಟಲಿಂಗವನ್ನು ಸ್ಥಾಪಿಸಿದರು. ಈ ಸೀಮೆಯಲ್ಲಿ ಸಿಕ್ಕ ಅಪರಾಧಿಗಳನ್ನು ಶಿಕ್ಷಿಸುವ ಅಧಿಕಾರ ನನಗೂ ಇಲ್ಲ ಎಂಬಂತೆ ತಾಮ್ರ ಪಟದ (ಶಾಸನ) ವೊಂದನ್ನು ಬರೆಸಿದನು. ಮಹಾಲಿಂಗೇಶ್ವರನಿಗೆ ಉಂಬಳಿಯಾಗಿ ಬಂದ ನರಗಟ್ಟಿ ಗ್ರಾಮವೇ ಇಂದು ಮಹಾಲಿಂಗಪೂರ ಎಂಬ ಹೊಸ ಅಭಿದಾನದಲ್ಲಿ ಕರೆಸಿಕೊಂಡ ಪುಣ್ಯ ಕ್ಷೇತ್ರ ವಾಯಿತು. ನಂತರ ಜಾಡಗೌಡ ಮನೆತನದ ಕರಡಿ ಮೇಳವನ್ನು ಶ್ರೀ ಮಹಾಲಿಂಗೇಶ್ವರರ ಸೇವೆಗಾಗಿ ಮಾಲೋಜಿರಾವ್ ಘೋರ್ಪಡೆ ಮಹಾರಾಜರು ನೇಮಿಸಿದ್ದರು.

ಹುಣಶ್ಯಾಳ ಗ್ರಾಮದಿಂದ ಮಹಾಲಿಂಗಪೂರಕ್ಕೆ ಬಂದು ಸೇವೆಮಾಡಿ ಬಂದು ಹೋಗಿ ಮಾಡುತ್ತಿದ್ದರು. ಪ್ರತಿ ಸೋಮವಾರ ನೇಮ, ನಿಷ್ಠೆ, ಭಕ್ತಿಯಿಂದ ಸೇವೆ ಮಾಡ ತೊಡಗಿದರು. ಶ್ರೀ ಮಹಾಲಿಂಗೇಶ್ವರರ ಸೇವೆಯು 22 ನಾದಗಳಿಂದ ನಡೆಯುತ್ತಿತ್ತೆಂದು ಅವರ ಬಹುಪರಾಕಗಳಿಂದ ತಿಳಿದು ಬರುತ್ತದೆ.

1) ಎಂಟು ದಿಕ್ಕಿಗೆ ಶ್ರೇಷ್ಠ ಮಹಾಲಿಂಗ ಸ್ವಾಮಿಗಳು
ಅವರ ಅಷ್ಟೈಶ್ವರ್ಯ ಎಷ್ಟೇ ಹೇಳಿದರೂ ತೀರದು
ಬಿಚ್ಚಿಟ್ಟು ಹೇಳುವೇನು ಚಿತ್ತಗೊಟ್ಟು ಕೇಳಿರಿ
ಅಶ್ವ, ಛತ್ತರಿಗೆ, ಅಡ್ಡಪಲ್ಲಕ್ಕಿ, ಆಪ್ತಗಿರಿ, ವಿಳೆನಿಶಾನೆ,
ಮಾಯಿನಮರ, ತೊಪ್ಪ ತಳಿರು, ತೋರಣ, ವ್ಯಾಸನ ತೋಳ,
ಕರಡಿ, ಕೈತಾಳ, ಪಾತರದ ಮ್ಯಾಳ, ಹೆಗ್ಗಾಳಿ, ಬಿರುಗಾಳಿ,
ಸೂರ್ಯ, ಚಂದ್ರರ ಗಾಳಿ, ಛತ್ರ, ಚಾಮರದಗಾಳಿ,
ಘಂಟಿ–ಜಾಂಗುಟಿ, ನಗರಿ–ನೌಬತ್ತು, ತಂತಿ ತಂಬೂರಿ,
ಮುದ್ದಳೆ–ಮೃದಂಗನಾದ, ಬಿಚ್ಚುಗತ್ತಿಯ ಪಾರಾ
ಬಂದೂಕದ ಭಾರಾ ಇರಿತೀ ಇಪ್ಪತ್ತೇರಡು ನಾದಗಳ
ಘೋರ ರಮಣ ಮುರುಘೇಂದ್ರ ಜಗದ್ಗುರು
ಮಹಾಲಿಂಗ ಪಾಶ್ಚಾಯೋಗಿನಾಂ ಬಹುಪರಾಕ್

2) ನಗಾರಿ, ನವಜತ್ತು, ಭಜನಾ, ಕೀಲಲಾ
ವಾಲಗ, ಭಜಂತ್ರಿ, ಕರಡಿ, ಸಂಬಾಳ
ಭೇರಿ, ತಮ್ಮಟೆ, ವಾದ್ಯಗಳ ಸಮೇತ
ಸಡಗೆದಿಂದ ಬಿಜಯಂಗೈಸುವ ನಮ್ಮ ಶಿವಯೋಗಿ
ಶ್ರೀಗುರು ಮಹಾಲಿಂಗ ಪಾಶ್ಚಾಯೋಗಿನಾಂ ಬಹುಪರಾಕ್

ಎಂದು ಭಕ್ತರು ಈಗಲು ಹಾಡುವುದರಿಂದ ತಿಳಿದು ಬರುತ್ತದೆ. ಮುಂದೆ ಇವರು ಹುಣಶ್ಯಾಳ ಗ್ರಾಮ ಬಿಟ್ಟು ಶ್ರೀ ಮಹಾಲಿಂಗೇಶ್ವರರ ಸೇವೆಗಾಗಿ ಮಹಾಲಿಂಗಪೂರ ಗ್ರಾಮದಲ್ಲಿ ಬಂದು ನೆಲೆಸುತ್ತಾರೆ. ಸ್ವತಹ ಮಹರಾಜರೇ ಇವರಿಗೆ ಇರಲು ಮನೆಯೊಂದನ್ನು ನಿರ್ಮಿಸಿಕೊಡುತ್ತಾರೆ. ಮಹಾಲಿಂಗಪೂರದಲ್ಲಿ ಇವರ ಮನೆತನದ ಹೆಸರು ಹುಣಶ್ಯಾಳದಿಂದ ಬಂದವರಾಗಿದ್ದರಿಂದ ಹುಣಶ್ಯಾಳಗೋಳ ಅಂತ ಜನರು ಕರೆಯ ತೊಡ ಗುತ್ತಾರೆ. ಹುಣಶ್ಯಾಳ ಮನೆತನದವರು ಚಾಚು ತಪ್ಪದೆ ನಿತ್ಯ ಶ್ರದ್ಧೆ, ಭಕ್ತಿಯಿಂದ ಶ್ರೀ ಮಹಾಲಿಂಗೇಶ್ವರರ ಕರಡಿಮಜಲು ಕಲಾಸೇವೆಯನ್ನು ಮುಂದುವರೆಸಿ ಕೊಂಡು ಹೋಗುತ್ತಾರೆ.

ಹೇಳವರು ದಾಖಲೆಯಿಂದ ಕರಡಿಮನೆತನದ ವಂಶಾವಳಿಯನ್ನು ಹೀಗೆ ಉಲ್ಲೇಖಿಸಿದ್ದಾರೆ.

**ಈ ವಂಶಾವಳಿಯಲ್ಲಿ ಈರಪ್ಪ, ಮಹಾಲಿಂಗಪ್ಪ, ಚನ್ನಪ್ಪ, ವೀರಭದ್ರಪ್ಪ, ರುದ್ರಪ್ಪ ಮತ್ತು ಮಡಿವಾಳಪ್ಪ ಎಂಬ ಹೆಸರುಗಳು ಮತ್ತೆ ಮತ್ತೆ ಕಾಣಿಸಿ ಕೊಳುತ್ತವೆ. ಸಮಕಾಲೀನರಲ್ಲಿ ಕಲೆಯಲ್ಲಿ ಒಳ್ಳೆಯ ಪ್ರಚಾರ-ಪ್ರಸಿಧ್ಧಿಯನ್ನು ಪಡೆದಿದರಿಂದ ಹೆಸರಿನಲ್ಲಿ ಪುನರಾವರ್ತನೆ ಪಡೆದಿದ್ದಾರೆ.**

ನರಗಟ್ಟಿ ಗ್ರಾಮ ಶ್ರೀ ಮಹಾಲಿಂಗೇಶ್ವರರ ದಿವ್ಯ ಕರುಣೆ ಹಾಗೂ ಅವರ ಪಾದ ಸ್ಪರ್ಶದಿಂದ ಮಹಾಲಿಂಗಪುರವಾಗಿ ಇದೊಂದು ಜಾಗೃತ ಸ್ಥಳವೆಂದು ಖ್ಯಾತಿ ಪಡೆಯಿತು. ಶ್ರೀ ಮಹಾಲಿಂಗೇಶ್ವರರು ಹಲವಾರು ಪವಾಡಗಳನ್ನು ಮಾಡಿ ಭಕ್ತಿ ನಿಷ್ಠೆಯಿಂದ ಸೇವೆ ಮಾಡುತ್ತಿದ್ದ ಹುಣಶ್ಯಾಳ ಮನೆತನದ ಕಲಾವಿದರಿಗೆ ಕರಡಿ ವಾಧ್ಯವನ್ನು ತಮ್ಮ ಮಠದಲ್ಲಿ ಕೊಟ್ಟು ಇಲ್ಲಿಯ ತನಕ ನಿವು ನಮಗೆ ಬಹಳ ನಿಷ್ಠೆಯಿಂದ ಸೇವೆ ಮಾಡಿದಿರಿ ಮುಂದೆಯು ಇದೆ ರೀತಿ ತಪ್ಪದೇ ತಮ್ಮ ಕಲಾಸೇವೆ ಮಾಡಿಕೊಂಡು ಹೋಗಿ ಮತ್ತು ಇಂದಿನಿಂದ ನಿಮ್ಮ ಮನೆತನದ ಹೆಸರು ಕರಡಿ ಮನೆತನ ಎಂದು ಪ್ರಚಲಿತವಾಗಲಿ ಮಹಾಲಿಂಗಪೂರದ ಕರಡಿ ಮಜಲು ಜಗತ್ಪ್ರಸಿದ್ಧ ವಾಗಲಿ ಎಂದು ಆಶೀರ್ವಧಿಸಿದರು. ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಕರಡಿ ಮನೆತನದವರು ಶ್ರೀ ಮಹಾಲಿಂಗೇಶ್ವರರ ಕಲಾ ಸೇವೆಯನ್ನು (ಕರಡಿ ನುಡಿಸುವ) ನಡೆಸಿಕೊಂಡು ಬಂದಿರುವರು ಮತ್ತು ಶ್ರೀ ಮಹಾಲಿಂಗೇಶ್ವರರು ಕೊಟ್ಟ ಕರಡಿವಾಧ್ಯವನ್ನು ಇಂದಿಗೂ ಉಳಿಸಿ ಕೊಂಡು ಮನೆಯ ದೇವರಂತೆ ನಿತ್ಯ ಪೂಜಿಸುತ್ತಾ ಶ್ರೀ ಮಹಾಲಿಂಗೇಶ್ವರರ ಕಲಾಸೇವೆಗೆ ಬಳಸುತ್ತಿರುವರು. ಶ್ರೀ ಮಹಾಲಿಂಗೇಶ್ವರರ ಆಶೀರ್ವಾದದಂತೆ ಮಹಾಲಿಂಗಪೂರದ ಕರಡಿಮಜಲು ಕಲೆ ಜಗತ್ಪ್ರಸಿದ್ಧವಾಗಿದೆ ಎಂದು ಮಹಾಲಿಂಗೇಶ್ವರನನ್ನು ನೆನೆಯುತ್ತಾರೆ.

**ಕರಡಿ ವಾದ್ಯ ನುಡಿಸಿ ಆನೆಯ ಮದವನ್ನು ಇಳಿಸಿದ್ದು :**

ಪ್ರತಿ ವರ್ಷ ಭಾದ್ರಪದ ಮಾಸದ ಅನಂತನ ಹುಣ್ಣಿಮೆಯ ದಿನದಂದು ಮಹಾಲಿಂಗ ಮುನಿನಾಥ ಶಿವಯೋಗಿ ಶ್ರೀ ಮಹಾಲಿಂಗೇಶ್ವರರ ಜಾತ್ರೆಯ ಸಂಭ್ರಮ ಸಡಗರದಿಂದ ನಡೆದು ಬಂದಿರುತ್ತಿತ್ತು. ಮುಧೋಳ ಆಸ್ಥಾನದ ಮಾಲೋಜಿರಾವ್ ಘೋರ್ಪಡೆ ಮಹಾರಾಜರು ಪ್ರತಿ ವರ್ಷ ಭಯ, ಭಕ್ತಿಯಿಂದ, ಚತುರಂಗ ಸೇನೆಯೊಂದಿಗೆ ಆನೆಯೇರಿ ಶ್ರೀ ಮಹಾಲಿಂಗೇಶ್ವರ ಜಾತ್ರೆಯ ಮೊದಲ ದಿನದಂದು ಬರುತ್ತಿದ್ದರು. ಹೀಗಿರಲು ಅದೊಂದು ವರ್ಷ ಅಪಾರ ಜನಜಂಗುಳಿಯ ಜನರ ಗುಂಪು ಗದ್ದಲ ಕಂಡು ಆನೆಯು ಅಶಾಂತವಾಗಿ ಮದವೇರಿ ಹುಚ್ಚೆದ್ದು ಅತ್ತಿತ್ತ ಓಡಾಡ

ತೊಡಗಿತ್ತು. ಕೂಡಿದ ಜನ ಗಾಬರಿಯಾಗಿ ದಿಕ್ಕು ತಪ್ಪಿ ಓಡಿ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳ ತೊಡಗಿದರು.

ಕೆಲ ಜನರು ಆನೆಯ ಕಾಲುತುಳಿತಕ್ಕೆ ಸಿಲುಕಿ ಗಾಯಗೊಂಡರು. ಮದವೇರಿದ ಆನೆ ತನ್ನ ಸೊಂಡಲಿನಿಂದ ಜನರನ್ನು ಹೊಡೆದು ಗಾಯಗೊಳಿಸತೊಡಗಿತು. ಪ್ರಜೆಗಳ ಕೂಗಾಟ, ಚೀರಾಟ, ರೋದನ ಗಾಬರಿಕಂಡು ಮಾಲೋಜ ಅರಸರು ಕಂಗಾಲಾದರು. ಮಾವುತರು ಅಂಕುಶದಿಂದ ತಿವಿದು ಆನೆಯ ಮದವಿಳಿಸಲು ಹರಸಾಹಸ ಮಾಡಿದರು ಏನೂ ಪ್ರಯೋಜನ ವಾಗಲಿಲ್ಲ. ಆಗ ಮಾಲೋಜಿ ಮಹಾರಾಜರು ಅದ್ಭುತ ಲೀಲೆಗಳನ್ನು ಮರೆದು ಭಕ್ತರು ಕಷ್ಟನಿವಾರಿಸುತ್ತಿದ್ದ ಶ್ರೀ ಮಹಾಲಿಂಗೇಶ್ವರರ ಶ್ರೀ ಚರಣಗಳ ಮೇಲೆ ಸಾಷ್ಟಾಂಗವೆರಗಿ "ಸದ್ಗುರುಗಳೇ, ಮದವೇರಿದ ಆನೆಯಿಂದ ಪ್ರಜೆಗಳನ್ನು ರಕ್ಷಿಸಿ, ನನ್ನ ಮರ್ಯಾದೆ ಕಾಪಾಡಿ, ಮಾನ ಉಳಿಸಿ" ಎಂದು ಅನನ್ಯ ಭಕ್ತಿಪರವಶವಾಗಿ ಪರಿತಪಿಸುತ್ತ ಕೇಳಿಕೊಂಡರು. ಆನೆಯು ಬೀದಿಯಲ್ಲಿ ಓಡುತ್ತ ಓಡುತ್ತ ಮೊದಲನೆಯ ವೀರಭದ್ರಪ್ಪ ಕರಡಿ ಅವರು ತಮ್ಮ ಜೊತೆಗಾರರೊಂದಿಗೆ ಕರಡಿವಾದನ ಮಾಡುವಲ್ಲಿಗೆ ಹೋಗಿ ಶಾಂತ ವಾಗಿ ನಿಂತಿತು. ಕರಡಿವಾದನ ನಾದಲಿಲೆಯಲ್ಲಿ ಮೈಮರೇತು ಕೇಳುವಂತೆ ಸುಮ್ಮನೆ ನಿಂತಿದ್ದನು ಕಣ್ಣಾರೆ ಕಂಡ ರಾಜನಿಗೆ ಅಚ್ಚರಿಯಾಯಿತು! ತನ್ನ ಕಣ್ಣುಗಳನ್ನು ತಾನೇ ನಂಬದಾದನು ನೋಡುತ್ತಿರುವುದು ಕನಸೋ ತಿಳಿಯ ದಂತಾಯಿತು. ಹುಚ್ಚೆದ್ದು ಓಡಾಡಿ ಗಾಬರಿಗೊಳಿಸಿದ್ದ ಮದವೇರಿದ ಆನೆ ಶಾಂತವಾಗಿ ನಿಂತಿರುವುದು ಜನರಿಗೆ ಅದ್ಭುತ ಪವಾಡವೇ ಎನಿಸಿತು.

ನಂತರ ಮಾಲೋಜಿರಾಜನು ಕರಡಿ ವೀರಭದ್ರಪ್ಪನವರ ಬಳಿ ಬಂದರು. ಅವರನ್ನು ಕುರಿತು "ಶ್ರೀ ಮಹಾಲಿಂಗೇಶ್ವರರೇ ನಿಮ್ಮ ಅದ್ಭುತ ಕರಡಿವಾದನದ ನಾದ ಮಾಧುರ್ಯದಲ್ಲಿ ಬಂದು ಮದವೇರಿದ ಆನೆಯ ಅಭದ್ರರೂಪವನ್ನು ತೊಲಗಿಸಿ ಶಾಂತ ಸುಭದ್ರರೂಪದಲ್ಲಿ ಪ್ರತ್ಯಕ್ಷವಾದರು" ಎಂದು ಹೊಗಳಿದರು. ಮೆಚ್ಚಿಗೆಯಿಂದ ತಮ್ಮ ಕೈಯಲ್ಲಿ ತೊಟ್ಟ ಬೆಳ್ಳಿಯ ಕೈಗಡವನ್ನು ಸಂಪ್ರೀತಿಯಿಂದ ವೀರಭದ್ರಪ್ಪನವರಿಗೆ ತೊಡಸಿದರು. ಅಷ್ಟಕ್ಕೆ ತೃಪ್ತರಾಗದ ರಾಜರು ತಮ್ಮ ಕರಡಿವಾದನ ಕಲೆಯ ಮೂಲಕ ಆನೆಯ ಮದವನ್ನು ಇಳಿಸಿದ ವೀರಭದ್ರಪ್ಪನವರ ಇನ್ನೊಂದು ಕೈಗೂ ತಮ್ಮ ಕೈಕಡಗ ತೊಡಿಸಲು ಮುಂದಾದರು. ಅಷ್ಟರಲ್ಲಿ ವೀರಕಹಳೆಯನ್ನು ಆನಂದಾಅತಿರೇಕದಲ್ಲಿ ಕೇಳುಗರ ಉತ್ಸಾಹ ಇಮ್ಮಡಿಗೊಳ್ಳುವಂತೆ ಊದುತ್ತಿ

ರುವ ಕಹಳೆ ಊದುವ ಪರಿಯನ್ನು ಕಂಡ ವೀರಭದ್ರಪ್ಪನ್ನವರು ಮಹಾರಾಜರನ್ನು ಕುರಿತು "ಆ ಕಿಮ್ಮತ್ತಿನ ಕೈಗಡಗ ತನಗೂ ಬೇಕೆಂಬಾಸೆ ಯಿಂದ ಆತ ಊದುವಂತೆ ನನಗೆ ಅನಿಸುತ್ತಿದೆ." ಅವನು ನನ್ನಂತೆ ಒಬ್ಬ ಕಲಾಕಾರ ದಯವಿಟ್ಟು ಅವನಿಗೆ ತೊಡಿಸಿ ನನ್ನಾಸೆ ಪೂರೈಸಿ ಆದ್ದರಿಂದ ಅವನಿಗೂ ತೃಪ್ತಿ ಆಗುತ್ತದೆ. ಏಕಕಾಲಕ್ಕೆ ಇಬ್ಬರಿಗೂ ಆನಂದವಾಗುತ್ತದೆ" ಎಂದು ಬೇಡಿ ಕೊಂಡರು. ವೀರಭದ್ರಪ್ಪನವರ ಉದಾರ ಕಲಾಪ್ರೇಮವನ್ನು ಮನ್ನಿಸಿ ಕಹಳೆ (ಕಾಳಿ) ಊದುವವನ ಕೈಗೆ ಇನ್ನೊಂದು ಕಡಗ ತೊಡಿಸಿ ದರು. ವೀರಭದ್ರಪ್ಪನವರಿಗೆ ತೊಡಿಸಿದ ಕಡಗ ಇನ್ನೂ ಕರಡಿಯವರ ಮನೆಯಲ್ಲಿದ್ದು ಪೂಜೆಗೊಳ್ಳುತ್ತದೆ.

**ಪ್ಲೇಗ್ ಮಹಾಮಾರಿ ಪವಾಡ :**

ಸುಮಾರು ಕ್ರಿ.ಶ. 1910–1915 ರಲ್ಲಿ ಕೊನೆಯ ಸೆಜ್ಜಿಬರಾ ಡೋಗಿಬರಾ ಬಂದಿತ್ತು. ತಿನ್ನಲು ಜೋಳ ಗೋಧಿಯಂತೂ ಮಳೆ ಇಲ್ಲದೆ ಬೆಳೆದಿರಲಿಲ್ಲ. ಕಡಿಮೆ ಮಳೆಯಲ್ಲೂ ಬೆಳೆಯಬಹುದಾದ ಸಜ್ಜಿ ಬೆಳೆಯೂ ಬರಲಿಲ್ಲ. ಹೊಟ್ಟೆಗಿಲ್ಲದೆ ಹಸಿವಿನ ಬೇಗೆ ಸಹಿಸದೆ ಕಂಗಾಲದ ನಿತ್ರಾಣರಾಗಿ ಜನರು ಬಹು ಸಂಖ್ಯೆಯಲ್ಲಿ ಸಾಯತೊಡಗಿದರು. ಒಂದೇ ಮನೆಯಲ್ಲಿಯ ಜನರು ಸಾಯುವುದು ಸರ್ವೆ ಸಾಮಾನ್ಯವಾಗಿತ್ತು. ಹೀಗೆ ಸಾಯಲಾರದೇ ಬದುಕುಳಿದವರು ಸತ್ತವರ ಶವ ಸಂಸ್ಕಾರ ಮಾಡಿ ಬರುವುದೇ ದಿನ ನಿತ್ಯದ ಕಾಯಕವಾಗಿತ್ತು. ದಿನಾಲೂ ಹತ್ತಾರು ಜನರು ಸಾಯುವುದು ಸಹಜವಾಗಿತ್ತು. ಹೀಗಾಗಿ ಎಲ್ಲಿನೋಡಿದಲ್ಲಿ ಸತ್ತವರ ಆಸ್ಥಿಪಂಜರ ಮತ್ತು ಎಲುಬುಗಳನ್ನು ಗೋರಿಗಳಿಂದ ಹೊರತೆಗೆದು ಬೀಸಾಕುವುದು ಸತ್ತವರ ಶವಗಳನ್ನು ಹೂಳುವುದು ರೂಢಿಯಾಗಿತ್ತು. ಪರಿಣಾಮವಾಗಿ ಎಲ್ಲಿ ನೋಡಿದಲ್ಲಿ ಬೀಸಾಕಿದ ಆಸ್ಥಿಪಂಜರ ತಲೆಬುರುಡೆ ಗಳು ಕಾಣುತ್ತಿದ್ದವು. ಇದು ಡೋಂಗಿ ಬರವೆಂದು ಅಂದು ಪ್ರಸಿದ್ಧವಾಗಿತ್ತು.

ಇದೇ ರೀತಿ ಪ್ಲೇಗ್ ಮಹಾಮಾರಿಗೆ ಪ್ರಪಂಚ ಪರಿಪರಿಯ ಬವಣೆಗೆ ಸಿಲುಕಿ ಪಡಬಾರದ ಕಷ್ಟ ಅನುಭವಿಸಿತ್ತು. ಮಹಾಲಿಂಗಪುರದಲ್ಲಿ ಪ್ಲೇಗ್‌ಮಾರಿ ಬೇನೆ ಹಬ್ಬಿತ್ತು. ಊರಿನ ಜನ ಹೆದರಿ ಊರು ಬಿಟ್ಟು ಹೋಗತೊಡಗಿದರು. ಆಗ ಕರಡಿ ರುದ್ರಪ್ಪನವರ ಪರಿವಾರ ಹುಲ್ಯಾಳದ ಮಹಾರುದ್ರಪ್ಪ ಜುಂಜಪ್ಪ ನವರ ತೋಟದಲ್ಲಿ ಗುಡಿಸಲು ಹಾಕಿಕೊಂಡು ಜೀವನ ಸಾಗಿಸಿತ್ತು. ರುದ್ರಪ್ಪನ ವರಿಗೆ ವೀರಭದ್ರಪ್ಪ, ಇರಸಂಗಪ್ಪ, ಅಪ್ಪಣ್ಣಪ್ಪ, ಮಹಾಲಿಂಗಪ್ಪ, ಮಡಿವಾಳಪ್ಪ ಎಂಬ ಐದು ಜನ ಮಕ್ಕಳು ಏನೋ

ಮನಸ್ತಾಪವಾಗಿ ಮಡಿವಾಳಪ್ಪ ಅಣ್ಣಂದಿರ ಜೊತೆಗೆ ಜಗಳಕ್ಕೆ ನಿಂತಿದ್ದನಂತೆ. ಕಿರಿಯವನಾದ ಅವನಿಗೆ ಎಲ್ಲ ಅಣ್ಣಂದಿರು ಛೀಮಾರಿ ಹಾಕಿ ಮನನೊಯಿಸಿದರು. ಅವನು ತಲೆತಿರುಗಿದಂತೆ ವರ್ತಿಸತೊಡಗಿದನು. ರುದ್ರಪ್ಪನವರು ಯಾವುದೋ ಕೆಲಸದ ನಿಮಿತ್ಯ ಊರಿಗೆ ಹೋಗಿದ್ದರು. ಇದನ್ನು ತಿಳಿದ ಮಡಿವಾಳಪ್ಪ ರಾತ್ರಿ ಎಲ್ಲರೂ ಗುಡಿಸಲಲ್ಲಿ ಮಲಗಿದಾಗ ಎಲ್ಲರೂ ಹಾಳಾಗಿ ಹೋಗಲೆಂದು ಲೆಕ್ಕಹಾಕಿ ಸೀಮೆ ಎಣ್ಣೆಯನ್ನು ಗುಡಿಸಲಿಗೆ ಎರಚಿ ಬೆಂಕಿ ಹಚ್ಚಿದನು. ಎಲ್ಲರೂ ಹೆದರಿ ಗಾಬರಿಯಾಗಿ ಹೊರಗೆ ಓಡಿ ಬಂದರಂತೆ ಅಳಿದುಳಿದ ಕಾಳುಕಡಿ, ವಸ್ತು ಬಟ್ಟೆಬರೆ ಸುಟ್ಟು ಹಾಳಾದರೂ ಚಿಂತಿಸಲಿಲ್ಲ ಪ್ರಾಣ ಉಳಿದರೆ ಸಾಕು ಎಂದು ಹೊರಗೋಡಿ ಬಂದಿದ್ದರು. ಆಗ ಆ ಶರೀರವಾಣಿಯೊಂದು ಶ್ರೀ ಮಹಾಲಿಂಗೇಶ್ವರರು ದಯಪಾಲಿಸಿದ ಕರಡಿವಾದ್ಯ ಬೆಂಕಿಯಲ್ಲಿ ಸುಟ್ಟು ಹಾಳಾಗದಂತೆ ಉಳಿಸಿರಿ ಎಂದು ಹೇಳಿದಂತಾಯಿತು. ಅದನ್ನು ಕೇಳಿದ ರುದ್ರಪ್ಪನವರ ಹೆಂಡತಿ ಶ್ರೀಮತಿ ಬಸವ್ವ ತನ್ನ ಪ್ರಾಣ ಲೆಕ್ಕಿಸದೇ ಧಗ ಧಗ ಉರಿಯುವ ಬೆಂಕಿಯಲ್ಲಿ ಧೈರ್ಯದಿಂದ ಧುಮುಕಿದಳು. ಗೂಟಕ್ಕೆ ನೇತು ಹಾಕಿದ್ದ ಆ ಕರಡಿ ವಾದ್ಯವನ್ನು ಎತ್ತಿ ಉರಿವ ಬೆಂಕಿಯಲ್ಲಿ ನುಗ್ಗುತ್ತಲೇ ಹೊರಗೆ ತಂದಳು. ಮೈಗೆ, ಬಟ್ಟೆಗಳಿಗೆ ಬೆಂಕಿ ತಗುಲಿ ಸಣ್ಣ-ಪುಟ್ಟ ಗಾಯಗಳಾಗಿದ್ದರೂ ಕರಡಿವಾದ್ಯ ಉಳಿಸಿದ ಅವಳ ಧೈರ್ಯವನ್ನು ಕೊಂಡಾಡಿದರು.

ಈ ವಿಷಯ ತಿಳಿದು ರುದ್ರಪ್ಪನವರು ಕೆಲಸಗಳನ್ನು ಬಿಟ್ಟು ಊರಿಗೆ ಮರಳಿ ಬಂದರು. ಬದುಕುಳಿದ ತಾವು ಏನೆಲ್ಲ ಗಳಿಸಬಹುದು, ಶ್ರೀ ಮಹಾಲಿಂಗೇಶ್ವರರು ಆಶೀರ್ವದಿಸಿ ನೀಡಿದ ಕರಡಿವಾದ್ಯ ಸುಟ್ಟು ಹೋಗಿದ್ದರೆ ಕರಡಿ ಮನೆತನ ಜನ್ಮಾಂತರ ದುಃಖದಿಂದ ಪಶ್ಚಾತಾಪ ಪಡಬೇಕಾಗುತ್ತಿತ್ತು. ಇದೂ ದಯಾ ಘನನಾದ ಶ್ರೀ ಮಹಾಲಿಂಗೇಶ್ವರರ ಪವಾಡವೇ ಶ್ರೀ ಮಹಾಲಿಂಗೇಶ್ವರರೇ ಅಶರೀರ ವಾಣಿಯ ಮೂಲಕ ಎಚ್ಚರಿಸಿ ಕಾಪಾಡಿದರು ಎಂದು ರುದ್ರಪ್ಪ ನವರು ಮನದಲ್ಲಿಯೇ ಸಿದ್ಧ ಶಿವಯೋಗಿ ಶ್ರೀ ಮಹಾಲಿಂಗೇಶ್ವರರನ್ನು ಮನದಲ್ಲಿ ಸ್ಮರಿಸಿದರು. ತಮ್ಮ ಮಕ್ಕಳನ್ನು ಕರೆದು ಮಕ್ಕಳೇ ಏನೇ ತೊಂದರೆ ಬಂದರೂ ನಿಮ್ಮ ನಿಮ್ಮೊಳಗೆ ಬಡಿದಾಡ ಬೇಡಿರಿ, ಏನೆಲ್ಲ ಸುಟ್ಟು ಹೋಗಿದ್ದರೂ ಶ್ರೀ ಮಹಾಲಿಂಗೇಶ್ವರ ಕೃಪಾ ಆಶೀರ್ವಾದದಿಂದ ನಮ್ಮ ಮನೆತನದ ಬೆಲೆ ಕಟ್ಟಲಾರದ ಅಮೂಲ್ಯ ಆಸ್ತಿಯಾದ ಕರಡಿವಾದನ ಉಳಿದಿದೆ ಇದನ್ನು ಯಾವುದೇ ಪರಿಸ್ಥಿಯಲ್ಲಿ ನಿಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿ ಉಳಿಸಿಕೊಂಡು ಹೋಗಿರಿ, ಜೀವನದ ಕೊನೆ ಉಸಿರು ಇರುವವರೆಗೆ ಶ್ರೀ ಮಹಾಲಿಂಗೇಶ್ವರರ ಸೇವೆ ಮಾಡುವುದನ್ನು ಬಿಡಬೇಡಿರಿ ಎಂದು ಬುದ್ಧಿವಾದ ಹೇಳಿದರು.

**ಕರಡಿವಾದನ ಸೇವೆಗಾಗಿ ಜಮೀನು ಪಡೆದ ಕಥೆ :–**

ಕರಡಿ ಬಾರಿಸುವ ಕಲೆಯಲ್ಲಿ ಚೆನ್ನಾಗಿ ಪಳಗಿದ ರುದ್ರಪ್ಪ ವೀರಭದ್ರಪ್ಪ ಕರಡಿಯವರು ತಮ್ಮ ಕಲಾವಿದ ಸಂಗಡಿಗರೊಂದಿಗೆ ಪ್ರತಿ ವರ್ಷ ಮುಧೋಳ ತಾಲೂಕಿನ ಕುಳಲಿಯ ಶ್ರೀ ಹನುಮಂತ ದೇವರ ಜಾತ್ರೆಯ ನಿಮಿತ್ಯ ನಡೆಯುವ ಓಕಳಿ ಉತ್ಸವಕ್ಕೆ ಹೋಗುತ್ತಿದ್ದರು. ಕುಳಲಿಯ ದೇಸಾಯಿಯವರು ಕರಡಿ ಬಾರಿಸುವ ಕಲಾ ಮೇಳವನ್ನು ಕರೆ ತರಲು ಇಬ್ಬರು ಸೇವಕರನ್ನು ನೇಮಿಸಿದ್ದರು. ಅವರನ್ನು ಅಲಂಕರಿಸಿದ ಎತ್ತುಗಳ ಚಕ್ಕಡಿಯಲ್ಲಿ ಮಹಾಲಿಂಗಪೂರದಿಂದ ಕುಳಲಿಗೆ ಈ ಕಲಾವಿದರನ್ನು ಅವರ ಕರಡಿ, ತಾಳ, ಸಂಬಾಳ ಮುಂತಾದ ವಾಧ್ಯಗಳೊಂದಿಗೆ ಕರೆದುಕೊಂಡು ಹೋಗು ತ್ತಿದ್ದರು. ಕರಡಿ ಕಲಾವಿದರನ್ನು ಆದರಾಭಿಮಾನ ದಿಂದ ಬರಮಾಡಿ ಕೊಂಡು ದೇಸಾಯಿಯವರು ಜಾತ್ರೆ ನಡೆಯುವ ಎರಡೂ ದಿನ ಕಲಾಸೇವೆ ಮಾಡಿಸುತ್ತಿದ್ದರು. ಅವರ ಕರಡಿವಾದನ ನೋಡಲು, ಕೇಳಲು ನೆರೆಹೊರೆಯ ಗ್ರಾಮಗಳಿಂದ ಬಹುಜನರು ಬರುತ್ತಿದ್ದರು.

ಜಾತ್ರೆ ಮುಗಿದ ಮರುದಿನ ದೇಸಾಯಿಯವರು ಚಕ್ಕಡಿಯಲ್ಲಿ ಒಂದು ಚೀಲ ಗೋವಿನ ಜೋಳ, ಅರ್ಧ ಚೀಲ ಅಕ್ಕಿ, ಒಂದು ಪೆಂಟೆ ಬೆಲ್ಲ ಹಾಗೂ ಇನ್ನಿತರ ಬೆಳೆ ಕಾಳುಗಳನ್ನು ಕೊಟ್ಟು ಕಳಿಸುತ್ತಿದ್ದರು. ಪೂರ್ವಜರಿಂದ ನಡೆದ ವಾಡಿಕಿಯಿಂದ ಇದು ಪ್ರತಿ ವರ್ಷ ನಡೆದು ಬಂದಿತ್ತು. ಒಂದು ವರ್ಷ ರುದ್ರಪ್ಪನವರು ಕುಳಲಿಯ ಶ್ರೀ ಹನುಮಂತ ದೇವರ ಓಕಳಿಯ ಸೇವೆ ಮುಗಿದ ಮೇಲೆ ದೇಸಾಯಿಯವರಲ್ಲಿ “ನಮ್ಮ ಸೇವೆ ಮುಗಿಯಿತು ನಾವು ಇನ್ನು ಮಹಾಲಿಂಗಪುರಕ್ಕೆ ಹೋಗುತ್ತೇವೆ ನಮಗೆ ಅಪ್ಪಣೆಯನ್ನು ಕೊಡಿ” ಎಂದರು.

**ದೇಸಾಯಿಗಳು :** “ರುದ್ರಪ್ಪನವರೇ ನೀವು ಪ್ರತಿ ವರ್ಷವು ಬರುತ್ತಿರಿ ನಿಮಗೆ ಪ್ರತಿವರ್ಷ ನಾವು ಏನಾದರೂ ಕೊಡುವುದು ವಾಡಿಕೆಯಾಗಿದೆ. ನಾವು ಪ್ರತಿವರ್ಷವು ನಿಮಗೆ ಕೊಡುವುದು ಬೇಡಾ ನಿಮಗೆ ಒಮ್ಮೆಯೇ ಏನು ಬೇಕು ಕೇಳಿ ಕೊಡುತ್ತೇವೆ? ಎಂದರು.

**ರುದ್ರಪ್ಪನವರು :** ಬೇಡಾ ದೇಸಾಯಿಗಳೇ ನೀವು ಏನಾದರೂ ಕೋಡುತ್ತಿರಿ ಎಂದು ನಾವು ಬರುವುದಿಲ್ಲಾ ಶ್ರೀ ಹನುಮಂತ ದೇವರ ಸೇವೆಗಾಗಿ ಬರುತ್ತೇವೆ ಎಂದರು.

**ದೇಸಾಯಿಗಳು :** ನಾವು ಇರುವವರೆಗೆ ಮಾತ್ರ ಈ ಓಕಳಿ, ಜಾತ್ರೆ ನಡೆಯ ಬಾರದು ನಾವು ಹೋದ ಮೇಲೆಯೂ ಇದು ಪ್ರತಿ ವರ್ಷ ಹೀಗೆ ವಿಜೃಂಬನೆಯಿಂದ ನಡೆಯಬೇಕು. ಅದಕ್ಕಾಗಿ ನೀವು ಏನಾದರೂ ಕೇಳಿ ಕೊಡುತ್ತೇವೆ. ಈ ಸೇವೆ ಶಾಶ್ವತವಾಗಿ ನಡೆಯಬೇಕು ಎಂದರು.

**ರುದ್ರಪ್ಪನವರು :** ಮನಸ್ಸಿನಲ್ಲಿ ಯೋಚನೆ ಮಾಡುತ್ತಾ ಇವರು ಕೊಡಲಿಕ್ಕೆ ಆಗಬಾರದು ಅಂತಹದನ್ನು ಕೇಳಿ ಇವರಿಂದ ಏನು ತೆಗೆದುಕೊಳ್ಳಬಾರದು ಎಂದು ಯೋಚನೆ ಮಾಡಿ ಸ್ವಾರ್ಥ ಮನೋಭಾವ ಮಾಡದೇ ದೇಸಾಯಿ ಗಳನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂದು "ಹರೆಯಲಾರದ ಪಡಕಿ ಕೋಡಿ" (ಪಡಕಿ ಎಂದರೆ ಸೀರೆ) ಎಂದು ಕೇಳಿದರು.

**ದೇಸಾಯಿಗಳು :** ರುದ್ರಪ್ಪನವರು ಹೇಳಿದನ್ನ ಕೇಳಿ ಯೋಚನೆಮಾಡಿ ಏನಿದು ಒಗಟಿನಲ್ಲಿ ಕೇಳುತ್ತಿದ್ದಾರಲ್ಲಾ ಎಂದು ಯೋಚಿಸಿದರು ರುದ್ರಪ್ಪನವರು ನೀವು ಕೇಳಿದ ಹರೇಯಲಾರದ ಪಡಕಿ ನಾವು ಕೋಡುತ್ತೇವೆ ಎಂದು 40 ಎಕರೆ 6 ಗುಂಟೆ ಒಂದೇ ಹಾಸಿನಂತೆ ಇರುವ ಈಗಿನ ನಂದಗಾವ ಗ್ರಾಮದಲ್ಲಿಯ ಜಮೀನವನ್ನು ರುದ್ರಪ್ಪನವರ ಹೆಸರಿಗೆ ಸನದಾಗಿ ಬರೆದು ಕೊಟ್ಟರು. ಆ ಜಮೀನವನ್ನು ಈಗಲೂ ಉಳಿಸಿಕೊಂಡು ಕರಡಿ ಮನೆತನ ದವರು ಊಂಬಳಿಯಾಗಿ ಭೊಗಿಸುತ್ತಿದ್ದಾರೆ. ಮತ್ತು ಈಗ ಪ್ರತಿ ವರ್ಷ ಕುಳಲಿಯ ಶ್ರೀ ಹನುಮಂತ ದೇವರ ಓಕಳಿ, ಜಾತ್ರೆಗೆ ಕರಡಿ ನುಡಿಸುವ ಸೇವೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

दे॰ जा॰ नंबर १४

१९२६-२७

रा॰ रुद्रप्पा वीरभद्रप्पा करडी रा॰
माहालिंगपूर यांस.

परगणे मुधोळ व ढवळेश्वर देसगत
कचेरीकडून हुकुम-

मौजे नंदगांव पो॰ ढवळेश्वर व ईा॰ मुधोळ येथील देसगत चावरात जमीनीं पैकीं शि॰ सर्वे नंबर जमीन येकर आकार रुपयेची जमीन तुम्हांस नोकरी करण्याच्या बाबतीत दिलेली आहे व सदरहू बद्दल आकाहिदा तुम्ही करून [illegible] लिहून दिलेली आहे. तुमच्या करारा प्रमाणे बिनकसूर नोकरी करून जमीन अनुभव करून घ्यावे. व जमीनीचे तर्फ आकारावर नोकरी आंष वाटावा आप्रमांष व लोकल फंड दरसाल देसगत कचेरीकडे देवून पावती घेत जावे ज्या वेळीं नोकरी बंद होईल त्यावेळीं सदर जमीनी देसगतच्या ताब्यांत घेता येईल कळावे ता।। ३०

P. T. O.

माहे ज्यानेवारी सन १९२७ ईस.

(सही मोडी) बाळाप्पा व्यंकटराव देसाई

देसाई पगो मुधोळ वढव

केश्वर वगैरे

कामांवर हजर केले ... १५।७।२६

(अंगठा) ही॰ उ॰ [illegible]॰ अं॰ खु॰ रुद्रप्पा वीर

भद्रप्पा करडी रा॰ महालिंगपूर

यांचे असे दस्तूर बाळाजी-

भास्कर बाजी॰

सदरहूची नक्कल कोर्टच्या सही शिक्क्याची

[illegible] वना सदरहू असल

कागद॰ अर्जदार रुद्रप्पा वीरभद्रप्पा

करडी रा॰ माहालिंगपूर यांस, त्यांच्या

मागणी अर्जा प्रा॰ परत दिला असे ता॰

३।१२।८२

Sd/- V.C. Garawad

इनाम कमीशनर मुधोळ.

असल मोडी लिपीत असलेले त्याचे नक्कल

बाळबोध लिपीत तयार केले असे

तारीख॰ २७।१।९८७ ई॰

**ಶಬ್ಧ ನುಡಿಸುವ ಕಲೆ ಹುಟ್ಟಿದ್ದು ಮತ್ತು ಬೆಳೆದುಕೊಂಡು ಬಂದ ಬಗ್ಗೆ :**

ಮಾಲೋಜಿರಾವ್ ಘೋರ್ಪಡೆ ಮಹಾರಾಜರು 64 ವಿದ್ಯೆಗಳಲ್ಲಿ ಪಾರಂಗತರಾಗಿದ್ದರ. ಪಂಡಿತರಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಹಾಗೂ ಸೇನಾಧಿಪತಿಗಳಿಗೆ ಒಂದು ಅಪ್ಪಣೆಯನ್ನು ಹೊರಡಿಸಿದ್ದು ಗುಪ್ತ ಸಂದೇಶ ಕಳುಹಿಸುವ ಒಂದು ಉಪಾಯ ಸಿದ್ಧ ಪಡಿಸಿರಿ ಎಂದು ಹೇಳಿದರು. ಈ ಪ್ರಕಾರ ಎಲ್ಲರೂ ಹೊಸ ಉಪಾಯದ ಬಗ್ಗೆ ಯೋಚನೆಯಲ್ಲಿ ತೊಡಗಿದರು. ಆಗ ಆಸ್ಥಾನ ಕಲಾವಿದರಾಗಿದ್ದ ವೀರಭದ್ರಪ್ಪನವರು ತಾವು ನುಡಿಸುತ್ತಿದ್ದ ಕರಡಿ ವಾದ್ಯದಲ್ಲೆ ಹೊಸ ಪ್ರಯೋಗವನ್ನು ಮಾಡಿ “ಸಂಗೀತ ಕರಡಿ ವಾದ್ಯ ಸಂದೇಶ” ವನ್ನು ಸೃಷ್ಠಿ ಮಾಡಿದರು. ಈ ಕರಡಿ ವಾದ್ಯ ಕಲೆಯನ್ನು ಒಂದು ಭಾಷೆಯಾಗಿ ಪರಿಚಯಿಸಿದರು. ಈ ವಿದ್ಯೆಯನ್ನು ಕಂಡು ಮಹಾರಾಜರು ಆಶ್ಚರ್ಯ ವ್ಯಕ್ತ ಪಡಿಸಿ ಸಂತೋಷದಿಂದ ವೀರಭದ್ರಪ್ಪ ನವರನ್ನು ಕೋಟೆಯ ಕಾವಲುಗಾರ ವಾದ್ಯದವರ ಮುಖ್ಯಸ್ಥನಾಗಿ ನೇಮಿಸಿ ದ್ದರು. ವೀರಭದ್ರಪ್ಪನವರು “ಸಂಗೀತ ಕರಡಿ ವಾದ್ಯ ಸಂದೇಶ” ಕಲೆಯ ಭಾಷೆಯನ್ನು ರಾಜರು, ಸೇನಾಧಿಕಾರಿಗಳು ಮತ್ತು ಆಯ್ದ ಸೈನಿಕರಿಗೆ ಕಲಿಸಿದರು. ಕೋಟೆಯ ಕಾವಲುಗಾರರ ಜೊತೆಗೆ ಇರುತ್ತಿದ್ದ ವೀರಭದ್ರಪ್ಪ ನವರು ದೂರದರ್ಶಕ (ದುರಬಿನ್) ಸಹಾಯದಿಂದ ದೂರದಲ್ಲಿ ಇರುತ್ತಿದ್ದ ಶತ್ರು ಸೇನೆಯನ್ನು ಕಂಡು “ಎಚ್ಚರ ಸೇನಾಧಿಕಾರಿಗಳೇ ಎಚ್ಚರ ಶತ್ರು ಸೇನೆ ಕಾಣುತ್ತಿದೆ, ನಮ್ಮ ಕೋಟೆಯ ಬಳಿ ಬರುತ್ತಿದ್ದೆ ಎಚ್ಚರ” ಎಂದು ಸಂಗೀತ ಕರಡಿ ವಾದ್ಯದಲ್ಲಿ ನುಡಿಸಿ ಸೈನ್ಯಾಧಿಕಾರಿಗಳನ್ನು ಎಚ್ಚರ ಗೊಳಿಸುತ್ತಿದ್ದರು.

ಮಿತ್ರ ರಾಜ್ಯದ ಅತಿಥಿಗಳು ಬಂದರು ರಾಜರಿಗೆ ತಿಳಿಸುತ್ತಿದ್ದರು. ಮತ್ತು ರಾಜರು ಮಿತ್ರ ರಾಜ್ಯಗಳಿಗೆ ಗೌಪ್ಯ ಸಂದೇಶವನ್ನು ಇವರ ಮೂಲಕ ಕಳುಹಿಸುತ್ತಿದ್ದರು. ಮತ್ತು ಶತ್ರು ರಾಜ್ಯದವರು ಯುದ್ಧದ ಸಮಯದಲ್ಲಿ ತಮ್ಮ ಸೈನಿಕರನ್ನು ಬಂದಿಸಿದಾಗ ಗೌಪ್ಯ ವೇಷ ಧರಿಸಿ ಅವರಿಗೆ ಸಂದೇಶವನ್ನು ಮುಟ್ಟಿಸಿ ಬರುತ್ತಿದ್ದರು. ಮುಧೋಳ ಆಸ್ಥಾನದ ವತಿಯಿಂದ ಮಿತ್ರ ರಾಜ್ಯಗಳಿಗೆ ಕಾರ್ಯಕ್ರಮ ನೀಡಲು ಹೋದಾಗ ಕರಡಿ ಮಜಲು ಕಲೆಯ ಜೊತೆಗೆ ಈ ಶಬ್ಧ ನುಡಿಸುವ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಹೀಗೆ ಹುಟ್ಟಿಕೊಂಡ ಶಬ್ಧನುಡಿಸುವ ಕಲೆ ಮೂಲ ಕರಡಿ ಮಜಲು ಕಲೆ ಅಲ್ಲದೇ ಹೋದರು ಕೂಡ ಕರಡಿ ಮಜಲು ಕಲೆಯ ಜೊತೆಗೆ ವಂಶಪಾರಂಪರಿಕವಾಗಿ ಬೆಳೆಸಿಕೊಂಡು ಬಂದರು.

1960ನೇ ಇಸವಿ ಗಣರಾಜ್ಯೋತ್ಸವದ ನಿಮಿತ್ಯ ಕರಡಿಮಜಲು ಕಾರ್ಯಕ್ರಮ ನೀಡಲು ದೆಹಲಿಗೆ 9 ಜನ ಕಲಾವಿದರು ಕರ್ನಾಟಕದ ವತಿಯಿಂದ ಹೋಗಿದ್ದರು. ಗಣರಾಜ್ಯೋತ್ಸವ ಹಿಂದಿನ ದಿನ ಆಗಿನ ಪ್ರಧಾನಿ ಪಂಡಿತ ನೆಹರುರವರ ಮನೆಗ ಹೋಗಿದ್ದರು. ಅಲ್ಲಿ ಸಾಕಷ್ಟು ಕಲಾವಿದರು ನೆರೆದಿದ್ದರು. ಈ ತಂಡವನ್ನು ನೆಹರೂರವರಿಗೆ ಪರಿಚಯಿಸಿದ ಆಗಿನ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ನಟರಾಜ್‌ರವರು ಈ ಕಲಾವಿದರ ವೈಶಿಷ್ಟ ಕಲಾ ನೈಪುಣ್ಯ ಕುರಿತು ಹೇಳಿದರು. "ನಿವು ಚೀಟಿಯಲ್ಲಿ ಏನಾದರೂ ಬರೆದು ಒಬ್ಬ ಕಲಾವಿದರ ಕೈಗೆ ಕೊಟ್ಟರೆ ಅವರು ಅದನ್ನು ಓದಿ ಕರಡಿಯಲ್ಲಿ ಬಾರಿಸುತ್ತಾರೆ. ಆ ಚೀಟಿ ಓದದೇ ದೂರದಲ್ಲಿ ನಿಂತ ಇನ್ನೊಬ್ಬ ಕಲಾವಿದ ಕರಡಿಯಿಂದ ಕೇಳುವ ಶಬ್ಧದ ಲಯದ ಮುಖಾಂತರವೇ ನೀವು ಬರೆದು ಕೊಟ್ಟ ಶಬ್ಧವನ್ನು ಗುರುತಿಸುತ್ತಾರೆ ಎಂದಾಗ ನೆಹರೂ ಮೊದಲಿಗೆ ನಸು ನಕ್ಕರು, ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದ ಈ ಬಗ್ಗೆ ಕೇಳಿದ್ದೇನೆ. ಹಿಂದಿನ ಕಾಲದಲ್ಲಿ ಕಾವಲುಗಾರರು ಈ ತಂತ್ರ ಉಪಯೋಗಿಸಿ ಕೋಟೆಯ ಒಳಗಿನವರಿಗೆ ಹೊರಗಿನಿಂದ ಬರುವ ಶತ್ರುಗಳ ಕುರಿತು ಮಾಹಿತಿ ಒದಗಿಸುತ್ತಿದ್ದರು ಎಂದು ಆದ್ರೆ ಇಲ್ಲಿಯವರೆಗೆ ಯಾರು ಮಾಡಿ ತೋರಿಸಿ ದ್ದನ್ನು ನೋಡಿಲ್ಲ ಎಂದರು. ಆಗ ಈ ಕಲಾವಿದರು ನೆಹರೂರವರೇ ನಮಗೆ 3 ನಿಮಿಷ ಅವಕಾಶ ಕೊಡಿ ನಾವು ಮಾಡಿ ತೋರಿಸುತ್ತೇವೆ. ಮಾಡಿ ತೋರಿಸದಿದ್ದರೇ ಪಾಶಿ(ಶಿಕ್ಷೆ) ಕೊಡಿ ಎಂದರು.

ನೆಹರೂರವರೆ ನಿವೊಂದು ಶಬ್ಧ ಬರೆದು ಕೊಡಿ ಎಂದರು. ಚೀಟಿಯಲ್ಲಿ ಬರೆದ ಶಬ್ಧವನ್ನು ಓದಿದ ಆ ಕಲಾವಿದ ಕರಡಿಯಲ್ಲಿ ಬಾರಿಸಿದರು. ಚೀಟಿ ನೋಡದೆ ದೂರ ನಿಂತ ಕಲಾವಿದ ಕರಡಿಯಲಯದ ಮೇಲಿಂದ ಶಬ್ಧದ ಪತ್ತೆ ಹಚ್ಚಿ "ಮಹಾತ್ಮಾಗಾಂದಿ" ಚೀಟಿಲಿ ಬರೆದಿದ್ದು ಮಹಾತ್ಮಾಗಾಂಧಿ ಎನ್ನುತ್ತಿದ್ದರೆ ನೆಹರೂ ಸಂತಸ ತಾಳಲಾರದೆ ಮಹಾತ್ಮಾ ಗಾಂಧಿ ಎಂದು ಮೂರು ನಾಲ್ಕು ಬಾರಿ ಹೇಳುತ್ತ ತುಮಾರಾ "ಮಹಾತ್ಮಾ ಗಾಂಧಿ ಭೇಷ್" ಎಂದು ಕಲಾವಿದರ ಬೆನ್ನು ಚಪ್ಪರಿಸಿದರು. ಮತ್ತೆರಡು ದಿನದ ನಂತರ ಆಗಿನ ರಾಷ್ಟ್ರಪತಿ ಶ್ರೀ ಬಾಬು ರಾಜೇಂದ್ರ ಪ್ರಸಾದರಿಗೂ ಈ ಕಲಾವಿದರನ್ನು ಪರಿಚಯಿಸಿ ಇವರನ್ನು ನೆಹರೂ ಮೆಚ್ಚಿಕೊಂಡಿದ್ದು ತಿಳಿಸಿದಾಗ ಅವರೂ ಮೊದಲಿಗೆ ತುಸು ಅಚ್ಚರಿ ವ್ಯಕ್ತಪಡಿಸಿದರು. ಅವರು ಬರದ ಚೀಟಿ ಓದಿದ ವೀರಭದ್ರಪ್ಪನವರು ಕರಡಿಯಲ್ಲಿ ಬಾರಿಸುತ್ತಿದ್ದಂತೆ ಚೀಟಿ ನೋಡದೆ ದೂರ ನಿಂತ ಚೆನ್ನಪ್ಪನವರು **"ಆಜಾದ್ ಹಿಂದ್"**

ಎಂದಾಗ ರಾಜೇಂದ್ರ ಪ್ರಸಾದರ ಕಣ್ಣಿಂದ ಆನಂದ ಭಾಷ್ಪ ಈ ಕಲಾವಿದರನ್ನು ಅಭಿನಂದಿಸಿ ಕಳುಹಿಸಿದರು. 1987 ಶ್ರೀ ಮಹಾಲಿಂಗೇಶ್ವರ ಜಾತ್ರಾ ಸಂದರ್ಭ ತೇರಿನ ದಿನ ಕುಳ್ಳೊಳ್ಳಿ ಇವರ ಅಂಗಡಿಯ ಮುಂದೆ ಕರಡಿ ಮದಾಲಿಸಿ (ಕರಡಿ ನುಡಿಸುವದು) ನಡೆದ ಸಂದರ್ಭದಲ್ಲಿ ಶ್ರೀ ಸಿ. ಆರ್. ಕುಳ್ಳೊಳ್ಳಿಯವರಲ್ಲಿ ಮಹಾಲಿಂಗಯ್ಯಾ ಮಠಪತಿ, ಮುರಗಯ್ಯಾ ಮಠಪತಿ ಮತ್ತು ಗೋವಿಂದಪ್ಪ ಬಡಿಗೇರ ಒಂದು ವಾದ್ ಮಂಡಿಸುತ್ತಾರೆ. (ಈ ಮೂರು ಜನ ಕಲಾವಿದರು ಮೊದಲು ಕರಡಿ ಮನೆತನದ ಕಲಾವಿದ ರೊಂದಿಗೆ ಬೆಳೆದಿದರು ಅವರ ಜೊತೆಗೆ ಕರಡಿ ಮಜಲು ಕಲೆಯನ್ನು ಕರಗತ ಮಾಡಿಕೊಂಡು ಹಲವಾರು ಕಾರ್ಯಕ್ರಮದಲ್ಲಿ ಕರಡಿ ಮನೆತನ ದವರೊಂದಿಗೆ ಭಾಗವಹಿಸಿದರು. ಏನೋ ಅವರವರ ಮಧ್ಯೆ ಮನಸ್ತಾಪ ಬಂದು ಈ ಮೂರು ಜನ ಕಲಾವಿದರು ಇನ್ನೂ ಒಂದಿಷ್ಟು ಕಲಾವಿದರನ್ನು ಕೂಡಿಸಿಕೊಂಡು ಒಂದು ಬೇರೆ ಕರಡಿ ಮಜಲು ತಂಡವನ್ನು ಕಟ್ಟಿಕೊಂಡಿದ್ದರು.) "ಕುಳ್ಳೊಳ್ಳಿ ಸಾಹುಕಾರರೇ ಇವತ್ತು ಮುಂಜಾನೆ ಒಂದು ಪತ್ರಿಕೆಯಲ್ಲಿ ಈ ಕರಡಿ ಮನೆತನದ ಮತ್ತು ಕರಡಿ ಮಜಲು ಕಲೆಯ ಕುರಿತು ಲೇಖನ ಒಂದು ಬಂದಿದೆ.

ಆ ಲೇಖನದಲ್ಲಿ ಈ ಮನೆತನದವರು ವಂಶಪಾರಂಪರಿಕವಾಗಿ ಶಬ್ಧ ನುಡಿಸುವ ಕಲೆಯನ್ನು ಉಳಿಸಿಕೊಂಡು ಬಂದಿರುತ್ತಾರೆ ಎಂದು ಇದೆ ಆದರೆ ಕಳೆದ ಒಂದು ವರ್ಷದ ಹಿಂದೆಯೇ ಕರಡಿಯಲ್ಲಿ ಶಬ್ಧ ನುಡಿಸುತ್ತಿದ್ದ ವಿರಭದ್ರಪ್ಪನವರು ತೀರಿಹೋಗಿದ್ದಾರೆ. ಇದು ಹೇಗೆ ಬರೆದಿದ್ದಾರೆ ವೀರಭದ್ರಪ್ಪನವರ ಜೊತೆಗೆನೆ ಶಬ್ಧ ನುಡಿಸುವ ಕಲೆ ಸತ್ತು ಹೋಗಿದೆ. ಈಗಿರುವ ಕಲಾವಿದರಲ್ಲಿ ಯಾರು ಈ ಕಲೆಯನ್ನು ಪ್ರದರ್ಶಿ ಸುತ್ತಾರೆ ಕೇಳಿ ಎಂದರು. ಸಿ. ಆರ್. ಕುಳ್ಳೊಳ್ಳಿ ಸಾಹುಕಾರರು ಕರಡಿ ಮನೆತನ ಎಲ್ಲಾ ಕಲಾವಿದರನ್ನು ಕರೆದು ಈ ರೀತಿ ವಾದ ನಿಮ್ಮ ಮುಂದೆ ಇದೆ. ಇದಕ್ಕೆ ಏನು ಉತ್ತರ ಕೋಡಿತ್ತೀರಿ ಯಾರು ಈ ಶಬ್ಧ ನುಡಿಸುವ ಕಲೆ ಪ್ರದರ್ಶಿಸುತ್ತಿರಿ ಎಂದು ಕೇಳಿದರು ಆಗ ಕರಡಿ ಮೆನೆತನದ ಕಲಾವಿದರು ನಾವು ಆ ಕಲೆಯನ್ನು ಪ್ರದರ್ಶಿಸುವುದಿಲ್ಲ ಈ ದೇವರು ತೇರಿನಲ್ಲಿ ಕುಳಿತ ಮಹಾಲಿಂಗೇಶ್ವರರು ಕಲೆಯ ಪ್ರದರ್ಶಿಸುತ್ತಾರೆ. ಅದು ಅವನ ಕಲೆ ಎಂದು ಪ್ರದರ್ಶನಕ್ಕೆ ನಿಂತರು. ಸಿ. ಆರ್. ಕುಳ್ಳೊಳ್ಳಿ ಸಾಹುಕಾರರು ಒಂದು ಚೀಟಿಯಲ್ಲಿ ಶಬ್ಧ ಒಂದನ್ನು ಬರೆದು ಕರಡಿ ಮನೆತನದ 18 ವರ್ಷದ ಒಬ್ಬ ಹುಡುಗ ಅಶೋಕ ಚನ್ನಪ್ಪ ಕರಡಿ ಇವನಲ್ಲಿ ಕೊಟ್ಟರು. ಆ ಹುಡುಗ ಚೀಟಿಯಲ್ಲಿ ಇರುವುದನ್ನು ಓದಿ ಕರಡಿಯಲ್ಲಿ ಬಾರಿಸಿದನ್ನು

ಕೇಳಿದ ದೂರದಲ್ಲಿ ಕುಳಿತಿದ್ದ ಚೆನ್ನಪ್ಪನವರು **"ಶ್ರೀ ಕೃಷ್ಣನ ಕುತಂತ್ರದಿಂದ ಕುರುಕ್ಷೇತ್ರವಾಯಿತು"** ಎಂದು ಸಂಗೀತ ಕರಡಿ ವಾದ್ಯ ಸಂದೇಶ ಕಲೆಯ ಮೂಲಕ ಹೇಳಿದರು. ಆಗ ಸಿ. ಆರ್. ಕುಳ್ಳೊಳ್ಳಿ ಸಾಹುಕಾರರು ಭಲೇ ಹುಡುಗ ನಿಮ್ಮ ಅಜ್ಜನ ಹೆಸರು ಮತ್ತು ಮನೆತನದ ಹೆಸರು ಉಳಿಸಿದೆ ಎಂದರು.

ಆದರೆ ವೀರಭದ್ರಪ್ಪನವರು ಈ ಹುಡುಗ ಅಶೋಕನಿಗೆ ರಾತ್ರಿ ಸಮಯದಲ್ಲಿ ಈ ಕಲೆಯನ್ನು ಕಲಿಸಿದ್ದ ವಿಷಯ ಯಾರಿಗೂ ತಿಳಿದಿರಲಿಲ್ಲ. ನಂತರ ಅಶೋಕನ ಬಗ್ಗೆ ಮನೆತನದ ಬಗ್ಗೆ ಹೊಗಳಿ ಕೊಂಡಾಡಿದರು. ಇದಾದ ನಂತರ ಚೆನ್ನಪ್ಪ ಮತ್ತು ಅಶೋಕ ಇವರು ಈ ಕಲೆಯನ್ನು ಕರಡಿ ಮನೆತನದ ಹಲವಾರು ಕಲಾವಿದರಿಗೆ ಇದನ್ನು ಕಲಿಸಿದರು. ಹೀಗೆಯೇ ಮುಂದುವರೆದುಕೊಂಡು ಬಂದ ಈ ಕಲೆಯನ್ನು ಇನ್ನೂ ಅನೇಕ ರೀತಿ ಪ್ರಯೋಗಕ್ಕೆ ಒಳಪಡಿಸಿ ಅಂಕಿ ಸಂಖ್ಯೆ, ಇಂಗ್ಲೀಷ ಭಾಷೆಯನ್ನು ಹಿಂದಿ ಭಾಷೆಗೆ ಅಳವಡಿಸಿ ಅಶೋಕ ಮತ್ತು ಚನ್ನಮಲ್ಲಪ್ಪ ಕರಡಿ ಇವರು ಸತತ 13 ತಿಂಗಳುಗಳ ಕಾಲ ಪರಿಶ್ರಮ ಪಟ್ಟು **"ಲಿಮ್ಕಾ ಬುಕ್ಕ ರಿಕಾರ್ಡ್"** ದಲ್ಲಿ ನೊಂದಾಯಿಸಿದರು ಹೀಗೆ ಈ ಕಲೆಯನ್ನು ಅಜರಾಮರವಾಗಿ ಉಳಿಸಿ ಬೆಳೆಸಿಕೊಂಡು ಕರಡಿ ಮನೆತನ ಬಂದಿದೆ.

**ಶ್ರೀ ಮಹಾಲಿಂಗೇಶ್ವರರು ಒಂದು ಊಟ ಕೊಟ್ಟು ಮಾಯವಾದ ಕಥೆ :**

ಒಮ್ಮೆ ಕಾರ್ಯಕ್ರಮಕ್ಕಾಗಿ ಕರಡಿ ಮನೆತನದ ರುದ್ರಪ್ಪನವರ ತಂಡ ಬಾಗಲಕೋಟ ಜಿಲ್ಲೆಯ ಬೀಳಗಿ ತಾಲೂಕ ಶೀತಿಮನಿ ಊರಿಗೆ ಪ್ರಯಾಣ ಬೆಳೆಸಿತ್ತು. ಶೀತಿಮನಿ ಊರು 3–4 ಪರ್ಲಾಂಗ ಇರಬೇಕಾದರೆ ಕಾಲದಾರಿಯಿಂದ ಹೋಗಬೇಕಾಗಿತ್ತು. ತಂಡದವರೆಲ್ಲ ಎರಡು ಪರ್ಲಾಂಗ ನಡೆದು ಆಯಾಸ ದಿಂದ ನೀರಡಿಕೆಯಾಗಿತ್ತು. ಒಂದು ಕಟ್ಟೆಮೇಲೆ ಕುಳಿತುಕೊಂಡರು. ಕುಡಿಯಲು ತಾವು ತಂದಿದ್ದ ತತ್ರಾನಿ (ಮಣ್ಣಿನ ಕೋಡ) ದಲ್ಲಿ ನೋಡಿದಾಗ ಎಲ್ಲಾ ನೀರು ಖಾಲಿಯಾಗಿತ್ತು. ನೀರಡಿಕೆ ಯಾಗಿ ತೀವ್ರ ಬಳಲುತ್ತಿದ್ದ ಇವರು ಕಟ್ಟೆಯ ಮೇಲೆ ಮಲಗಿಕೊಂಡರು. ಆಗ ಆ ಕಾಲುದಾರಿಯಲ್ಲಿ ಒಬ್ಬ ಕಾವಿ ಧರಿಸಿದ್ದ ಯೋಗಿ ಸಾಧು ನಡೆದುಕೊಂಡು ಬಂದರು. ಮಲಗಿಕೊಂಡಿದ್ದ ರುದ್ರಪ್ಪನವರು ಮತ್ತು ಅವರ ಸಂಗಡಿಗರು ಕುಳಿತು ಕೊಂಡು ನಾವು ಮಹಾಲಿಂಗಪುರದವರು ಕರಡಿ ನುಡಿಸುವ ಸೇವೆಗಾಗಿ ಶೀತಿಮನಿ ಊರಿಗೆ ಹೋಗುತ್ತಿದ್ದೇವೆ. ಇನ್ನೂ ಎಷ್ಟು ಪರ್ಲಾಂಗ ಎಂದು ಕೆಳಿದರು. ಆಗ ಸಾಧುಗಳು ಇನ್ನೂ

ಎರಡು ಪರ್ಲಾಂಗ ಇದೆ ಎಂದರು. ಇಲ್ಲಿ ಎಲ್ಲಾದರೂ ಕುಡಿಯಲಿಕ್ಕೆ ನೀರು ಸಿಗುತ್ತದೆಯೇ ಗುರುಗಳೇ ಎಂದು ಕೇಳಿದರು, ಸಾಧುಗಳು ತೆಗೆದು ಕೊಳ್ಳಿ ಈ ಬುತ್ತಿಯನ್ನು ಎಂದು ತಾವು ತಂದಿದ್ದ ಬುತ್ತಿಯ ಗಂಟನ್ನು ಮತ್ತು ತತ್ರಾನೆಯಲ್ಲಿಯ ನೀರನ್ನು ಕೊಟ್ಟರು. ನೀವು ಈ ಬುತ್ತಿಯಲ್ಲಿ ಇರುವುದನ್ನು ತಿಂದು ನೀರು ಕುಡಿದು ಬಾಯಾರಿಸಿ ಕೊಂಡು ಹೋಗಿರಿ ಎಂದು ಹೇಳಿದರು. ಬುತ್ತಿಯ ಗಂಟನ್ನು ತೆಗೆದುಕೊಂಡು ಕಟ್ಟೆಯ ಮೇಲೆ ಇರಿಶಿ ಬಿಚ್ಚಿ ಮೇಲೆ ನೋಡಿದಾಗ ವಿಸ್ಮಯ ಒಂದು ನಡೆದಿತ್ತು. ಬುತ್ತಿಯನ್ನು ಕೊಟ್ಟ ಸಾಧು ಆ ಯೋಗಿ ಮಾಯವಾಗಿ ಹೋಗಿದ್ದನು.

ರುದ್ರಪ್ಪನವರು ಮತ್ತು ಸಂಗಡಿಗರು ಬೆರಗಾಗಿ ಎಲ್ಲಾ ಕಡೆಯಲ್ಲೂ ಹುಡುಕಿದರು ಎಲ್ಲೂ ಆ ಸಾಧು ಕಾನದಾದರು. ರುದ್ರಪ್ಪನವರು "ಎಷ್ಟು ಹುಡುಕುತ್ತೀರಿ ಬಿಡಿರಿ" ಶ್ರೀ ಮಹಾಲಿಂಗೇಶ್ವರರೇ ಈ ರೂಪದಲ್ಲಿ ಬಂದು ಹಸಿವು ಬಾಯಾರಿಕೆಯನ್ನು ನೀಗಿಸಲು ಬುತ್ತಿಯನ್ನು ನೀರನ್ನು ಕೊಟ್ಟು ಹೋಗಿದ್ದಾರೆ. ಬನ್ನಿ ಊಟಮಾಡಿ ನೀರುಕುಡಿದು ಬಂದ ಕಾರ್ಯಕ್ಕೆ ಅನಿಯಾಗುವ ಎಂದರೂ, ಎಲ್ಲರೂ ಸೇರಿ ಊಟಮಾಡಿ ಶೀತಿಮನಿ ಊರಿಗೆ ಹೋಗಿ ಕಾರ್ಯಕ್ರಮ ನೀಡಿದರು.

### ಕರಡಿ ಮನೆತನದ ಕಲಾವಿದರು ಎಂದು ಮೆರೆದ ಕಾರ್ಯಕ್ರಮಗಳು ಮತ್ತು ಕಾರ್ಯಕ್ರಮಕ್ಕೆ ಹೋದಾಗ ನಡೆದ ಘಟನೆಗಳು

## ದೆಹಲಿಯ "ಅಪನಾ–ಉತ್ಸವ"


ದಿನಾಂಕ 30–10–1986 ರಿಂದ 1–11–1986 ರವರೆಗೆ ಅಪನಾ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗಿದ್ದು, ದಕ್ಷಿಣ ಮಧ್ಯವಲಯ ಸಾಂಸ್ಕೃತಿಕ ಕೇಂದ್ರ ವಲಯ ಇದರ ಪರವಾಗಿ ಮಹಾಲಿಂಗಪುರದಿಂದ ಬೆಂಗಳೂರು (ಬಸ್ಸು) ಬೆಂಗಳೂರಿನಿಂದ ಮದ್ರಾಸ್ (ರೈಲು)ಮದ್ರಾಸ್ ನಿಂದ ದೆಹಲಿ (ರೈಲು)

1) ಗುರುಲಿಂಗಪ್ಪ ಕರಡಿ 2) ಮಡಿವಾಳಪ್ಪ ಕರಡಿ 3) ಅಶೋಕ ಕರಡಿ 4) ಪಂಡಿತಪ್ಪ ಕರಡಿ 5) ಗಂಗಪ್ಪಾ ಕರಡಿ 6) ಮಹಾದೇವಪ್ಪಾ ಕರಡಿ 7) ಚಿದಾನಂದ ಕರಡಿ 8) ಬಾದಸಾಹೇಬ ತಟಗಾರ 9) ಹನಮಂತ ಭಜಂತ್ರಿ 10) ಭೀಮಪ್ಪ ಭಜಂತ್ರಿ 11) ಮಲ್ಲಪ್ಪ ಹೂಗಾರ 12) ಬಸಪ್ಪ ಕರಡಿ 13) ರಾಮಕೃಷ್ಣ ಭಜಂತ್ರಿ

ಈ ಉತ್ಸವವು ಎಲ್ಲ ರಾಜ್ಯದ ಕಲಾವಿದರಿಂದ ಶೋಭಿಸಿತ್ತು. ಸುಮಾರು 4000 ಕಲಾವಿದರಿಂದ ಕೂಡಿತ್ತು. ನಮ್ಮ ರಾಜ್ಯದಿಂದ 180 ಜನರ ತಂಡವು ದೆಹಲಿಗೆ ಹೋಗಿತ್ತು. ಮಹಾರಾಷ್ಟ್ರದ ರಾಜ್ಯಪಾಲರಾದ "ಶಂಕರದಯಾಳ ಶರ್ಮಾ" ಕರ್ನಾಟಕದ ಕೈಗಾರಿಕಾ ಮಂತ್ರಿ ಜೆ. ಎಚ್. ಪಟೇಲ, ಶಿವರಾಜ ಪಾಟೀಲ, ಮಧ್ಯ ಪ್ರದೇಶದ ಮುಖ್ಯಮಂತ್ರಿ ಮೋತಿಲಾಲ ಓರಾ, ಶ್ರೀ ರಾಮಕೃಷ್ಣ ಹೆಗಡೆ ಮುಂತಾದವರು ಭೇಟಿ ಕೊಟ್ಟಿದ್ದರು. ದಿ. 24–11–1986 ಸೋಮವಾರ ದಿವಸ ನಮ್ಮ ಪ್ರಧಾನಿ ಶ್ರೀ ರಾಜೀವಗಾಂಧಿ ಹಾಗೂ ಶ್ರೀಮತಿ ಸೋನಿಯಾ ಗಾಂಧಿಯವರು ಎಲ್ಲ ಕಲಾವಿದರ ಜೊತೆ ಫೋಟೋ ತೆಗೆಸಿಕೊಂಡರು. ಪ್ರದಾನ ಮಂತ್ರಿಗಳು ತಮ್ಮ ಹಸ್ತಾಕ್ಷರ ಇರುವ ತಮ್ಮ ಫೋಟೋವನ್ನು ಕಲಾವಿದರಿಗೆ ಕಾಣಿಕೆ ನೀಡಿದರು. ಎಲ್ಲ ಕಲಾವಿದರು ಇದರಲ್ಲಿ ಭಾಗವಹಿಸಿದ್ದರು. ಪ್ರಧಾನಮಂತ್ರಿ ರಾಜೀವ ಗಾಂಧಿಯವರು ನಿಮ್ಮ ಕಲೆ ಮತ್ತು ನಿಮ್ಮನ್ನು ನೋಡಿ ನಾನು ಒಬ್ಬ ಕಲಾವಿದನಾಗಿ ಹುಟ್ಟ ಬೇಕಾಗಿತ್ತು. ಕಲೆಯಲ್ಲಿ ಸಿಗುವ ಆನಂದ ಮತ್ತಾವುದರಲ್ಲಿಯೂ ಸಿಗುವುದಿಲ್ಲ ಎಂದು ಮಾತನಾಡಿದರು. ಕಾರ್ಯ ಕ್ರಮವು ತೀನ್ ಮೂರ್ತಿ ಭವನದಲ್ಲಿ ನಡೆದಿತ್ತು. ದೆಹಲಿಯಲ್ಲಿ ಒಂದು ತಿಂಗಳ ಕಾಲ ಪ್ರತಿದಿವಸ ಒಂದೊಂದು ಪ್ರಮುಖ ಸ್ಥಳಗಳಲ್ಲಿ ಕಾರ್ಯಕ್ರಮ ನಡೆಯುತ್ತಿತ್ತು. ಒಂದೊಂದು ದಿನ ಕಾರ್ಯಕ್ರಮ ಇಲ್ಲದ ಬಿಡುವಿನ ದಿನದ ಸಮಯದಲ್ಲಿ ಆಗ್ರಾದ "ತಾಜ್ ಮಹಲ್" ಮತ್ತು ಮಥುರಾದ ಶ್ರೀ ಕೃಷ್ಣ ಮಂದಿರವನ್ನು ತೋರಿಸಿಕೊಂಡು ಬಂದಿದ್ದರು.

**26–11–1986 ಅಪನಾ ಉತ್ಸವ ಮುಕ್ತಾಯ ಸಮಾರಂಭ :** ಈ ದಿನ ಮರೆಯದ ದಿನ "ಇಂದಿರಾಗಾಂಧಿ" ಸ್ಟೇಡಿಯಂನಲ್ಲಿ ದೀಪದ ಬೆಳಕಿನಲ್ಲಿ ಸಂಜೆ 6–30ಕ್ಕೆ ಕಾರ್ಯಕ್ರಮ ಪ್ರಾರಂಭ. ಜಾನಪದ ಅರ್ಥ ಬಿಂಬಿಸುವ ಕಥೆಯಿಂದ ಪ್ರಾರಂಭವಾಯಿತು. ಮಂಗಳ ವಾದ್ಯ ನಮ್ಮ ಕರಡಿಮಜಲಿನ ಕಾರ್ಯಕ್ರಮವು ಮದುವೆಯ ಸನ್ನಿವೇಶದಲ್ಲಿ ಪ್ರಾರಂಭವಾಯಿತು. ಕೊನೆಗೆ ಎಲ್ಲರೂ ಕೂಡಿ ಕುಣಿದಿದ್ದೆ ಕುಣಿದದ್ದು ದಿ. 27–10–1986 ರಂದು ಮುಂಜಾನೆ 9–15 ಕ್ಕೆ ದೆಹಲಿಯಿಂದ ಬೆಂಗಳೂರಿಗೆ ದಿ. 29–10–1986 ರಂದು ಬೆಂಗಳೂರು ತಲುಪಿದೆವು. (ಸಂಜೆ 8–30) ಬೆಂಗಳೂರಿನಲ್ಲಿ "ಗುಬ್ಬಿಚತ್ರ" ದಲ್ಲಿ ವಸತಿ ಮಾಡಿ ಮರುದಿನ ದಿ. 30–10–1986 ರಂದು ಸಾಯಂಕಾಲ 4–00 ಘಂಟೆಗೆ ಮಹಾಲಿಂಗಪುರಕ್ಕೆ ಪ್ರಯಾಣ ಮಾಡಿದೆವು. ನಮ್ಮೂರನ್ನು ಮುಂಜಾನೆ 7–15ಕ್ಕೆ ದಿ. 1–11–1986 ರಂದು ಬಂದು ತಲುಪಿದೆವು.

# ಕರಡಿ ಮನೆತನದ ಕಲಾವಿದರ ಕೀರು ಪರಿಚಯ



## 1) ಶ್ರೀ ರುದ್ರಪ್ಪ ವೀರಭದ್ರಪ್ಪ ಕರಡಿ :

ಇವರು ದಿನಾಂಕ 1868 ವೈಶಾಖ ಬ.13 ರಂದು ಶ್ರೀ ವೀರಭದ್ರಪ್ಪನವರ ಮಗನಾಗಿ ಜನಿಸಿದರು. ವಂಶಪಾರಂಪರಿಕವಾಗಿ ಬೆಳೆದು ಬಂದ ಕರಡಿ ಮಜಲು ಕಲೆಯನ್ನು ಮುಂದುವರೆಸಿಕೊಂಡು ಬಂದರು. ಕರಡಿ ಮಜಲು ಕಲೆಯ ಜೊತೆಗೆ ಪ್ರಥಮ ರಂಗ ಭೂಮಿ ನಟಿ ಪಾರಿಜಾತದ ಕೌಜಲಗಿ ನಿಂಗವ್ವಳ ಕಂಪನಿಯಲ್ಲಿ ತಬಲಾ ಬಾರಿಸುತ್ತಿದ್ದರು. ಕೌಜಲಗಿ ನಿಂಗವ್ವಳಿಗೆ ವಿವಿಧ ತಾಳಗಳ ಮತ್ತು ನೃತ್ಯದ ಬಗ್ಗೆ ತಿಳಿ ಹೇಳುತ್ತಿದ್ದರು. ಶಿವಯೋಗಿ ಶ್ರೀ ಮಹಾಲಿಂಗೇಶ್ವರರ ಚರಣ ಸೇವಕ "ಕರಡಿ ವಾಧ್ಯ ಕಲಾಪ್ರವೀಣ" ಎಂಬ ಹಲವಾರು ಬಿರುದುಗಳನ್ನು ಪಡೆದಿದ್ದರು. ಮುಧೋಳ ಮಹಾರಾಜರಿಂದ ಸುವರ್ಣಪದಕ ಪುರಸ್ಕೃತರಾದ ಇವರು ಎಂದೂ ಮರೆಯದ ನಂದಗಾಂವ ಹಾದಿಯಲ್ಲಿರುವ 40 ಎಕರೆ 6 ಗುಂಟೆ ಜಮೀನವನ್ನು ಕುಳಲಿಯ ಶ್ರೀ ಹನುಮಂತ ದೇವರ ಜಾತ್ರೆ ಮತ್ತು ಕಾರ್ತಿಕದ ಸೇವೆಗಾಗಿ ಪಡೆದು ಶ್ರೀ ಬಾಳಾಸಾಹೇಬ ವೆಂಕಟರಾವ ದೇಸಾಯಿ ಇವರ ಪ್ರೀತಿಯನ್ನು ಗಳಿಸಿದರು. ಇವರು ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಸಹ ಭಾಗವಹಿಸಿದ್ದರು. ನಂತರ 1948 ರಲ್ಲಿ ನಿಧನ ಹೊಂದಿದರು.



## 2) ಶ್ರೀ ವೀರಭದ್ರಪ್ಪ ರುದ್ರಪ್ಪ ಕರಡಿ :


ಇವರ ತಂದೆ ಕಲಾಪ್ರವೀಣ ಶ್ರೀ ರುದ್ರಪ್ಪ ತಾಯಿ ಶ್ರೀಮತಿ ಬಸವ್ವಾ ಇವರ ಮಗನಾಗಿ 1900 ರಲ್ಲಿ ಜನಿಸಿದರು. ನಂತರ ವಂಶಪಾರಂಪರಿಕವಾಗಿ ಬಂದ ಕರಡಿಮಜಲು ಕಲೆಯನ್ನು ತಂದೆಯವರಾದ ರುದ್ರಪ್ಪನವರ ಬಳಿಯಲ್ಲಿ ಕಲೆತು ಹಲವಾರು ರಾಜ್ಯಗಳಲ್ಲಿ ತಮ್ಮ ಕಾರ್ಯಕ್ರಮ ನೀಡುತ್ತಾ ಬಂದಿದ್ದರು. ಅನೇಕ ಜಾತ್ರೆ, ಉತ್ಸವ ಇನ್ನಿತರ ಶುಭ ಸಂದರ್ಭದಲ್ಲಿ ಕಾರ್ಯಕ್ರಮ ನೀಡುತ್ತಿದ್ದ ಇವರು ಸ್ವಾತಂತ್ರ್ಯ ನಂತರ 1958 ರಲ್ಲಿ ಪ್ರಥಮ ಬಾರಿಗೆ ತಮ್ಮ ಕಲೆಯನ್ನು ದೇಶದ ರಾಜಧಾನಿ ದೆಹಲಿಯಲ್ಲಿ ಪ್ರದರ್ಶನ ಮಾಡಿದರು. ಹೈದರಾಬಾದ ದೂರದರ್ಶನ ಕೇಂದ್ರದಲ್ಲಿ ಹಾಗೂ ಚಂದ್ರಹಾಸ ಚಲನ ಚಿತ್ರದಲ್ಲಿ ಕಾರ್ಯಕ್ರಮ ನೀಡಿದ್ದ ಇವರು ಮೈಸೂರು

ರಾಜ್ಯ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ 9–12–1962 ರಲ್ಲಿ ರಾಜ್ಯದ ಮಂತ್ರಿ ಶ್ರೀ ಎಸ್. ಆರ್. ಕಂಠಿ ಇವರಿಂದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪಡೆದು 16–8–1982 ರಲ್ಲಿ ಕರಡಿ ವಾದನ ವಿಶಾರದ ಎಂಬ ಪದವಿಯನ್ನು ಇಳಕಲ್ಲ ಚಿತ್ತರಗಿ ಸಂಸ್ಥಾನ ಮಠದಲ್ಲಿ ಪರಮ ಪೂಜ್ಯ ಶ್ರೀ ನಿ.ಪ್ರ ಮಹಾಂತ ಸ್ವಾಮಿಗಳವರ ಅಮೃತ ಹಸ್ತದಿಂದ ಶ್ರಾವಣದ ಕಡೆಯ ಸೋಮವಾರದಂದು ಪಡೆದವರು. ಇನ್ನೂ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದರು. ಕರಡಿ ಮಜಲು ಕಲೆಯನ್ನು ರಾಷ್ಟ್ರಮಟ್ಟಕ್ಕೆ ಕರೆದುಕೊಂಡು ಹೋದ ಕೀರ್ತಿ ಪಡೆದ ಇವರು ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ನಂತರ ಇವರು 1986ರಲ್ಲಿ ತಮ್ಮ ಇಳಿವಯಸ್ಸಿನಲ್ಲಿ ತೀರಿಕೊಂಡರು. ಮುಂದೆ ಇವರ ಹೆಸರನ್ನೇ ಕರಡಿ ಮಜಲು ಸಂಘಕ್ಕೆ ಇಟ್ಟರು.



### 3) ಶ್ರೀ ವೀರಸಂಗಪ್ಪ ರುದ್ರಪ್ಪ ಕರಡಿ :


ಇವರ ತಂದೆ ಕಲಾಪ್ರವೀಣ ರುದ್ರಪ್ಪ ತಾಯಿ ಶ್ರೀಮತಿ ಬಸವ್ವ ಇವರ ಮಗನಾಗಿ 1902 ರಲ್ಲಿ ಜನಿಸಿದರು. ಕರಡಿ ಮಜಲಿನ ಡೊಳ್ಳು, ವಾದ್ಯ ಕಲೆಯನ್ನು ತಂದೆಯವರಾದ ಶ್ರೀ ರುದ್ರಪ್ಪನವರು ಮತ್ತು ಅಣ್ಣ ಶ್ರೀ ವೀರಭದ್ರಪ್ಪನವರ ಹತ್ತಿರ ಮಾರ್ಗ ದರ್ಶನ ಪಡೆದು ವಂಶಪಾರಂಪರಿಕವಾಗಿ ಬಂದ ಈ ಕಲೆಯನ್ನು ಮುಂದುವರೆಸಿಕೊಂಡು ಕರಡಿ ಮನೆತನದವರು ಮಾಡುವ ಎಲ್ಲಾ ಸೇವಾಕಾರ್ಯದಲ್ಲಿ ಭಾಗವಹಿಸುತ್ತಿದ್ದರು. ನಂತರ ದಿನಾಂಕ 25–10–1977 ರಂದು ನಿಧನ ಹೊಂದಿದರು.



### 4) ಶ್ರೀ ಅಪ್ಪನಪ್ಪ ರುದ್ರಪ್ಪ ಕರಡಿ :

ಇವರ ತಂದೆ ಕಲಾಪ್ರವೀಣ ರುದ್ರಪ್ಪ ತಾಯಿ ಶ್ರೀಮತಿ ಬಸವ್ವ ಇವರ ಮಗನಾಗಿ 1906 ರಲ್ಲಿ ಜನಿಸಿದರು. ಇವರು ಕರಡಿ ಮಜಲಿನ ಡೋಳ್ಳು ಮತ್ತು ಕನಿ ವಾದನವನ್ನು ಅಜ್ಜ ಶ್ರೀ ರುದ್ರಪ್ಪನವರ ಬಳಿ ಕಲಿತು ದೇಶದ ಎಲ್ಲಾ ಭಾಗಗಳಲ್ಲೂ ಸಂಚರಿಸಿ ಅನೇಕ ಕಾರ್ಯಕ್ರಮಗಳನ್ನು ನೀಡಿ ಜನಮನ್ನಣೆ ಪಡೆದಿದ್ದರು. ಇವರ ಹಾಗೆ ಕನಿವಾದನವನ್ನು ಬಾರಿಸುವವರು ಆ ಕಾಲದಲ್ಲಿ ಯಾರು ಇರಲಿಲ್ಲ

ಎಂಬುದು ಇವರ ಹಿರಿಮೆಯಾಗಿತ್ತು. ನಂತರ ಇವರು ದಿನಾಂಕ 01–12–1976 ರಂದು ನಿಧನ ಹೊಂದಿದರು.



**5) ಶ್ರೀ ಮಹಾಲಿಂಗಪ್ಪ ರುದ್ರಪ್ಪ ಕರಡಿ :**

ಇವರ ತಂದೆ ಕಲಾಪ್ರವೀಣ ಶ್ರೀ ರುದ್ರಪ್ಪ ತಾಯಿ ಶ್ರೀಮತಿ ಬಸವ್ವ ಇವರ ಮಗನಾಗಿ 1907 ರಲ್ಲಿ ಜನಿಸಿದರು. ಇವರು ಕರಡಿ ಮಜಲಿನ ಡೊಳ್ಳು ವಾದ್ಯ ಕಲೆಯನ್ನು ಶ್ರೀ ರುದ್ರಪ್ಪ ಅವರ ಬಳಿ ಹಾಗೂ ಅಣ್ಣ ಶ್ರೀ ವೀರಭದ್ರಪ್ಪನವರ ಬಳಿ ಕಲಿತ್ತಿದ್ದರು. ನಂತರ ವಂಶಪಾರಂಪರಿಕವಾಗಿ ಬಂದ ಕರಡಿ ಮಜಲು ಕಲೆಯನ್ನು ದೇಶದ ಎಲ್ಲಾ ರಾಜ್ಯದಲ್ಲಿ ಎಲ್ಲಾ ಕಡೆ ಪ್ರದರ್ಶನ ಮಾಡಿ ಜನ ಮೆಚ್ಚುಗೆ ಪಡೆದಿದ್ದರು. ನಂತರ ಇವರು ದಿನಾಂಕ 23–04–1972 ರಂದು ನಿಧನ ಹೊಂದಿದರು.



**6) ಶ್ರೀ ಗುರುಲಿಂಗಪ್ಪ ವೀರಸಂಗಪ್ಪ ಕರಡಿ :**

ಇವರು ತಂದೆ ಶ್ರೀ ವೀರಸಂಗಪ್ಪ ತಾಯಿ ಶ್ರೀಮತಿ ನೀಲವ್ವ ಇವರ ಮಗನಾಗಿ ದಿನಾಂಕ 08–08–1939 ರಂದು ಜನಿಸಿದರು. ಇವರ ಅಜ್ಜ ಶ್ರೀ ರುದ್ರಪ್ಪನವರು ದೊಡ್ಡ ಅಪ್ಪನವರಾದ ಶ್ರೀ ವೀರಭದ್ರಪ್ಪನವರ ಬಳಿಯಲ್ಲಿ ಕರಡಿ ಮಜಲಿನ ಕರಡಿ ವಾದ್ಯ ಕಲೆಯನ್ನು ಕಲಿತರು. ನಂತರ ಕನಿವಾದನ ಕಲೆಯನ್ನು ಶ್ರೀ ಅಪ್ಪಣ್ಣಪ್ಪ ಇವರ ಬಳಿ ಕಲಿತು ದೇಶದ ಎಲ್ಲ ರಾಜ್ಯಗಳಲ್ಲಿ ರಾಜ್ಯದ ಎಲ್ಲ ಕಡೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ವಂಶಪಾರಂಪರಿಕವಾಗಿ ಬಂದ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬರುವಲ್ಲಿ ಇವರ ಪಾತ್ರ ಮತ್ತು ಪರಿಶ್ರಮ ಬಹಳ ಇದೆ ಮತ್ತು ಹಲವಾರು ಯುವ ಕಲಾವಿದರಿಂದ ಕಲೆಯ ಬಗ್ಗೆ ತಿಳಿ ಹೇಳಿ ಹಲವಾರು ಕಲಾವಿದ ರನ್ನು ತಯಾರು ಮಾಡಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ – 2015 ಯನ್ನು ಕರ್ನಾಟಕ ಸರಕಾರ ನೀಡಿ ಗೌರವಿಸಿದೆ. ಈಗ ನಮ್ಮ ಕರಡಿ ಮಜಲು ತಂಡಕ್ಕೆ ಮಾರ್ಗದರ್ಶಕರಾಗಿ ಮತ್ತು ನಮ್ಮ ಮನೆತನದ ಹಿರಿಯ ಕಲಾವಿದರಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.



**7) ಚೆನ್ನಪ್ಪ ವೀರಭದ್ರಪ್ಪ ಕರಡಿ :**

ಇವರು ದಿನಾಂಕ 08–01–1926 ರಲ್ಲಿ ಜನನ. ತಂದೆ ಶ್ರೀ ವೀರಭದ್ರಪ್ಪ ರುದ್ರಪ್ಪ ಕರಡಿ. ತಾಯಿ ಶ್ರೀಮತಿ ಗೌರವ್ವಾ ವಿ ಕರಡಿ. ಕನ್ನಡ ಮುಲ್ಕೀ ಪರೀಕ್ಷೆಯವರೆಗಿನ ಶಿಕ್ಷಣದ ನಂತರ ತಮ್ಮ 15ನೇ ವಯಸ್ಸಿನಲ್ಲೇ ತಂದೆ ಕಲಾಜ್ಯೋತಿ ಶ್ರೀ ವೀರಭದ್ರಪ್ಪ ರುದ್ರಪ್ಪ ಕರಡಿಯವರಿಂದ ಕರಡಿ ಮಜಲಿನ ತಾಳವಾಧ್ಯ ಕಲೆಯ ಮಾರ್ಗದರ್ಶನ ಪಡೆದು ಕಲಾಜೀವನಕ್ಕೆ ಪ್ರವೇಶಿಸಿದರು. ವಂಶಪಾರಂಪರಿಕವಾಗಿ ಬಂದಿರುವ ಕಲೆಯನ್ನು ದೇಶ ಹಾಗೂ ರಾಜ್ಯಗಳಲ್ಲಿ ಪ್ರದರ್ಶಿಸಿ ಪುರಸ್ಕಾರ ಹಾಗೂ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕರಡಿ ಮಜಲು ಕಲೆಯ ಉಸಿರಾಗಿ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಧೀಮಂತ ವ್ಯಕ್ತಿ ಇವರ ಕಲೆಯನ್ನು ಕಂಡು ಕರ್ನಾಟಕ ಸರಕಾರ **"ಜಾನಪದ ಶ್ರೀ" 2004 ಪ್ರಶಸ್ತಿ ನೀಡಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮುಖ್ಯಮಂತ್ರಿ ಶ್ರೀ ಧರ್ಮಸಿಂಗ, ಶ್ರೀ ಎಂ. ಪಿ. ಪ್ರಕಾಶರವರು ಇವರಿಗೆ ಸನ್ಮಾನಿಸಿದರು.** ಇದಲ್ಲದೆ ನಾಡಿನ ಅನೇಕ ಸಂಘ ಸಂಸ್ಥೆಗಳು ಇವರಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಸನ್ಮಾನಿಸಿದೆ. ಕರಡಿ ಮನೆತನದ ಅತ್ಯಂತ ಹಿರಿಯ ಕಲಾವಿದರಾಗಿದ್ದ ಇವರು ದಿನಾಂಕ 31–01–2010 ರಂದು ನಿದನರಾದರು.

**8) ಶ್ರೀ ಬಸಪ್ಪ ಅಪ್ಪನಪ್ಪ ಕರಡಿ :**



ಇವರು ತಂದೆ ಶ್ರೀ ಅಪ್ಪನಪ್ಪ ತಾಯಿ ಶ್ರೀಮತಿ ಗೌರವ್ವ ಇವರ ಮಗನಾಗಿ ದಿನಾಂಕ 20–07–1940 ರಂದು ಜನಿಸಿದರು. ತಂದೆ ಶ್ರೀ ಅಪ್ಪನಪ್ಪ ಮತ್ತು ಶ್ರೀ ವೀರಭದ್ರಪ್ಪ ಕರಡಿ ಇವರ ಬಳಿಯಲ್ಲಿ ಕರಡಿ ಮಜಲಿನ ಡೋಳ್ಳು ವಾದ್ಯ ಕಲೆಯ ಮಾರ್ಗದರ್ಶನ ಪಡೆದರು.ಇವರು ದೆಹಲಿ, ಮಹಾರಾಷ್ಟ್ರ, ಮಧ್ಯಪ್ರದೇಶ, ಗೋವಾ, ಕೇರಳ ಮತ್ತು ರಾಜ್ಯದ ಎಲ್ಲ ಕಡೆಗಳಲ್ಲಿ ಕರಡಿ ಮನೆತನ ಪಾಲ್ಗೋಳ್ಳುವ ಎಲ್ಲ ಉತ್ಸವ, ಜಾತ್ರೆ ಇನ್ನಿತರ ಕಾರ್ಯಕ್ರಮಗಳಲ್ಲಿ ಪಾಲ್ಗೋಳ್ಳುತ್ತಾ ಕರಡಿ ಮನೆತನದ ಅತ್ಯಂತ ಹಿರಿಯ ಕಲಾವಿದರಾಗಿದ್ದ ಇವರು ದಿನಾಂಕ 24–09–1988 ರಂದು ನಿದನರಾದರು.



**9) ಶ್ರೀ ಮಡಿವಾಳಪ್ಪ ಮಹಾಲಿಂಗಪ್ಪ ಕರಡಿ :**

ಇವರು ಶ್ರೀ ಮಹಾಲಿಂಗಪ್ಪ ಕರಡಿ ಶ್ರೀಮತಿ ಕಾಳವ್ವ (ಮರಣ–19–11–1997) ಮಗನಾಗಿ ದಿನಾಂಕ 01–06–1953 ರಂದು ಜನಿಸಿದರು. ಇವರು ತಮ್ಮ ಕಿರಿಯ ವಯಸ್ಸಿನಲ್ಲಿಯೇ ಕರಡಿ ಮಜಲು ಕಲಾ ಜೀವನಕ್ಕೆ ಪ್ರವೇಶ ಮಾಡಿ ತಮ್ಮ ದೊಡ್ಡಪ್ಪನವರಾದ ಕಲಾಜ್ಯೋತಿ ಶ್ರೀ ವೀರಭದ್ರಪ್ಪನವರಿಂದ ಹಾಗೂ ಅಣ್ಣ ಶ್ರೀ ಚೆನ್ನಪ್ಪ ಕರಡಿ ಮತ್ತು ತಂದೆ ಮಹಾಲಿಂಗಪ್ಪ ಕರಡಿ ಅವರ ಬಳಿ ಕರಡಿ ಮಜಲಿನ ತಾಳವಾದ್ಯ ಕಲೆಯ ಮಾರ್ಗದರ್ಶನ ಪಡೆದಿದ್ದರು. ನಂತರ 1976ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವದ ಅಂಗವಾಗಿ ನಡೆದು ಪ್ರಪ್ರಥಮ ಜಾನಪದ ಕಲಾಮಹೋತ್ಸವದಲ್ಲಿ ಪ್ರಥಮವಾಗಿ ಭಾಗವಹಿಸಿ ಭಾರತ ದೇಶದ ಎಲ್ಲ ರಾಜ್ಯಗಳಲ್ಲಿ ಸಂಚರಿಸಿ ಅಪಾರ ಜನ ಮನ್ನಣೆ ಪಡೆದಿದ್ದಾರೆ.

ದೇಶದ ಎಲ್ಲ ಗಣ್ಯಮಾನ್ಯರ ಮತ್ತು ಸಂಗೀತಗಾರರ ಅನೇಕ ಶ್ರೀಗಳ ಮತ್ತು ಸರ್ವ ಮಠಾಧೀಶರ ಸಮ್ಮುಖದಲ್ಲಿ ಕಾರ್ಯಕ್ರಮ ನೀಡಿ ಅವರಿಂದ ಮೆಚ್ಚುಗೆ ಗಳಿಸಿದ್ದಾರೆ. ಅನೇಕ ಯುವ ಕಲಾವಿದರಿಗೆ ಕರಡಿ ಮಜಲು ಕಲೆಯ ಬೋಧನೆಯನ್ನು ಮಾಡಿದ್ದಾರೆ. ಅಲ್ಲದೆ ಹಲವಾರು ಕಲಾಮೇಳಗಳಲ್ಲಿ ನಿರ್ಣಾಯಕರಾಗಿ ಭಾಗವಹಿಸಿದ್ದಾರೆ. ಇವರ ಈ ಕಲಾ ಸಾಧನೆಯನ್ನು ಮೆಚ್ಚಿ ಕರ್ನಾಟಕ ಜಾನಪದ ಪರಿಷತ್ ಬೆಂಗಳೂರು ಇವರು ಸಾಲಿನ ಅತ್ಯುನ್ನತ ಪ್ರಶಸ್ತಿಯಾದ ಜಾನಪದ ಲೋಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರು ಜಾನಪದ ಅಕಾಡೆಮಿ ಸದಸ್ಯರಾಗಿದ್ದಾರೆ. ಹಲವಾರು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಇವರ ಈ ಸಾಧನೆಯಿಂದ ಕರಡಿ ಮಜಲು ಕಲೆಗೆ ಕಳಶಪ್ರಾಯವಾಗಿದೆ.



**10) ಶ್ರೀ ಮಹಾದೇವಪ್ಪ ವೀರಸಂಗಪ್ಪ ಕರಡಿ :**

ಇವರು ತಂದೆ ಶ್ರೀ ವೀರಸಂಗಪ್ಪ ತಾಯಿ– ನಿಲವ್ವ ಇವರ ಮಗನಾಗಿ ದಿನಾಂಕ 02–10–1943ರಲ್ಲಿ ಜನಿಸಿದರು. ಆರಂಭದಲ್ಲಿ ಇವರು ಕರಡಿ ಮಜಲಿನ ತಾಳವಾಧ್ಯ ಕಲೆಯನ್ನು ತಂದೆಯವರಾದ ಶ್ರೀ ವೀರಸಂಗಪ್ಪ ಬಳಿ ಕಲಿತರು. ನಂತರ ಪಾರಿಜಾತ

ಕಲೆಯನ್ನು ಕಲಿತರು. ನಂತರ ಇವರಿಗೆ ಚಿಕ್ಕಪ್ಪ ಶ್ರೀ ಮಹಾಲಿಂಗಪ್ಪನವರು ಸಂಗೀತ ಕಲೆಗೆ ಮಾರ್ಗದರ್ಶಕರಾಗಿದ್ದರು. ಇವರು ಈಗ ಭಜನಾ ಸಂಗೀತದಲ್ಲಿ ರಾಜ್ಯದ ಪ್ರಸಿದ್ಧ ಕಲಾವಿದರಾಗಿದ್ದು ಹಲವಾರು ಕಾರ್ಯ ಕ್ರಮಗಳನ್ನು ನೀಡಿ ಜನಮೆಚ್ಚುಗೆ ಪಡೆದವರಾಗಿದ್ದಾರೆ. ಭಜನಾ ಸಂಗೀತ ಕಲೆಯನ್ನು ಹಲವಾರು ಯುವ ಕಲಾವಿದರಿಗೆ ಕಲಿಸುತ್ತ ಹಲವಾರು ಕಲಾವಿದರನ್ನು ತಯಾರು ಮಾಡಿದ್ದಾರೆ. ಇವರು ನಮ್ಮ ಕರಡಿ ಮನೆತನದ ಕಲಾವಿದರಿಗೆ ಮಾರ್ಗದರ್ಶಕರಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.



**11) ಶ್ರೀ ಪಂಡಿತಪ್ಪ ವೀರಸಂಗಪ್ಪ ಕರಡಿ :**

ಇವರು ಕಲಾವಿದ ತಂದೆ ಶ್ರೀ ವೀರಸಂಗಪ್ಪ ತಾಯಿ ನೀಲವ್ವ ಇವರ ಮಗನಾಗಿ ದಿ.5–01–1949 ರಂದು ಜನಿಸಿದರು. ಕಲಾಜ್ಯೋತಿ ಶ್ರೀವೀರಭದ್ರಪ್ಪ ನವರು ಮತ್ತು ಅಣ್ಣ ಶ್ರೀ ಗುರುಲಿಂಗಪ್ಪನವರ ಬಳಿ ಡೋಳ್ಳು ವಾದ್ಯ ಕಲೆಯನ್ನು ಕಲಿತರು ನಂತರ ದೇಶದ ಎಲ್ಲಾ ರಾಜ್ಯದಲ್ಲಿ ಹಾಗೂ ರಾಜ್ಯದ ಎಲ್ಲಾ ಜಿಲ್ಲೆ ಪ್ರದೇಶಗಳಲ್ಲಿ ಪ್ರದರ್ಶನ ನೀಡಿದ್ದ ಇವರು ಕರಡಿ ಮನೆತನದ ಪಾಲ್ಗೋಳ್ಳುವ ಎಲ್ಲಾ ಉತ್ಸವದಲ್ಲಿ ಭಾಗವಹಿಸುತ್ತಾರೆ. ಕರಡಿ ಮಜಲಿನ ಡೊಳ್ಳು ವಾಧ್ಯದ ಜೊತೆಗೆ ಹಾರ್ಮೋನಿಯಂ, ತಬಲಾ ವಾದ್ಯಗಳಲ್ಲಿ ಭಾರಿಸುವುದರ ಜೊತೆ ಸುಸೌಮ್ಯವಾಗಿ ಶಾಸ್ತ್ರೀಯ ಸಂಗೀತ ಭಜನಾಪದ, ದಾಸರ ಪದಗಳನ್ನು ಹಾಡುತ್ತಾರೆ. ಇವರು 63ರ ಇಳಿ ವಯಸ್ಸಿನಲ್ಲಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

**12) ಶ್ರೀ ಗಂಗಪ್ಪ ಮಹಾಲಿಂಗಪ್ಪಾ ಕರಡಿ :**



ಇವರು ಶ್ರಿ ಮಹಾಲಿಂಗಪ್ಪ ಕರಡಿ ಶ್ರೀಮತಿ ಕಾಳವ್ವ ಇವರ ಮಗನಾಗಿ ದಿನಾಂಕ 01–06–1980 ರಂದು ಜನಿಸಿದರು. ಕಲಾಜ್ಯೋತಿ ಶ್ರೀ ವೀರಭದ್ರಪ್ಪ ಕರಡಿ ಶ್ರೀಮಡಿವಾಳಪ್ಪ ಕರಡಿ ಇವರ ಬಳಿ ತಾಳ ವಾಧ್ಯ ಕಲೆಂಯು ಮಾರ್ಗದರ್ಶನ ಪಡೆದು 1980 ಜಮಖಂಡಿಯಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೆಳನದಲ್ಲಿ ಪ್ರಥಮವಾಗಿ ಭಾಗವಹಿಸಿ ಭಾರತ ದೇಶದ ನಾನಾ ಭಾಗಗಳಲ್ಲಿ ಹಾಗೂ ಕರ್ನಾಟಕ ರಾಜ್ಯ ಎಲ್ಲಾ ಭಾಗಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಹಾಗೂ ದೂರದರ್ಶನದಲ್ಲಿ ಆಕಾಶವಾಣಿಯಲ್ಲಿ ಹಾಗೂ

ಎಲ್ಲ ಧಾರ್ಮಿಕ ಉತ್ಸವದಲ್ಲಿ ಕರಡಿ ಮಜಲು ಕಾರ್ಯಕ್ರಮ ನೀಡಿ ಜನಮನ್ನಣೆ ಪಡೆದಿದ್ದಾರೆ. ಮತ್ತು ಕರಡಿ ಮನೆತನದ ಕರಡಿ ಮಜಲು ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಅನೇಕ ಯುವ ಕಲಾವಿದರಿಗೆ ಕಲೆಯ ಮಾರ್ಗದರ್ಶಕರಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.



**13) ಶ್ರೀ ಅಶೋಕ ಚೆನ್ನಪ್ಪಾ ಕರಡಿ :**

ಇವರ ತಂದೆ ಜಾನಪದ ಶ್ರೀ ಪುರಸ್ಕೃತರು ಚೆನ್ನಪ್ಪ ವಿ. ಕರಡಿ ತಾಯಿ ಸಾವಿತ್ರಿಬಾಯಿ (ನಿಧನ 27–05–2004) ಇವರ ಮಗನಾಗಿ 14–03–1966 ರಂದು ಜನಿಸಿದರು. ಇವರು ಕರಡಿ ವಾದ್ಯಕಲೆ ಯನ್ನು ತಂದೆ ಚನ್ನಪ್ಪ ಕರಡಿ ಹಾಗೂ ಅಜ್ಜನವ ರಾದ ವೀರಭದ್ರಪ್ಪ ಕರಡಿಯವರ ಬಳಿ ಕಲಿತರು. ಪ್ರಥಮ ವಿಶ್ವಕನ್ನಡ ಸಮ್ಮೇಳನದಲ್ಲಿ ಇವರು ಪ್ರಥಮ ಕಾರ್ಯಕ್ರಮ ನೀಡಿದರು. ನಂತರ ರಾಜ್ಯದ ಹಲವಾರು ಕಡೆಗಳಲ್ಲಿ ಮತ್ತು ದೇಶದ ಹಲವು ರಾಜ್ಯಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶನ ಮಾಡಿ ಜನಮನ್ನಣೆ ಪಡೆದಿದ್ದಾರೆ. ಇವರ ಕಲೆಯನ್ನು ಕಂಡು ಅನೇಕ ಸಂಘ ಸಂಸ್ಥೆಗಳು ಹಲವಾರು ಪ್ರಶಸ್ತಿ ಪುರಸ್ಕಾರ ಗಳನ್ನು ನೀಡಿ ಗೌರವಿಸಿದೆ. ಇದಲ್ಲದೇ ಇವರು ಶಬ್ಧ ನುಡಿಸುವ ಕಲೆಯನ್ನು ಲಿಮ್ಕಾ ಬುಕ್ ಆಫ್ ರಿಕಾರ್ಡ್‌ದಲ್ಲಿ ನೊಂದಾಯಿಸಿ ಪ್ರಶಸ್ತಿ ಪಡೆದಿದ್ದಾರೆ. ಹಾಗೂ ನೇಕಾರರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆ ಬೆಂಗಳೂರು ಇವರು "ನೇಕಾರ ರತ್ನ" 2012 ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

ಇದಲ್ಲದೇ ಪ್ರಸ್ತುತ ಕಲಾಜ್ಯೋತಿ ಶ್ರೀ ವೀರಭದ್ರಪ್ಪನವರ ಕರಡಿ ಮಜಲು ಸಂಘದ ಅಧ್ಯಕ್ಷರಾಗಿ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಿ ಯಶಸ್ವಿಗೊಳಿಸಿರುತ್ತಾರೆ. ಮತ್ತು ಹಲವಾರು ಕಿರಿಯ ಕಲಾವಿದರಿಗೆ ಕರಡಿ ಮಜಲು ಕಲೆಯನ್ನು ಕಲಿಸಿ ಯುವ ಕಲಾವಿದರನ್ನು ಬೆಳೆಸುತ್ತಾ ನೆಮ್ಮದಿಯ ಕಲಾಜೀವನ ಸಾಗಿಸುತ್ತಿದ್ದಾರೆ.



**14) ಶ್ರೀ ಕಲ್ಲಪ್ಪ ಗುರಲಿಂಗಪ್ಪ ಕರಡಿ :**

ಇವರು ತಂದೆ ಶ್ರೀ ಗುರಲಿಂಗಪ್ಪ ತಾಯಿ ಶ್ರೀಮತಿ ನೀಲವ್ವ ಇವರ ಮಗನಾಗಿ ದಿನಾಂಕ 20–07–1970 ರಂದು ಜನಿಸಿದರು. ತಂದೆ ಶ್ರೀ ಗುರಲಿಂಗಪ್ಪ ಮತ್ತು ಶ್ರೀ ಚೆನ್ನಪ್ಪ ಕರಡಿ ಇವರ ಬಳಿಯಲ್ಲಿ ಕರಡಿ ಮಜಲಿನ ಡೋಳ್ಳು ವಾದ್ಯ ಕಲೆಯ ಮಾರ್ಗ ದರ್ಶನ ಪಡೆದರು. ಇವರು ದೆಹಲಿ, ಮಹಾರಾಷ್ಟ್ರ, ಮಧ್ಯಪ್ರದೇಶ, ಗೋವಾ, ಕೇರಳ ಮತ್ತು ರಾಜ್ಯದ ಎಲ್ಲ ಕಡೆಗಳಲ್ಲಿ ಕರಡಿ ಮನೆತನ ಪಾಲ್ಗೋಳ್ಳುವ ಎಲ್ಲ ಉತ್ಸವ, ಜಾತ್ರೆ ಇನ್ನಿತರ ಕಾರ್ಯಕ್ರಮಗಳಲ್ಲಿ ಪಾಲ್ಗೋಳ್ಳುತ್ತ ಹಲವಾರು ಯುವ ಕಲಾವಿದರಿಗೆ ಕರಡಿ ಮಜಲು ಕಲೆಯ ಮಾರ್ಗದರ್ಶಕರಾಗಿ ಕಲಾ ಜೀವನ ಸಾಗಿಸುತ್ತಿದ್ದಾರೆ.



**15) ಶ್ರೀ ಮಹಾಲಿಂಗಪ್ಪ ಮಡಿವಾಳಪ್ಪ ಕರಡಿ.**

ಇವರ ತಂದೆ ಜಾನಪದ ಲೋಕ ಪ್ರಶಸ್ತಿ ಪುರಸ್ಕೃತ ಶ್ರೀ ಮಡಿವಾಳಪ್ಪ ತಾಯಿ ಶ್ರೀಮತಿ ಕಸ್ತೂರಿಬಾಯಿ ಇವರ ಮಗನಾಗಿ ದಿನಾಂಕ 22–5–1980 ರಂದು ಜನಿಸಿದರು. ಇವರು ಕರಡಿ ಮಜಲು ಕಲೆಯನ್ನು ತಂದೆ ಶ್ರೀ ಮಡಿವಾಳಪ್ಪ ಹಾಗೂ ಶ್ರೀ ಅಶೋಕ ಚ. ಕರಡಿ ಇವರ ಬಳಿಯಲ್ಲಿ ಕಲಿತರು.

ನಂತರ ದೇಶದ ಎಲ್ಲ ರಾಜ್ಯದ ವಿವಿಧ ಭಾಗಗಳಲ್ಲಿ ಸಂಚರಿಸಿ ತಮ್ಮ ಕಲೆಯನ್ನು ಪ್ರದರ್ಶಿಸಿ ಅಪಾರ ಜನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಸನ್ಮಾನಗಳನ್ನು ಪಡೆದಿದ್ದಾರೆ ಇವರ ಕಲೆಯನ್ನು ಕಂಡು ಗದಗದ ಶ್ರೀ ವೀರೇಶ್ವರ ಪುಣ್ಯಾಶ್ರಮದವರು 'ಶ್ರೀ ಪುಟ್ಟರಾಜ ಕೃಪಾ ಪೋಷಿತ' ಪ್ರಶಸ್ತಿ ನೀಡಿ ಇವರನ್ನು ಗೌರವಿಸಿದೆ. ಕೇರಳ ರಾಜ್ಯದ 4ನೇ ಕನ್ನಡ ಸಮ್ಮೇಳನದಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಇದಲ್ಲದೆ ಹಲವಾರು ಸಂಘ, ಸಂಸ್ಥೆಗಳು ಇವರನ್ನು ಸನ್ಮಾನಿಸಿ ಪುರಸ್ಕರಿಸಿವೆ. ಇವರು ಕರಡಿ ಮನೆತನದವರ ಎಲ್ಲ ಉತ್ಸವ, ಜಾತ್ರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯುವ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

16) ಶ್ರೀ ಚಂದ್ರಶೇಖರ ಗಂಗಪ್ಪ ಕರಡಿ.



ಇವರ ತಂದೆ ಶ್ರೀ ಗಂಗಪ್ಪ ತಾಯಿ ಶ್ರೀಮತಿ ಕಲ್ಲವ್ವ ಇವರ ಮಗನಾಗಿ ದಿನಾಂಕ 22-7-1980ರಲ್ಲಿ ಜನಿಸಿದರು. ಇವರು ಕರಡಿ ಮಜಲು ಕಲೆಯನ್ನು ತಂದೆ ಶ್ರೀ ಗಂಗಪ್ಪ ದೊಡ್ಡಪ್ಪ ಶ್ರೀ ಮಡಿವಾಳಪ್ಪ ಹಾಗೂ ಅಶೋಕ ಚ. ಕರಡಿ ಇವರ ಬಳಿಯಲ್ಲಿ ಕಲಿತರು ನಂತರ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಹಾಗೂ ರಾಜ್ಯದ ಇಲ್ಲ ಕಡೆಗಳಲ್ಲಿ ಪ್ರದರ್ಶನ ನೀಡಿ ಅಪಾರ ಜನ ಮೆಚ್ಚುಗೆ ಪಡೆದಿದ್ದಾರೆ. ಕರಡಿ ಮನೆತನ ಭಾಗವಹಿಸುವ ಎಲ್ಲ ಉತ್ಸವ, ಜಾತ್ರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಇವರು ಉತ್ತಮ ಯುವ ಕಲಾವಿದರಾಗಿದ್ದಾರೆ.

17) ಶ್ರೀ ಚನ್ನಮಲ್ಲಪ್ಪ ಗಂಗಪ್ಪ ಕರಡಿ



ಇವರು ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪುರ ಗ್ರಾಮದಲ್ಲಿ ಜುಲೈ 22, 1983ರಲ್ಲಿ ಜನಿಸಿದರು. ತಂದೆ ಶ್ರೀ ಗಂಗಪ್ಪ ತಾಯಿ ಶ್ರೀಮತಿ ಕಲ್ಲವ್ವ. ಕನ್ನಡ ಮಾಧ್ಯಮದಲ್ಲಿ 9ನೇ ಇಯತ್ತೆವರೆಗಿನ ಶಿಕ್ಷಣದ ನಂತರ 15ನೇ ವಯಸ್ಸಿನಲ್ಲಿ ತಂದೆ ಕಲಾವಿದರಾದ ಶ್ರೀ ಗಂಗಪ್ಪ ಮ. ಕರಡಿಯವರು ಹಾಗೂ ಕಲಾವಿದ ಶ್ರೀ ಅಶೋಕ ಕರಡಿಯವರಿಂದ ಕರಡಿ ಮಜಲು ಮಾರ್ಗದರ್ಶನ ಪಡೆದು ಕಲಾ ಜೀವನಕ್ಕೆ ಪ್ರವೇಶಿಸಿದರು. ಕಲಾವಿದರ ಮನೆತನದಿಂದ ಬಂದ ಶ್ರೀ ಚನ್ನಮಲ್ಲಪ್ಪ ಗಂಗಪ್ಪ ಕರಡಿ ಅವರು ವಂಶ ಪಾರಂಪರಿಕವಾಗಿ ಬಂದಿರುವ ಕರಡಿ ಮಜಲು ಕಲೆಯನ್ನು ದೇಶದ ಎಲ್ಲ ರಾಜ್ಯಗಳಲ್ಲಿ ಸಂಚರಿಸಿ ಪ್ರದರ್ಶನ ನೀಡಿದರು. ರಾಜ್ಯದ ಬಹುತೇಕ ಭಾಗಗಳಲ್ಲಿ ತಮ್ಮ ಕಲೆಗಾರಿಕೆಯಿಂದ ಜನರ ಮನ ತಣಿಸಿದ್ದಾರೆ.

ಕರಡಿ ಮಜಲು ಕಲೇಯೆ ಉಸಿರಾಗಿ ಕಲೆ ಉಳಿಸಿ ಬೆಳಸುತ್ತಿರುವ ಕಲಾರಾಧಕ ಶ್ರೀ ಚನ್ನಮಲ್ಲಪ್ಪ ಕರಡಿಯವರು ಶಬ್ಧ ನುಡಿಸುವ ಕಲೆಯನ್ನು ಪ್ರತಿಷ್ಠಿತ ಲಿಮ್ಕಾ ಬುಕ ಆಪ್ ರೆಕಾರ್ಡ್‌ದಲ್ಲಿ ಸೇರಿಸಿ ಪ್ರಶಸ್ತಿ ಯನ್ನು ಪಡೆದಿದ್ದಾರೆ ಮತ್ತು ಇವರ ಕಲೆಯನ್ನು ಕಂಡು ಬೆಂಗಳೂರಿನ ನೇಕಾರರ ಶೈಕ್ಷಣಿಕ-ಸಾಂಸ್ಕ್ರತಿಕ ಸಂಸ್ಥೆಯವರು "ನೇಕಾರ ರತ್ನ-2012" ಪ್ರಶಸ್ತಿಯನ್ನು

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನೀಡಿ ಗೌರವಿಸಿದೆ ಇವರು ಕರಡಿ ಮನೆತನದ ಉತ್ತಮ ಯುವ ಕಲಾವಿದರಾಗಿ ಕಲಾಜೀವನ ಸಾಗಿಸುತ್ತಿದ್ದಾರೆ.

**: ಕರಡಿ ಮನೆತನದ ನಿರಂತರ ಸೇವಾ ಕಾರ್ಯಕ್ರಮಗಳು :**

1) ಸುಮಾರು 450 ವರ್ಷಗಳಿಂದ ಶಿವಯೋಗಿ ಶ್ರೀ ಮಹಾಲಿಂಗೇಶ್ವರ ಮಠಕ್ಕೆ ಕರಡಿ ಮನೆತನದ 22 ತಲೆಮಾರುಗಳಿಂದ ಪ್ರತಿದಿನ ನಿರಂತರ ಸೇವೆ.

2) ಮುಧೋಳ ತಾಲ್ಲೂಕಿನ ಕುಳಲಿಯ ಶ್ರೀ ಹನುಮಂತ ದೇವರ ಪ್ರತಿ ವರ್ಷ ನಡೆಯುವ ಓಕಳಿ ಮತ್ತು ಕಾರ್ತಿಕ ಉತ್ಸವಕ್ಕೆ 200 ವರ್ಷದಿಂದ ಸೇವೆ.

3) ಬನಹಟ್ಟಿಯಲ್ಲಿ ಪ್ರತಿವರ್ಷ ದೀಪಾವಳಿ ಕಡಿಪಾಡ್ಯ ದಿವಸ ನಡೆಯುವ ಶ್ರೀ ಶಂಕರಲಿಂಗ ದೇವರ ಜಾತ್ರಾ ಮಹೋತ್ಸವದಲ್ಲಿ 95 ವರ್ಷದಿಂದ ಸೇವೆ.

4) ಶ್ರಾವಣ ಮಾಸ ಮೂರನೇ ಸೋಮವಾರ ನಡೆಯುವ ರಬಕವಿಯ ಶ್ರೀ ಮಲ್ಲಿಕಾರ್ಜುನ ಮತ್ತು ಈಶ್ವರಲಿಂಗ ದೇವರ ಜಾತ್ರೆಯಲ್ಲಿ 110 ವರ್ಷಗಳಿಂದ ಸೇವೆ.

5) ಕೇಸರಗೊಪ್ಪದ ಶ್ರೀ ಬೀಸಲ ಸಿದ್ದೇಶ್ವರರ ಜಾತ್ರಾ ಮಹೋತ್ಸವದಲ್ಲಿ 80 ವರ್ಷದಿಂದ ಸೇವೆ.

6) ಚಿಮ್ಮಡದ ಶ್ರೀ ರಗುನಾಥ ಮಹಾರಾಜರ ಜಾತ್ರಾ ಮಹೋತ್ಸವದಲ್ಲಿ 80 ವರ್ಷದಿಂದ ಹಾಗೂ ಶ್ರೀ ಬನಶಂಕರಿ ದೇವಿ ಜಾತ್ರೆಯಲ್ಲಿ 60 ವರ್ಷದಿಂದ ಸೇವೆ.

7) ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ನಡೆಯುವ ಶ್ರೀ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ, ಜಾತ್ರಾ ಮಹೋತ್ಸವದಲ್ಲಿ 15 ವರ್ಷದಿಂದ ಸೇವೆ.

# ಕರಡಿ ಮನೆತನ ನೀಡಿದ ಕಾರ್ಯಕ್ರಮಗಳು

1882 ರಲ್ಲಿ ಮುಧೋಳ ಆಸ್ಥಾನದ ಕಲಾವಿದರಾಗಿ ಸೋಲ್ಲಾಪೂರ ಮಹಾರಾಜರ ಮುಂದೆ ಕಾರ್ಯಕ್ರಮ ನೀಡಿ ಬಂಗಾರದ ಪದಕ ಪಡೆದರು.

1960 ರಲ್ಲಿ ಮುಧೋಳದ ಸಂಸ್ತಾನಿಕರಾದ ಮಹಾರಾಜ ಶ್ರೀ ಮಾಲೋಜಿ ರಾವ್ ಗೋರ್ಪಡೆಯವರ ಸುಪುತ್ರರಾದ ಭೈರವ್‌ಸಿಂಹ ಮಹಾರಾಜರ ಸಮ್ಮುಖದಲ್ಲಿ ಕಾರ್ಯಕ್ರಮ.

1960 ರಲ್ಲಿ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ. ಡಿ. ಜತ್ತಿ ಯವರ ಸಮ್ಮುಖದಲ್ಲಿ ಜನವರಿ 8 ರಂದು ಪ್ರಪ್ರಥಮ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾರ್ಯಕ್ರಮ.

1960 ರಲಿ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ಇವರ ಆಶ್ರಯದಲ್ಲಿ ಕಾರ್ಯಕ್ರಮ.

1960 ರಲ್ಲಿ ದೆಹಲಿಯಲ್ಲಿ ನಡೆದ ಜನವರಿ 26 ರಂದು ಗಣರಾಜ್ಯೋತ್ಸವದಲ್ಲಿ ಭಾಗವಹಿಸಿ ಪ್ರಥಮ ಪ್ರಧಾನ ಮಂತ್ರಿಗಳಾದ ಪಂಡಿತ ಜವಹಾರಲಾಲ ನೆಹರು ರವರ ಸಮ್ಮುಖದಲ್ಲಿ ಕಾರ್ಯಕ್ರಮ.

1960 ರಲ್ಲಿ ದೆಹಲಿಯಲ್ಲಿ ಪ್ರಥಮ ರಾಷ್ಟ್ರಪತಿಗಳಾದ ಶ್ರೀ ಡಾ|| ಬಾಬು ರಾಜೇಂದ್ರಪ್ರಸಾದ ಅವರ ಸಮ್ಮುಖದಲ್ಲಿ ಕಾರ್ಯಕ್ರಮ ನೀಡಿ ಅವರಿಂದ ಪುರಸ್ಕಾರ.

1962 ರಲ್ಲಿ ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು (Mysore State Culture Troupe)ಆಶ್ರಯ ಕಲಾವಿದ ರಾಜಸ್ಥಾನ ಮತ್ತು ಗುಜರಾತ ರಾಜ್ಯಗಳಲ್ಲಿ ಕಾರ್ಯಕ್ರಮ.

1963 ರಲ್ಲಿ ಮೈಸೂರು ರಾಜ್ಯದ ಸಂಗೀತ ನಾಟಕ ಅಕಾಡೆಮಿ ಆಶ್ರಯ ಕಲಾವಿದರಾಗಿ ಕಾರ್ಯಕ್ರಮ ನೀಡಿ ಶಿಕ್ಷಣ ಮಂತ್ರಿಗಳಾದ ಶ್ರೀಯುತ ಎಸ್. ಆರ್. ಕಂಠಿ ಯವರಿಂದ ಬೆಳ್ಳಿ ಪದಕ ಪುರಸ್ಕಾರ.

1963 ರಲ್ಲಿ ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು (Mysore State Culture Troupe) ಆಶ್ರಯ ಕಲಾವಿದ ಆಗಿನ ಡೈರೆಕ್ಟರ್‌ಗಳಾದ ಶ್ರೀ ಎಮ್. ಎಸ್. ನಟರಾಜನ್ ಅವರಿಂದ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಒಂದು ತಿಂಗಳವರೆಗೆ (One Month) ಕಾರ್ಯಕ್ರಮ.

1964 ರಲ್ಲಿ ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು (Mysore State Culture Troupe) ಆಶ್ರಯ ಕಲಾವಿದರಾಗಿ ಆಸ್ಸಾಂ ಮತ್ತು ಮಣಿಪುರ ರಾಜ್ಯಗಳಲ್ಲಿ ಕಾರ್ಯಕ್ರಮ.

1965 ರಲ್ಲಿ ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು (Mysore State Culture Troupe) ಆಶ್ರಯ ಕಲಾವಿದರಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯಗಳಲ್ಲಿ ಕಾರ್ಯಕ್ರಮ.

1966 ರಲ್ಲಿ ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು (Mysore State Culture Troupe) ಆಶ್ರಯ ಕಲಾವಿದರಾಗಿ ಮಹಾರಾಷ್ಟ್ರದ ಮುಂಬೈ, ಪುಣೆ ಹಾಗೂ ನಾಗಪೂರ ಕಾರ್ಯಕ್ರಮ.

1966 ರಲ್ಲಿ ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು (Mysore State Culture Troupe) ಆಶ್ರಯ ಕಲಾವಿದರಾಗಿ ದೆಹಲಿಯ ವಿಜ್ಞಾನ ಭವನದಲ್ಲಿ ನವ್ಹೆಂಬರ್ 11ರಂದು ಕನ್ನಡ ರಾಜ್ಯೋತ್ಸವ ಉಧ್ಘಾಟಿಸಿದ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿ ಹಾಗೂ ಶ್ರೀ ರಾಮಕೃಷ್ಣ ಹೆಗಡೆ ಮತ್ತು ಆರೋಗ್ಯಮಂತ್ರಿಗಳಾದ ಶ್ರೀ ಜೀವರಾಜ್ ಆಳ್ವಾ ಇವರ ಸಮ್ಮುಖದಲ್ಲಿ ಕಾರ್ಯಕ್ರಮ ಮತ್ತು ಪುರಸ್ಕಾರ.

1967 ರಲ್ಲಿ ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು (Mysore State Culture Troupe) ಆಶ್ರಯ ಕಲಾವಿದರಾಗಿ ಓರಿಸ್ಸಾ ರಾಜ್ಯದಲ್ಲಿ ಕಾರ್ಯಕ್ರಮ.

1968 ರಲ್ಲಿ ಮೈಸೂರು ಸ್ಟೇಟ್ ಸಂಗೀತ ನಾಟಕ ಅಕಾಡೆಮಿ ಬೆಂಗಳೂರು (Mysore State Culture Troupe) ಆಶ್ರಯ ಕಲಾವಿದ ರಾಗಿ ಜಮ್ಮು ಆ್ಯಂಡ್ ಕಾಶ್ಮೀರ ಮತ್ತು ಹರಿಯಾಣದಲ್ಲಿ ಅಕ್ಟೋಬರ ತಿಂಗಳಲ್ಲಿ ಕಾರ್ಯಕ್ರಮ.

1968 ರಲ್ಲಿ ಓರಿಸ್ಸಾ ರಾಜ್ಯದ ಸಂಗೀತ ಅಕಾಡೆಮಿ ಕಾರ್ಯಕ್ರಮದಲ್ಲಿ ಪ್ರದರ್ಶನ.

1972 ರಲ್ಲಿ ಕೂಡಲಸಂಗಮದಲ್ಲಿ ಬಸವಣ್ಣನವರ ಅಷ್ಟಶತಮಾನೋತ್ಸವದಲ್ಲಿ ಸನ್ಮಾನ್ಯ ಶ್ರೀ ಬಿ. ಡಿ. ಜತ್ತಿ ಹಾಗೂ ಶ್ರೀ ಎಸ್. ಆರ್. ಕಂಠಿ ಮತ್ತು ಮೈಸೂರು ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ ಸಮ್ಮುಖದಲ್ಲಿ ಕಾರ್ಯಕ್ರಮ.

1976 ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವದ ಅಂಗವಾಗಿ ನಡೆದ ಪ್ರಪ್ರಥಮ ಜಾನಪದ ಕಲಾ ಮಹೋತ್ಸವದಲ್ಲಿ ಭಾಗವಹಿಸಿ, ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿ ದೇವರಾಜ ಅರಸು ಅವರ ಸಮ್ಮುಖದಲ್ಲಿ ಪ್ರದರ್ಶನ.

1978 ರಲ್ಲಿ ಶ್ರೀಯುತ ಆರ್. ಗುಂಡುರಾವ ವಾರ್ತಾ ಮಂತ್ರಿಯಾಗಿದ್ದಾಗ ಹೈದರಾಬಾದ ದೂರದರ್ಶನದಲ್ಲಿ ಹಾಗೂ ರವೀಂದ್ರ ಭಾರತಿಯಲ್ಲಿ ಕಾರ್ಯಕ್ರಮ.

1980 ರಲ್ಲಿ ಜಮಖಂಡಿಯಲ್ಲಿ ಜರುಗಿದ ವಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶನ.

1980 ರಲ್ಲಿ ಹುಬ್ಬಳ್ಳಿಯಲ್ಲಿ ಕರ್ನಾಟಕ ದೇವಾಂಗ ಮಹಾಸಮ್ಮೇಳನದಲ್ಲಿ ಪ್ರದರ್ಶನ.

1981 ರಲ್ಲಿ ಬನಹಟ್ಟಿಯಲ್ಲಿ ಜರುಗಿದ 9 ನೇಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದಲ್ಲಿ ಕಾರ್ಯಕ್ರಮ.

1981 ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ವಿಜಾಪೂರ ಜಿಲ್ಲಾ ಸಾಹಿತ್ಯ ಸಂಸ್ಕೃತಿ ಸಂಘ ಇವರ ಆಶ್ರಯದಲ್ಲಿ ನಡೆದ ಜಿಲ್ಲಾ ಜಾನಪದ ಕಲಾಮೇಳದಲ್ಲಿ ಅಂದಿನ ಕ.ಜಾ. ಮತ್ತು ಯ. ಅಕಾಡೆಮಿ ಅಧ್ಯಕ್ಷ ಎಚ್. ಎಲ್. ನಾಗೇಗೌಡ ಇವರ ಸಮ್ಮುಖದಲ್ಲಿ ಕಾರ್ಯಕ್ರಮ.

1983 ರಲ್ಲಿ ದೆಹಲಿಯ ತಿನಮೂರ್ತಿ ಭವನದಲ್ಲಿ ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರ ಸಮ್ಮುಖದಲ್ಲಿ ಕಾರ್ಯಕ್ರಮ ನೀಡಿ ಮೆಚ್ಚುಗೆ ಪಡೆದರು.

1983 ರಲ್ಲಿ ದಿಲ್ಲಿಯಲ್ಲಿ ನಡೆದ ಮಹಾರಾಜ ಕಲ್ಕಾ ಬಿಂದಾದಿನ ಕಥಕ ಮಹೋತ್ಸವದಲ್ಲಿ ಕಾರ್ಯಕ್ರಮ.

1985 ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಇವರ ಆಶ್ರಯದಲ್ಲಿ ಮದ್ರಾಸನಲ್ಲಿ ನಡೆದ ಅಕಾಡೆಮಿ ಅವಾರ್ಡ್ಸ 1984. ಬಹುಮಾನ ವಿತರಣಾ ಸಮಾರಂಭದಲ್ಲಿ ಕಾರ್ಯಕ್ರಮ.

1985 ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಇವರ ಆಶ್ರಯದಲ್ಲಿ ನಡೆದ ಲೋಕೊತ್ಸವದಲ್ಲಿ ಕಾರ್ಯಕ್ರಮ

1985 ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಇವರ ಆಶ್ರಯದಲ್ಲಿ ನಡೆದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದಲ್ಲಿ ಪಾಲ್ಗೊಂಡು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಎಚ್ ಎಲ್. ನಾಡಗೌಡ ಅವರಿಂದ ಪ್ರಶಸ್ತಿ ಪಡೆದರು.

1985 ರಲ್ಲಿ ಯಲ್ಲಾಪೂರದ ಜಾನಪದ ರಸಮಂಜರಿಯಲ್ಲಿ ಪ್ರದರ್ಶನ.

1986 ರಲ್ಲಿ ದೆಹಲಿಯಲ್ಲಿ 45 ದಿನಗಳವರೆಗೆ ನಡೆದ ಅಪಾನಾ ಉತ್ಸವದಲ್ಲಿ ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀ ಶಂಕರ ದಯಾಳ ಶರ್ಮಾ ಮತ್ತು ಪ್ರಧಾನಮಂತ್ರಿ ಶ್ರೀ ದಿ. ರಾಜೀವ ಗಾಂಧಿ ಈಗಿನ ಕಾಂಗ್ರೇಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಸಮ್ಮುಖದಲ್ಲಿ ಕಾರ್ಯಕ್ರಮ.

1986 ರಲ್ಲಿ ಕನ್ನಡದ ಚಂದ್ರಹಾಸ ಚಲನ ಚಿತ್ರಕ್ಕೆ ಸಂಗೀತ ನೀಡಲು ಕರಡಿ ಮಜಲು ಕಾರ್ರಕ್ರಮ ನಡೆದದ್ದು

1986 ರಲ್ಲಿ ಬಾಂಬೆಯ ರವೀಂದ್ರ ನಾಟ್ಯ ಮಂದಿರದಲ್ಲಿ ನಡೆದ ಅಕಾಡೆಮಿ ಅವಾರ್ಡ್ಸ್ 1985ರ ಬಹುಮಾನ ವಿತರಣಾ ಸಮಾರಂಭದಲ್ಲಿ ಕಾರ್ಯಕ್ರಮ.

1987 ರಲ್ಲಿ ಪಾಂಡಿಚೇರಿಯಲ್ಲಿ ನಡೆದ ಸೌತಜೊನ ಕಲ್ಚರಲ್ ಸೆಂಟರ್ (ಎಸ್.ಸಿ.ಝೆಡ್.ಸಿ.ಸಿ) ಇವರ ಆಶ್ರಯದಲ್ಲಿ ನಡೆದ "FETEDE PONDICHERRY" ಉತ್ಸವದಲ್ಲಿ ಕಾರ್ಯಕ್ರಮ.

1988 ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಆಶ್ರಯದಲ್ಲಿ ಕೊಲ್ಕತ್ತಾದಲ್ಲಿ ನಡೆದ ಅಕಾಡೆಮಿ ಅವಾರ್ಡ್ಸ್ 1987. ಬಹುಮಾನ ವಿತರಣಾ ಸಮಾರಂಭದಲ್ಲಿ ಕಾರ್ಯಕ್ರಮ.

1988 ರಲ್ಲಿ ದೆಹಲಿಯ ಕರ್ನಾಟಕ ಉತ್ಸವದಲ್ಲಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಇವರ ಸಮ್ಮುಖದಲ್ಲಿ ಕಾರ್ಯಕ್ರಮ.

1988 ರಲ್ಲಿ ಹಂಪಿಯ ವಿಜಯನಗರ ದಸರಾ ಉತ್ಸವದಲ್ಲಿ ಪ್ರದರ್ಶನ.

1989 ರಲ್ಲಿ ಬೆಂಗಳೂರಿನಲ್ಲಿ ನಡೆದ ಆರ್. ವೆಂಕಟರಾಮನರ ಅಧ್ಯಕ್ಷತೆಯಲ್ಲಿ ನಡೆದ ಯುವ ಸಂಗೀತ ನೃತ್ಯ ಮಹೋತ್ಸವದಲ್ಲಿ ಕಾರ್ಯಕ್ರಮ.

1992 ರಲ್ಲಿ ಕಾರವಾರದಲ್ಲಿ ನಡೆದ ಕಾರಾವಳಿ ಉತ್ಸವದಲ್ಲಿ ಕಾರ್ಯಕ್ರಮ.

1992 ರಲ್ಲಿ ಬನಹಟ್ಟಿಯಲ್ಲಿ ನಡೆದ ವಿಜಾಪೂರ ಜಿಲ್ಲಾ ಜಾನಪದ ಉತ್ಸವದಲ್ಲಿ ಕಾರ್ಯಕ್ರಮ.

1992 ರಲ್ಲಿ **"ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ"** ಆಶ್ರಯದಲ್ಲಿ ನಡೆದ ವಿಜಾಪೂರ ಜಿಲ್ಲಾ ಜಾನಪದ ಕಲಾ ಮಹೋತ್ಸವ ಕಾರ್ಯಕ್ರಮ.

1992 ರಲ್ಲಿ ಬೆಂಗಳೂರಿನಲ್ಲಿ ನಡೆದ ಸಾರ್ಕ್ ದೇಶಗಳ ದಕ್ಷಿಣ ಏಷ್ಯಾ ಉತ್ಸವದಲ್ಲಿ ಕಾರ್ಯಕ್ರಮ.

1993 ರಲ್ಲಿ ಕೋಲ್ಕತ್ತದಲ್ಲಿ ನಡೆದ 'ಇಂಡಿಯಾ ಇಂಟರನ್ಯಾಶ್‌ನಲ್ ಮ್ಯೂಜಿಕ ಫೇಸ್ಟಿವಲ್" ನಲ್ಲಿ ಕಾರ್ಯಕ್ರಮ.

1995 ರಲ್ಲಿ ಪಟ್ಟದಕಲ್ಲು ನಲ್ಲಿ ನಡೆದ "ಪಟ್ಟದಕಲ್ಲು ರಾಷ್ಟ್ರೀಯ ಉತ್ಸವದಲ್ಲಿ" ದಲ್ಲಿ ಕಾರ್ಯಕ್ರಮ.

1996 ರಲ್ಲಿ ಕಾಗವಾಡದಲ್ಲಿ ನಡೆದ "ಜಾನಪದ ಕಲಾಮೇಳ"ದಲ್ಲಿ ಪ್ರದರ್ಶನ.

1997 ರಲ್ಲಿ ಸಮೀರವಾಡಿಯಲ್ಲಿ ನಡೆದ "ವಿಜಾಪೂರ ಜಿಲ್ಲಾ 7ನೇಯ ಕನ್ನಡ ಸಾಹಿತ್ಯ ಸಮ್ಮೇಳನ"ದಲ್ಲಿ ಕಾರ್ಯಕ್ರಮ.

1997 ರಲ್ಲಿ ಬೆಂಗಳೂರಿನಲ್ಲಿ ನಡೆದ 4ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪ್ರದರ್ಶನ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಕ ವೈ. ಕೆ. ಮುದ್ದುಕೃಷ್ಣ ಹಾಗೂ ಸಚಿವೆ ಲೀಲಾದೇವಿ ಆರ್. ಪ್ರಸಾದ ಸಮ್ಮುಖದಲ್ಲಿ ಕಾರ್ಯಕ್ರಮ.

2000 ರಲ್ಲಿ ಪಟ್ಟದಕಲ್ಲಿನಲ್ಲಿ ನಡೆದ "ಪಟ್ಟದಕಲ್ಲು ರಾಷ್ಟ್ರೀಯ ಉತ್ಸವ"ದಲ್ಲಿ ಪ್ರದರ್ಶನ.

2002 ರಲ್ಲಿ ಪಟ್ಟದಕಲ್ಲಿನಲ್ಲಿ ನಡೆದ "ಚಾಲುಕ್ಯ ಉತ್ಸವದಲ್ಲಿ" ರಾಣಿ ಸತೀಶ ಅವರಿಂದ ಪಾರಿತೋಷಕ.

2003 ರಲ್ಲಿ ರನ್ನ ಬೆಳಗಲಿಯಲ್ಲಿ ನಡೆದ "ಕೈವಲ್ಯ ಪದ್ಧತಿಯಲ್ಲಿ ವಿಚಾರ ಸಂಕೀರ್ಣ"ದಲ್ಲಿ ಕಾರ್ಯಕ್ರಮ.

2004 ರಲ್ಲಿ ಶ್ರೀ ಗುರು ರಾಘವೇಂದ್ರ ಸ್ವಾಮಿಗಳವರ 333 ನೇ ಪುಣ್ಯಸ್ಮರಣೆ ಆರಾಧನೆಯಲ್ಲಿ ಶ್ರೀ ಶ್ರೀ ಶ್ರೀ ಶುಗುನೇಂಧ್ರತೀರ್ಥ ಸ್ವಾಮಿಗಳ ಸಮ್ಮುಖದಲ್ಲಿ ಕಾರ್ಯಕ್ರಮ ನೀಡಿ ಅವರಿಂದ ಆಶೀರ್ವಾದ.

2004 ರಲ್ಲಿ ಶ್ರೀಕೃಷ್ಣ ಪಾರಿಜಾತ ಸಮ್ಮೇಳನ, ಮಹಾಲಿಂಗಪುರ. 29 ಫೆಬ್ರುವರಿ

2004 ರಲ್ಲಿ ಚಂದನವಾಹಿನಿ ಟಿವಿ. ಕಾರ್ಯಕ್ರಮ ಎಪ್ರೀಲ್ 10 ಬೆಂಗಳೂರು.

2004 ರಲ್ಲಿ ರಾಜ್ಯೋತ್ಸವ ಕಾರ್ಯಕ್ರಮ ಬೆಂಗಳೂರ ನವ್ಹೆಂಬರ 1.

2005 ರಲ್ಲಿ 334ನೇ ಆರಾಧನಾ ಮಹೋತ್ಸವ ಶ್ರೀ ರಾಘವೇಂದ್ರ ಗುರು ಸಾರ್ವಭೌಮ ರಥೋತ್ಸವ ಕಾರ್ಯಕ್ರಮ ಮಂತ್ರಾಲಯ.

2005 ರಲ್ಲಿ ಜಾನಪದ ಉತ್ಸವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಪ್ಪಳ.

2005 ರಲ್ಲಿ ಮುಂಗಾರು ಮಳೆ ಹಬ್ಬ ಕಾರ್ಯಕ್ರಮದಲ್ಲಿ ಡಾ॥ ಚಂದ್ರಶೇಖರ ಕಂಬಾರ ಹಾಗೂ ಚಿತ್ರ ನಟ ಪುನೀತ ರಾಜಕುಮಾರ ಅವರ ಸಮ್ಮುಖದಲ್ಲಿ ಕಾರ್ಯಕ್ರಮ.

2005 ರಲ್ಲಿ ಜಾನಪದ ಕರಡಿ ಮಜಲು ಸಂಭ್ರಮ 2005 ರಂದು ಕುಚನೂರ

2005 ರಲ್ಲಿ ಶ್ರೀ 1008 ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾಂದಗಳ 17ನೇ ಪಟ್ಟಾಭೀಷೇಕ ಮಹೋತ್ಸವ ಮಹಾಲಿಂಗಪುರ.

2006 ರಲ್ಲಿ "ಸುವರ್ಣ ಸಂಸ್ಕೃತಿ ದಿಬ್ಬಣ" ಮುಧೋಳದಲ್ಲಿ ಕಾರ್ಯಕ್ರಮ.

2007 ರಲ್ಲಿ ಮೈಸೂರು ದಸರಾ ಮಹೋತ್ಸವ – 2007 ಮೈಸೂರು.

2008 ರಲ್ಲಿ ಚಾಲುಕ್ಯ ಉತ್ಸವ ಪಟ್ಟದಕಲ್ಲಿನಲ್ಲಿ ಕಾರ್ಯಕ್ರಮ.

2008 ರಲ್ಲಿ ಜಾನಪದ ಜಾತ್ರೆ 9, 10, ಡಿಸೆಂಬರ್ ಬೆಂಗಳೂರಿನಲ್ಲಿ

2009 ರಲ್ಲಿ ದೆಹಲಿ ಕರ್ನಾಟಕ ಸಂಘ ರಾಜ್ಯೋತ್ಸವ ಕಾರ್ಯಕ್ರಮ ನವ್ಹೆಂಬರ 30 ಕಾರ್ಯಕ್ರಮ ದೆಹಲಿ.

2009 ರಲ್ಲಿ ಬೀದರ ಉತ್ಸವ ಕಾರ್ಯಕ್ರಮ.

2010 ರಲ್ಲಿ ಶ್ರೀ ಕೃಷ್ಣದೇವರಾಯ 500 ವರ್ಷಾಚರಣೆಯ ಸಂಸ್ಕೃತಿ ಕಾರ್ಯಕ್ರಮ ಕಂಠೀರವ ಕ್ರೀಡಾಂಗಣ ಬೆಂಗಳೂರು.

2010 ರಲ್ಲಿ ಹಂಪಿ ಉತ್ಸವ ಶ್ರೀ ಕೃಷ್ಣದೇವರಾಯರ 500 ನೇ ವರ್ಷ ಆಚರಣೆಯ ಉತ್ಸವ 29–01–2010.

27.01.2010 ಬಹತ್ ಶಿವನ ಮೂರ್ತಿ ಉದ್ಘಾಟನೆ ಕಾರ್ಯಕ್ರಮ ಮಂಟೂರ.

29.01.2010 ಹಂಪಿ ಉತ್ಸವ–10 ಶ್ರೀ ಕೃಷ್ಣದೇವರಾಯರ 500 ನೇಯ ವರ್ಷಾಚರಣೆಯ ಉತ್ಸವದಲ್ಲಿ ಕಾರ್ಯಕ್ರಮ.

03.02.2010 'ಹೆಲ್ಫ್ ಏ ಚೈಲ್ಡ್ ಜಾಹೀರಾತು ಚಿತ್ರಿಕರಣ' ಗೋದಾವರಿ ಸಕ್ಕರೆ ಕಾರ್ಖಾನೆ, ಸಮೀರವಾಡಿ ಕಾರ್ಯಕ್ರಮ.

20.02.2010 ಸುವರ್ಣ ಚಾನೆಲ್‌ನಲ್ಲಿ 2ನೇ ಸುತ್ತಿನ ಸೂಪರ್ ಸ್ಟಾರ್ ಆಫ್ ಕರ್ನಾಟಕ ಪ್ರಸಾರವಾಗಿತ್ತು.

| | |
|---|---|
| 23.02.2010 | ಜಲ್ಲಾ ಮಟ್ಟದ ಯುವಜನಮೇಳ ಬಾದಾಮಿ ತಾಲೂಕಿನ ಗೋವಿನಕೊಪ್ಪದಲ್ಲಿ ಕಾರ್ಯಕ್ರಮ. |
| 04.03.2010 | ಉತ್ತರ ಕರ್ನಾಟಕ ಜಾನಪದೋತ್ಸವ ರವೀಂದ್ರ ಕಲಾಕ್ಷೇತ್ರದಲ್ಲಿ ಬೆಂಗಳೂರಿನಲ್ಲಿ ಕಾರ್ಯಕ್ರಮ. |
| 15.05.2010 | ಶ್ರೀ ಸಿದ್ದಾರೂಢರ ಹಾಗೂ ಶ್ರೀ ಗುರುನಾಥಾರೂಢರ ಮೂರ್ತಿ ಸ್ಥಾಪನೆ ಕಾರ್ಯಕ್ರಮ ಬನಹಟ್ಟಿ. |
| 23.05.2013 | ರಾಜ್ಯಮಟ್ಟದ ಭಗೀರಥ ಉಪ್ಪಾರ ಸಮಾಜದ ಸಮಾವೇಶ ಮಹಾಲಿಂಗಪೂರದಲ್ಲಿ ಎರಡು ದಿನ ಕಾರ್ಯಕ್ರಮ. |
| 16.07.2010 | ಬಸವಸೇನೆ ಪುಣಾದಲ್ಲಿ ಕಾರ್ಯಕ್ರಮ. |
| 24.07.2010 | ಚಂದನವಾಹಿನಿ ಬೆಳಗು ಸಂವಾದ ಕಾರ್ಯಕ್ರಮದಲ್ಲಿ ಬಾಗಿ. |
| 25.08.2010 | ಮಹಾಲಿಂಗಪೂರದ ಶ್ರೀ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮದಲ್ಲಿಯ ಶ್ರೀ ಸಿದ್ಧಾರೂಢ ಸ್ವಾಮೀಜಿಯವರ 81 ನೇ ಪುಣ್ಯಾರಾಧಣೆಯ ನಿಮಿತ್ಯ ತಪ್ಪೋತ್ಸವ ಸಮಾರಂಭದಲ್ಲಿ ಕಾರ್ಯಕ್ರಮ. |
| 28.08.2010 | ಮುಧೋಳದಲ್ಲಿ ವೇಮ ಶ್ರಾವಣ ಕಾರ್ಯಕ್ರಮ. |
| 3.09.2010 | ಬೆಳಗಾವ ವಿಭಾಗ ಮಟ್ಟದ ಯುವಜನ ಮೇಳ ಗುಳೇದಗುಡ್ಡ ದಲ್ಲಿ ಮೂರು ದಿನದ ಕಾರ್ಯಕ್ರಮದಲ್ಲಿ (ಪ್ರಥಮ ಸ್ಥಾನ) |
| 24.09.2010 | ಸಮಯ ನ್ಯೂಸ್ ವಾಹಿನಿ ನಮ್ಮ ಕಲೆ ನಮ್ಮ ಬದುಕು ಕಾರ್ಯಕ್ರಮದಲ್ಲಿ ನಮ್ಮ ಕರಡಿ ಮಜಲು ಕುರಿತಾಗಿ ಪರಿಚಯ ಕಾರ್ಯಕ್ರಮ ಪ್ರಸಾರವಾಗಿತ್ತು. |
| 07.11.2010 | ಬನಹಟ್ಟಿಯಲ್ಲಿ ಶ್ರೀ ಮಲ್ಲಿಕಾರ್ಜುನ ದೇವರ ಜಾತ್ರಾ ಮಹೋತ್ಸವದಲ್ಲಿ ಕಾರ್ಯಕ್ರಮ. |
| 16.11.2010 | ಮಧ್ಯಪ್ರದೇಶ ರಾಜ್ಯದ ಉಜ್ಜಯಿನಿಲ್ಲಿ ಕಾಳಿದಾಸ ಸಮಾರೋಹ ಕಾರ್ಯಕ್ರಮ. |
| 05.12.2010 | ಮುಧೋಳದಲ್ಲಿ ನಡೆದ ಪಂಚ ಪೀಠಾದೀಶ್ವರರ ಅಡ್ಡ ಪಲ್ಲಕ್ಕಿ ಮಹೋತ್ಸವದಲ್ಲಿ ಕಾರ್ಯಕ್ರಮ. |
| 30.01.2011 | ಕೇರಳ ರಾಜ್ಯ 4ನೇ ಕನ್ನಡ ಸಮ್ಮೇಳನ ಕಾಸರಗೂಡುದಲ್ಲಿ ಕಾರ್ಯಕ್ರಮ. |

31.01.2011 ಶಂಕರ ಬಿದರಿಯವರ ತಂದೆ ದಿ. ಮಹಾದೇವಪ್ಪ ಬಿದರಿಯವರ 20 ನೇ ಪುಣ್ಯಸ್ಮರಣೆಯ ಅಂಗವಾಗಿ ಬನಹಟ್ಟಿಯಲ್ಲಿ ಕಾರ್ಯಕ್ರಮ.

18.02.2011 ಶ್ರೀ ಆಂಜನೆಯ ಸ್ವಾಮಿ ಬ್ರಹ್ಮ ರಥೋತ್ಸವದ ಅಂಗವಾಗಿ ಬೆಂಗಳೂರಿನ ಏರೋಹಳ್ಳಿಯಲ್ಲಿ ಕಾರ್ಯಕ್ರಮ.

23.02.2011 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಬೆಂಗಳೂರಿನಲ್ಲಿ ಧ್ವನಿ ಮುದ್ರಣ ಕಾರ್ಯಕ್ರಮ. ಅರವಿಂದ ಸ್ಟುಡಿಯೋ. ಎರಡು ದಿನ

02.03.2011 ಗೋಕಾಕ (ಫಾಲ್ಸ)ದಲ್ಲಿ ನಡೆದ ಶ್ರೀ ಮಹಾಲಿಂಗೇಶ್ವರ ಜಾತ್ರಾ ನಿಮಿತ್ಯ ಕಾರ್ಯಕ್ರಮ.

03.03.2011 ಕೊಲ್ಲಾಪೂರ ಕನೇರಿಯ ಸಿದ್ಧಗಿರಿಯಲ್ಲಿ ಶ್ರೀ ಅದೃಷ್ಯ ಕಾಡಸಿದ್ಧೇಶ್ವರ ಸ್ವಾಮಿಗಳ ಸಮ್ಮುಖದಲ್ಲಿ ಕಾರ್ಯಕ್ರಮ.

09.03.2011 ತಾಲ್ಲೂಕಾ ಆಡಳಿತ ಮುಧೋಳ 'ವಿಶ್ವ ಕನ್ನಡ ಸಮ್ಮೇಳನ' ಬೆಳಗಾವಿ 'ಕನ್ನಡ ನುಡಿ ತೇರು' ಯಾನ ಮಹಾಲಿಂಗಪೂರದಲ್ಲಿ ಕಾರ್ಯಕ್ರಮ.

11/12/13. ವಿಶ್ವ ಕರ್ಮ ಕನ್ನಡ ಸಮ್ಮೇಳನ ಬೆಳಗಾವಿಯಲ್ಲಿ ಕಾರ್ಯಕ್ರಮ.

03.2011 & 'ಶರಣ ಸಂಸ್ಕೃತಿ ಉತ್ಸವ' ಬಿದರದಲ್ಲಿ ಕಾರ್ಯಕ್ರಮ.

12.04.2011 ಸಿದ್ಧಲಿಂಗೇಶ್ವರ ಮಠದ ಉದ್ಘಾಟನೆಯ ಅಂಗವಾಗಿ ಬೀಳಗಿ ತಾಲ್ಲೂಕಿನ ಹೊನ್ನಿಹಾಳದಲ್ಲಿ ಕಾರ್ಯಕ್ರಮ.

10.04.2011 ಇಂಡಿಯನ್ ಟ್ಯಾಲೆಂಟ್ ಸೀಸನ್–3 ಕಲರ್ಸ್ ಟಿ.ವಿ ಯವರು ಮಹಾಲಿಂಗಪುರಕ್ಕೆ ನಮ್ಮ ಕಲೆಯ ವಿಡಿಯೋ ಕಾರ್ಯಕ್ರಮ ಮಾಡಿಕೊಂಡು ಹೋಗಿದ್ದು.

22.04.2011 ಅಖಿಲ ಭಾರತ ಪ್ರಥಮ ಜಾನಪದ ಸಮ್ಮೇಳನ ಬಿದರನಲ್ಲಿ 4 ದಿನದ ಕಾರ್ಯಕ್ರಮ.

06.05.2011 ಶ್ರೀ ಆಂಜನೇಯ ಸ್ವಾಮಿ ಮೂರ್ತಿ ಸ್ಥಾಪನೆ, ಕೆ.ಇ.ಬಿ ಬನಹಟ್ಟಿ ಯಲ್ಲಿ ಕಾರ್ಯಕ್ರಮ.

12.05.2011 ಶ್ರೀ ಶುಭೋದಯ ಮಹಾರಾಜರ ಜಾತ್ರಾ ಮಹೋತ್ಸವ ಮೂಡಲಗಿಯಲ್ಲಿ ಕಾರ್ಯಕ್ರಮ.

09.05.2011 ಶ್ರೀ ನೀಲಕಂಠೇಶ್ವರ ಬೆಳ್ಳಿ ಮೂರ್ತಿ ಸ್ಥಾಪನೆ ಮಹಾಲಿಂಗಪುರದಲ್ಲಿ ಕಾರ್ಯಕ್ರಮ.

20.05.2011 ವಿಜಾಪುರದಲ್ಲಿ ನಡೆದ ನವರಸಪೂರ ಉತ್ಸವದಲ್ಲಿ ಕಾರ್ಯಕ್ರಮ.

2012 ರಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ವತಿಯಿಂದ ನಡೆದ ಕನ್ನಡ ಭಾಷಾ ಭಾವೈಕ್ಯ ಸಮಾವೇಶ ಸೊಲ್ಲಾಪೂರ–ಮಹಾರಾಷ್ಟ್ರ.

2012 ರಲ್ಲಿ ಮಕ್ಕಳ ಸಾಹಿತಿ ಅಣ್ಣಾಜಿ ಫಡತಾರೆ ಅವರ 75ನೇ ಹುಟ್ಟುಹಬ್ಬ ಅಭಿನಂದನ ಸಮಾರಂಭ ಹಾಗೂ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮಾವೇಶ.

2012 ರಲ್ಲಿ ಶರಣೋತ್ಸವ 2012 ಮಹಾಲಿಂಗಪುರ.

2012 ರಲ್ಲಿ ಎಲ್.ಡಿ. ಚಂದಾವರಿಯವರು ಅಭಿನಂದನ ಸಮಾರಂಭ ಹಾಗೂ ಸಮರ್ಥ ಗ್ರಂಥದ ಬಿಡುಗಡೆ ಕಾರ್ಯಕ್ರಮ ಗದಗ.

2012 ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಕನಕಪುರ ತಾಲೂಕಿನ ತುಂಗಣಿ ಗ್ರಾಮದಲ್ಲಿ ಏರ್ಪಡಿಸಿದ್ದ "ಜಾನಪದಜಾತ್ರೆ" ಕಾರ್ಯಕ್ರಮ.

2012 ರಲ್ಲಿ ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯ ವಿಘಾಟನ್ ಕಾರ್ಯಕ್ರಮ ಕೋಟಿಗೋಡಿ ಶಿಗ್ಗಾಂವಿ ತಾಲೂಕ.

2012 ರಲ್ಲಿ ಜೆ.ಸಿ.ಆಯ್. ಮೈಸೂರ ವತಿಯಿಂದ ನಡೆದ ನಮ್ಮ ಜನ ನಮ್ಮ ನಡೆ ಈ ಜನಪದ ಕಾರ್ಯಕ್ರಮ ಸೆನೆಟ್ ಭವನದಲ್ಲಿ ಕಾರ್ಯಕ್ರಮ ಮೈಸೂರ.

2012 ರಲ್ಲಿ ಜಗಜ್ಯೋತಿ ಬಸವಣ್ಣನವರ ಜಯಂತಿ ಶತಮಾನೋತ್ಸವ ಹಾಗೂ ಮಹಾತಪಸ್ವಿ ಚಿತ್ತರಗಿ ಇಲಕಲ್ಲ ಶ್ರೀ ವಿಜಯ ಮಹಾಂತ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ ಹಾಗೂ ಶರಣ ಸಂಸ್ಕೃತಿ ಉತ್ಸವ ಸಮಾರಂಭದಲ್ಲಿ ಕಾರ್ಯಕ್ರಮ.

2012 ರಲ್ಲಿ ರನ್ನ ವೈಭವ – 2012 ಸಾಂಸ್ಕೃತಿಕ ಉತ್ಸವ, ಮುಧೋಳ

| | |
|---|---|
| 03–10–2012 | ಕಲಾ ಪ್ರಕಾಶ ನಾಟ್ಯ ಪ್ರತಿಷ್ಠಾನ, ಮನಸೂರ ಧಾರವಾಡ ಆಶ್ರಯದಲ್ಲಿ ನಡೆದ ನಟಶೇಖರ ಪಂಡಿತ ಬಸವರಾಜ ಮನಸೂರ ಅವರ ಸ್ಮರಣಾರ್ಥ ಸಾಂಸ್ಕೃತಿಕ ಕಲಾ ಸೌರಭದಲ್ಲಿ ಕಾರ್ಯಕ್ರಮ, ಧಾರವಾಡ |
| 10–10–2012 | ವಿಶ್ವವಿಖ್ಯಾತ ಮೈಸೂರು ದಸರಾ ಮೆರವಣಿಗೆಯ ಬಾಗಲಕೋಟ ಜಿಲ್ಲೆಯ ಹೋಳಿ ಹುಣ್ಣಿಮೆ ಆಚರಣೆ ಸ್ತಬ್ಧ ಚಿತ್ರ ತಯಾರಿಸಲು ಸಹಾಯಕ ಕಲಾವಿದನಾಗಿ ಕೆಲಸ ಮಾಡಲು ಭಾಗವಹಿಸಿ ಮೆಚ್ಚುಗೆ ಪಡೆದಿದ್ದು |
| 24–11–2012 | ಜಿಲ್ಲಾ ಆಡಳಿತ ಬಾಗಲಕೋಟ, ರನ್ನ ಪ್ರತಿಷ್ಠಾನ, ಮುಧೋಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರು ನಡೆಸಿದ "ರನ್ನ ವೈಭವ – 2012" ಸಾಂಸ್ಕೃತಿಕ ಉತ್ಸವದ ಮೆರವಣಿಗೆಯಲ್ಲಿ ಕಾರ್ಯಕ್ರಮ |
| 12–12–2012 | ಬೆಂಗಳೂರಿನ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎಸ್. ಮುನಿರಾಜು ಅವರ 12–12–12 ವಿಶೇಷ ಸಂಖ್ಯೆಯಡಿ 55 ನೇ ಜನ್ಮದಿನ ಆಚರಣೆಯಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ ಹಾಗೂ ವಿ. ಸೋಮಣ್ಣ ಅವರ ಸಮ್ಮುಖದಲ್ಲಿ ಕಾರ್ಯಕ್ರಮ |
| 12–01–2013 | ನೇಕಾರರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ (ರಿ) ಬೆಂಗಳೂರು ಮತ್ತು ನೇಕಾರವಾಣಿ ಪತ್ರಿಕೆಯವರು"ನೇಕಾರ ರತ್ನ" ಪ್ರಶಸ್ತಿ ನೀಡಿ ಸನ್ಮಾನಿಸಿದ್ದು. ಸ್ಥಳ ರವೀಂದ್ರ ಕಲಾ ಕ್ಷೇತ್ರ ಬೆಂಗಳೂರು |
| 13–01–2013 | ಕರ್ನಾಟಕ ಲಲಿತಕಲಾ ಅಕಾಡೆಮಿಯ 41 ನೇ ವಾರ್ಷಿಕ ಚಿತ್ರಕಲಾ ಪ್ರದರ್ಶನ ಹಾಗೂ ಬಹುಮಾನ ವಿತರಣಾ ಸಮಾರಂಭದಲ್ಲಿ ಕಾರ್ಯಕ್ರಮ. ಸ್ಥಳ : ಕವಿಚಕ್ರವರ್ತಿ ರನ್ನ ಭವನ, ಮುಧೋಳ |
| 19–1–2013 | ಶ್ರೀ ವಿವೇಕ ಮೆಹ್ತಾ ಬಾಂಬೆರವರು ಚಿತ್ರಿಸಿದ "ಎಲ್ಲ ಕಲೆಗಳಿಗೂ ಮೂಲ ಜಾನಪದ" ಸಾಕ್ಷ್ಯ ಚಿತ್ರದಲ್ಲಿ ಕಾರ್ಯಕ್ರಮ. ಸ್ಥಳ : ಶ್ರೀ ಮಹಾಲಿಂಗೇಶ್ವರ ಮಠ, ಮಹಾಲಿಂಗಪುರ ಹಾಗೂ ಬಾದಾಮಿಯ ಗುಹೆಗಳು ಹಾಗೂ ಮಂದಿರಗಳಲ್ಲಿ 2 ದಿನ ಭಾಗಿ |

| | |
|---|---|
| 01–02–2013 | ರಿಂದ 15–02–2013 ಹರಿಯಾಣ ರಾಜ್ಯದ ಸೂರಜ ಕುಂಡದಲ್ಲಿ 15 ದಿನಗಳ ವರೆಗೆ ನಡೆದ "26 ನೇ ಸೂರಜಕುಂಡ ಅಂತರರಾಷ್ಟ್ರೀಯ ಕರಕುಶಲ ಮೇಳ"ದಲ್ಲಿ ವಿವಿಧ ದೇಶಗಳ ಕಲಾವಿದರ ಜೊತೆಯಲ್ಲಿ ಕಾರ್ಯಕ್ರಮ |
| 20 ಮತ್ತು 21 | ಮಾರ್ಚ 2013 ಸೌತಜೂನ್ ಕಲ್ಚರಲ್ ಸ್ಟೆಂಟರ್, ನಾಗಪೂರ ಇವರ ಆಶ್ರಯದಲ್ಲಿ ನಡೆದ **"ಮಿಟ್ಟಿ ಕಾ ರಂಗ್"** ಉತ್ಸವದಲ್ಲಿ ಕಾರ್ಯಕ್ರಮ ಆಂಧ್ರಪ್ರದೇಶದ ತಿರುಪತಿ |
| 29 ಮತ್ತು 30 | ಫೆಬ್ರುವರಿ 2013 ಪ್ರಸಿದ್ಧ ನ್ಯೂಸ ಚಾನೆಲ್ ಸುವರ್ಣ ವಾಹಿನಿಯವರು ಗ್ರಾಮೀಣ ಪ್ರತಿಭೆಗಳಿಗಾಗಿ ನಡೆಸಿದ ನಮ್ಮೂರ್ರ ಹಮ್ಮಿರದಲ್ಲಿ ಕಾರ್ಯಕ್ರಮ.<br>ಸ್ಥಳ : ಕೆ. ಆರ್. ಲಕಂ ಕಾಲೇಜ, ಮುಧೋಳ |
| 14–05–2013 | ಮಕ್ಕಳ ಸಾಹಿತಿ ಅಣ್ಣಾಜಿ ಫಡತಾರೆ ಅಭಿನಂದನ ಸಮಿತಿ ಮಹಾಲಿಂಗಪೂರ ಇವರು ಮಹಾಲಿಂಗಪೂರದಲ್ಲಿ ನಡೆಸಿದ ಅಣ್ಣಾಜಿ ಯವರ ಅಭಿನಂದನ ಸಮಾರಂಭ ಮತ್ತು "ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮಾವೇಶ" ದಲ್ಲಿ ನಮ್ಮ ಸಂಘ ಭಾಗವಹಿಸಿ ಕಾರ್ಯಕ್ರಮ ನೀಡಿದ್ದು. |
| 13–06–2013 | "ಅಂಬ್ಯುಲೆನ್ಸ್ ಕೊಡುಗೆ ಕಾರ್ಯಕ್ರಮ" ಕೆ.ಎಲ್.ಇ. ಆಸ್ಪತ್ರೆ ಬೆಳಗಾವಿ ಇವರಿಗೆ ಭಾರತೀಯ ಸ್ಟೇಟ್ ಬ್ಯಾಂಕ ಮಹಾಲಿಂಗಪೂರ ಇವರಿಂದ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಜನಮೆಚ್ಚುಗೆ ಪಡೆದದ್ದು. |
| 14–06–2013 | ಕನ್ನಡ ಮತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ ಅವರನ್ನು ವಿಶಿಷ್ಟ ರೀತಿಯಲ್ಲಿ ಕಲಾತ್ಮಕವಾಗಿ ಫಲ–ಪುಷ್ಪ, ಹಾರ–ತುರಾಯಿ ಜೊತೆಗೆ ಕರಡಿ ಮಜಲಿನ ಸಮವಸ್ತ್ರಗಳಾದ ಶಲ್ಯ, ಪೇಟಾ ತೊಡಿಸಿ ಅಪರೂಪದ ಪುರಾತನ ಸೂರ್ಯವಾದ್ಯವನ್ನು ಕೈಯಲ್ಲಿ ಕೊಟ್ಟು ಕಲಾತ್ಮಕವಾಗಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಸನ್ಮಾನಿಸಿದ ಕಾರ್ಯಕ್ರಮ ಮಾಡಿತು. |
| 16–06–2013 | "ಮೈಸೂರು ಜಿಲ್ಲಾ 12 ನೇ ಕನ್ನಡ ಸಾಹಿತ್ಯ ಸಮ್ಮೇಳನ" ನಂಜನಗೂಡಿನಲ್ಲಿ ಕಾರ್ಯಕ್ರಮ ನೀಡಿತು. |

| | |
|---|---|
| 01–7–2013 | “ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮತ್ತು ರಥೋತ್ಸವ”ದಲ್ಲಿ ನಮ್ಮ ಸಂಘದಿಂದ ಕಾರ್ಯಕ್ರಮ ನೀಡಿದ್ದು. |
| 04–09–2013 | ಬೆಂಗಳೂರಿನ ಸುವರ್ಣ ನ್ಯೂಸ್ ಟಿ.ವ್ಹಿ. ವಾಹಿನಿ ಮತ್ತು ನಮ್ಮ ಕರಡಿ ಮಜಲು ಸಂಘದ ಕಲಾವಿದರೂ ಕೂಡಿಕೊಂಡು ಜಾನಪದ ಕರಡಿ ಮಜಲು ಕಲೆಯ ಕುರಿತಾಗಿ ವಿಶೇಷ ಕಾರ್ಯಕ್ರಮ ರೂಪಿಸಿ ಕಾರ್ಯಕ್ರಮ ವನ್ನು ಸಂಜೆ 4–30 ಗಂಟೆಗೆ ಪ್ರಸಾರ ಮಾಡಿತ್ತು. |
| 04–10–2013 | ದೇವಾಂಗ (ಹಟಗಾರ) ಯುವಕ ಸಂಘ (ರಿ) ಮಹಾಲಿಂಗಪೂರ ಇವರು ನಡೆಸಿದ ‘ಜಾನಪದ ದಸರಾ–2013” ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡಿದ್ದು. |
| 06–10–2013 | “ಮೈಸೂರು ದಸರಾ ಮಹೋತ್ಸವ–2013” ಸಾಂಸ್ಕ್ರತಿಕ ಕಾರ್ಯಕ್ರಮಗಳ ಅಂಗವಾಗಿ ಮೈಸೂರು ಚಿಕ್ಕ ಗಡಿಯಾರ ವೇದಿಕೆಯಲ್ಲಿ ಕರಡಿ ಮಜಲು ಕಾರ್ಯಕ್ರಮ ಯಶಸ್ವಿ ಪ್ರದರ್ಶನ ನೀಡಿದ್ದು. |
| 24–10–2013 | ಡಾ॥ ಬಿದರಿಯುವರ “ಆರಕ್ಷತೆ” ಕಾರ್ಯಕ್ರಮ. ಮುಗಳಖೋಡ ಮಠ ಬಿಜಾಪುರದಲ್ಲಿ ಕಾರ್ಯಕ್ರಮ ನೀಡಿದ್ದು. |
| 15–11–2013 | ಶ್ರೀ ವೀರಭದ್ರೇಶ್ವರ ದೇವಸ್ಥಾನ ಸಮಿತಿ, ಲೋಕಾಪುರ (ವೆಂಕಟಾಪುರ)ದಲ್ಲಿ ನಡೆದ “ಶ್ರೀ ವೀರಭದ್ರೇಶ್ವರ ದೇವಸ್ಥಾನ ಉದ್ಘಾಟನಾ ಸಮಾರಂಭ” ದಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡಿದ್ದು. |
| 26–11–2013 | ಸಂಘದ ಯುವ ಕಲಾವಿದರಾದ ಶ್ರೀ ಚನ್ನಮಲ್ಲಪ್ಪ ಕರಡಿಯವರಿಗೆ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಬಾಗಲಕೋಟ ಇವರಿಂದ “ಬಾಗಲಕೋಟ ಜಿಲ್ಲಾ ಯುವ ಪ್ರಶಸ್ತಿ” ಬಂದಿದ್ದು. |
| 12–12–2013 | ನಮ್ಮ ಕರಡಿ ಮಜಲು ಸಂಘದಿಂದ “ಜಾನಪದ ಸಂಗೀತ ಕಾರ್ಯಕ್ರಮ” ಹಮ್ಮಿಕೊಂಡು ಕಾರ್ಯಕ್ರಮ ನಡೆಸಿದ್ದು ಈ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿನ ರಾಜ್ಯೋತ್ಸವ |

ಪ್ರಶಸ್ತಿ ಪುರಸ್ಕೃತ ಮಳಲಿ ಗ್ರಾಮದ ಜಾನಪದ ಕಲಾವಿದ ಶ್ರೀ ಮಹಾದೇವ ಬಡಿಗೇರ ಅವರನ್ನು ಸನ್ಮಾನಿಸಿದ್ದು.

19–12–2013 ‘ಆಳ್ವಾಸ್ ವಿಶ್ವ ನುಡಿಸಿರಿ ವಿರಾಸತ್–2013” ರ ವಿಶ್ವ ಸಮ್ಮೇಳನದ ಮೆರವಣಿಗೆ ಹಾಗೂ ಸಾಂಸ್ಕೃತಿಕ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ನೀಡಿದ್ದು. ವಿದ್ಯಾಗಿರಿ, ಮೂಡುಬಿದಿರೆಯಲ್ಲಿ

2–1–2014 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗ ದಲ್ಲಿ ಮಹಾಲಿಂಗಪೂರದಲ್ಲಿ ನಡೆಸಿದ **“ವಚನ ಸಂಗೀತೋತ್ಸವ”** ಕಾರ್ಯಕ್ರಮದ ಮೆರವಣಿಗೆ ಯಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡಿದ್ದು.

05–01–2014 ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಬಾಗಲಕೋಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಇವರು ಬಾಗಲಕೋಟ ಜಿಲ್ಲೆ ಬಾದಾಮಿಯಲ್ಲಿ ಜರುಗಿದ **“ಚಾಲುಕ್ಯ ಉತ್ಸವ 2014”** ಮೆರವಣಿಗೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡಿದ್ದು.

30–02–2014 ಬನಹಟ್ಟಿ ನಗರದಲ್ಲಿ ಬರುವ ಎಲ್ಲಾ ಶಾಲೆಗಳಿಗೂ ಭೆಟ್ಟಿ ಕೊಟ್ಟು ವಿದ್ಯಾರ್ಥಿಗಳಿಗೆ ಕರಡಿ ಮಜಲು ಕಲೆಯ ಬಗ್ಗೆ ತಿಳುವಳಿಕೆ ಮಾರ್ಗದರ್ಶನ ನೀಡಿದ್ದು.

25–4–2014 “ಹೇಮರಡ್ಡಿ ಮಲ್ಲಮ್ಮ ಜಯಂತಿ” ಕಾರ್ಯಕ್ರಮದಲ್ಲಿ ಭಾಗವಹಿಸಿ ಮೆರವಣಿಗೆಯಲ್ಲಿ ಕಾರ್ಯಕ್ರಮ ನೀಡಿದ್ದು ಸ್ಥಳ : ಮುಧೋಳ

02–6–2014 “ಬಸವ ಜಯಂತಿ” ಜಿಲ್ಲಾಡಳಿತ ಬಾಗಲಕೋಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಾಗಲಕೋಟ, ಇವರು ನಡೆಸಿದ ಮೆರವಣಿಗೆಯಲ್ಲಿ ಕಾರ್ಯಕ್ರಮ ನೀಡಿದ್ದು. ಸ್ಥಳ – ಬಾಗಲಕೋಟ

01–7–2014 “ಪತ್ರಿಕಾ ದಿನಾಚರಣೆ” ಕಾರ್ಯಕ್ರಮದಲ್ಲಿ ಭಾಗವಹಿಸಿ ಜನ ಮೆಚ್ಚುಗೆ ಪಡೆದ ಸ್ಥಳ – ಬನಹಟ್ಟಿ

29–8–2014 ಮಹಾಲಿಂಗಪೂರದಲ್ಲಿ ನಡೆದ “ಗಣೇಶ ಚತುರ್ಥಿ” ಮೆರವಣಿಗೆಯಲ್ಲಿ ಕಾರ್ಯಕ್ರಮ ನೀಡಿದ್ದು.

| | |
|---|---|
| 8–9–2014 | ಸುಕ್ಷೇತ್ರ ಮಹಾಲಿಂಗಪುರದ ಶ್ರೀಗುರು ಮಹಾಲಿಂಗೇಶ್ವರರ ಜಾತ್ರಾ ಮಹೋತ್ಸವದಲ್ಲಿ ಸತತ ಮೂರು ದಿನ ಕಾರ್ಯಕ್ರಮ ನೀಡಿದ್ದು. |
| 25–9–2014 | ಮಹಾಲಿಂಗಪುರದ ಶ್ರೀ ಬನಶಂಕರಿ ದೇವಸ್ಥಾನದ ಶತಮಾನೋತ್ಸವದ ಹಾಗೂ ನವರಾತ್ರಿ ರಜತ ಮಹೋತ್ಸವ ದೇವಿಯ ಬೆಳ್ಳಿ ಮೂರ್ತಿ ಪ್ರತಿಷ್ಠಾಪನೆ "ದಸರಾ ಸಾಂಸ್ಕೃತಿಕ ಉತ್ಸವ" ದಲ್ಲಿ ಕಾರ್ಯಕ್ರಮ |
| 20–10–2014 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ನಮ್ಮ ಕರಡಿ ಮಜಲು ಸಂಘ ಸಂಯುಕ್ತ ಆಶ್ರಯದಲ್ಲಿ "ವಿಶ್ವ ಜಾನಪದ ದಿನ" ಕಾರ್ಯಕ್ರಮವನ್ನು ಆಚರಿಸಲಾಯಿತು.<br>ಸ್ಥಳ – ಶ್ರೀ ಗ್ರಾಮ ದೇವತೆ ದ್ಯಾಮವ್ವ ದೇವಸ್ಥಾನ ಮಹಾಲಿಂಗಪೂರ. |
| 23–10–2014 | ಕರ್ನಾಟಕ ಸರಕಾರ & ಸಂಸ್ಕೃತಿ ಇಲಾಖೆ, ಜಿಲ್ಲಾ ಆಡಳಿತ ಬೆಳಗಾವಿ ಹಾಗೂ ಪ್ರವಾಸೋದ್ಯಮ ಇಲಾಖೆ ಯಿಂದ ಮೂರು ದಿನಗಳ ಕಾಲ ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಜರುಗಿದ "ಕಿತ್ತೂರು ಉತ್ಸವ" 2014" ರಲ್ಲಿ ಕಾರ್ಯಕ್ರಮ ನೀಡಿದ್ದು. |
| 29–12–2014 | ಕರ್ನಾಟಕ ಜಾನಪದ ಅಕ್ಯಾಡಮಿ ಬೆಂಗಳೂರು, ಇವರು 2012–13 ನೇ ಸಾಲಿನ "ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭ" ಬೆಂಗಳೂರು ಸಂಸ ಬಯಲು ರಂಗ ಮಂದಿರದಲ್ಲಿ ಕಾರ್ಯಕ್ರಮ ನೀಡಿದ್ದು. |
| 31–1–2015 | ಕಲಾ ಜ್ಯೋತಿ ಶ್ರೀ ವೀರಭದ್ರಪ್ಪನವರ ಕರಡಿ ಮಜಲು ಸಂಘ (ರಿ) ಮಹಾಲಿಂಗಪುರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ **"ಜಾನಪದ ಉತ್ಸವ–2015"** ಕಾರ್ಯ ಕ್ರಮವನ್ನು ಮಹಾಲಿಂಗಪುರದ ಶ್ರೀ ಬನಶಂಕರಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. |
| 15–2–2015 | "ಜಾನಪದ ಚಿಂತನೆ" ಕಾರ್ಯಕ್ರಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ನಮ್ಮ ಕರಡಿ ಮಜಲು ಸಂಘದ |

ಸಂಯುಕ್ತ ಆಶ್ರಯದಲ್ಲಿ ಮಹಾಲಿಂಗಪುರದ ನೀಲಕಂಠೇಶ್ವರ ಮಠದಲ್ಲಿ ಜಾನಪದ ಗೋಷ್ಠಿ ಮತ್ತು ಪ್ರದರ್ಶನ ಏರ್ಪಡಿಸಿ ಆಚರಿಸಲಾಯಿತು.

20–3–2015 "ಶಾಲಾ ಮಕ್ಕಳಿಗೆ ಜಾನಪದ ತಿಳುವಳಿಕೆ ಕಾರ್ಯಕ್ರಮ" ವನ್ನು ಜಮಖಂಡಿ ತಾಲೂಕಿನ ಚಿಮ್ಮಡ ಗ್ರಾಮದ ಶ್ರೀಪ್ರಭುಲಿಂಗೇಶ್ವರ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ತಿಳುವಳಿಕೆ ಕಾರ್ಯಕ್ರಮ ನಡೆಸಲಾಯಿತು.

10–14–2015 ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಾಗಲಕೋಟ ಇವರು ನಡೆಡಸಿ "ಹುಗ್ಗಿ–ಸುಗ್ಗಿ" ಕಾರ್ಯಕ್ರಮದಲ್ಲಿ ನಮ್ಮ ಕರಡಿಮಜಲು ಕಾರ್ಯಕ್ರಮ ನೀಡಿದ್ದು. ಸ್ಥಳ : ಗಾಂಧಿ ಕ್ರೀಡಾಂಗಣ, ತೇರದಾಳ.

20–04–2015 ಕಲಾಜ್ಯೋತಿ ಶ್ರೀ ವೀರಭದ್ರಪ್ಪನವರ ಕರಡಿಮಜಲು ಸಂಘ (ರಿ) ಮಹಾಲಿಂಗಪೂರ ಹಾಗೂ ಮಹಾಲಿಂಗಪೂರ ಕಲಾವಿದರ ವೇದಿಕೆ ಸಂಯುಕ್ತ ಆಶ್ರಯದಲ್ಲಿ "ಕಲಾವಿದರ ಯೋಜನೆಯ ಮಾಹಿತಿ" ಕಾರ್ಯಕ್ರಮ ಏರ್ಪಡಿಸಿದ್ದು, ಸ್ಥಳ – ಶ್ರೀ ದುಂಡಪ್ಪ ಜಾಧವ ಅವರ ತೋಟ ಕೆಸರಗೊಪ್ಪ, ತೇರದಾಳ ಮತಕ್ಷೇತ್ರ.

24–07–2015 ಮಹಾಲಿಂಗಪುರದ ಶ್ರೀ ಬನಶಂಕರಿದೇವಿ ದೇವಸ್ಥಾನದಲ್ಲಿ ನಡೆದ ದಸರಾ ಸಾಂಸ್ಕೃತಿಕ ಉತ್ಸವದಲ್ಲಿ ಕಾರ್ಯಕ್ರಮ.

22–8–2015 ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಾಗಲಕೋಟ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಹಾಗೂ ಗ್ರಾಮ ಪಂಚಾಯತ ಜಗದಾಳ ಇವರು ನಡೆಸಿದ ವಿಶ್ವ ಜಾನಪದ ದಿನಾಚರಣೆಯಲ್ಲಿ ಕಾರ್ಯಕ್ರಮ.

14–09–2015 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರು ನಡೆಸಿದ "ವಿವಿಧ ಪ್ರಶಸ್ತಿ ವಿತರಣಾ ಸಮಾರಂಭ" ದಲ್ಲಿ ಕಾರ್ಯಕ್ರಮ. ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಂಗಳೂರು

31–10–2015 ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗೋಡಿ ಇವರು ನಡೆಸಿದ 'ಪಟಾಂಗ್–34" ಕಾರ್ಯಕ್ರಮದಲ್ಲಿ

ತಿಂಗಳ ಅತಿಥಿಯಾಗಿ ಭಾಗವಹಿಸಿ ಕಾರ್ಯಕ್ರಮ ನೀಡಿದ್ದು

01–11–2015 ನಮ್ಮ ಕರಡಿ ಮನೆತನದ ಹಿರಿಯ ಜೀವಿ ಕಲಾವಿದ ಶ್ರೀ ಗುರುಲಿಂಗಪ್ಪ ವಿ. ಕರಡಿ ಅವರಿಗೆ ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇಂದ ಕರ್ನಾಟಕ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ನೀಡಿ ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಹಾಗೂ ಸಚಿವೆ ಶ್ರೀಮತಿ ಉಮಾಶ್ರೀ ಅವರು ಗೌರವಿಸಿದರು.
ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.

14–01–2016 ಹೊಟೇಲ್ ಒಡೆಯರ ಸಂಘ (ರಿ) ಧಾರವಾಡ ಕಲಾನಿಧಿ ಎಜ್ಯುಕೇಶನ್ ಸಂಘ (ರಿ) ಧಾರವಾಡ ಇವರು ನಡೆಸಿದ 'ಧಾರವಾಡ ಆಹಾರ ಮೇಳ–2016" ಕಾರ್ಯಕ್ರಮದ ಮೆರವಣಿಗೆಯಲ್ಲಿ ಕಾರ್ಯಕ್ರಮ
ಸ್ಥಳ : ಕರ್ನಾಟಕ ಕಾಲೇಜ ಮೈದಾನ, ಧಾರವಾಡ.

27–03–2016 ಕಲಾಜ್ಯೋತಿ ಶ್ರೀ ವೀರಭದ್ರಪ್ಪನವರ ಕರಡಿ ಮಜಲು ಸಂಘ (ರಿ) ಮಹಾಲಿಂಗಪುರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ "ಜಾನಪದ ವಸಂತ ಸಂಭ್ರಮ" ಕಾರ್ಯಕ್ರಮವನ್ನು ಮಹಾಲಿಂಗಪೂರದ ಶ್ರೀ ನೀಲಕಂಠೇಶ್ವರ ಮಠದ ಸಂಸ್ಕೃತಿ ವೇದಿಕೆಯಲ್ಲಿ ಬಹಳ ಅದ್ದೂರಿಯಾಗಿ ಆಚರಿಸಲಾಯಿತು.

19–4–2016 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ ಇವರು ನಡೆಸಿದ ಭಗವಾನ ಶ್ರೀ ಮಹಾವೀರ ಜಯಂತಿ ಕಾರ್ಯಕ್ರಮ ವಿಧಾನಸೌಧ, ಬೆಂಗಳೂರ.

20–5–2016 ಬನಹಟ್ಟಿಯು ಶ್ರೀ ಸದಾಶಿವ ಮಹಾರಾಜರ ಜಾತ್ರಾಮಹೋತ್ಸವ ಕಾರ್ಯಕ್ರಮ.


16–1–2017 ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ ಇವರು ನಡೆಸಿದ ಶಿವಯೋಗಿ ಶ್ರೀ ಸಿದ್ಧರಾಮೇಶ್ವರ ಜಯಂತಿ ಮಹಾಮೆರವಣಿಗೆ ಕಾರ್ಯಕ್ರಮ. ಸ್ಥಳ : ಸ್ವಾತಂತ್ರ್ಯ ಉದ್ಯಾನವನ

| | |
|---|---|
| 22–8–2016 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ ಹಾಗೂ ಕರ್ನಾಟಕ ಜಾನಪದ ಆಕಾಡೆಮಿ ಇವರ ವಿಶ್ವ ಜಾನಪದ ದಿನಾಚರಣೆಯ ಅಂಗವಾಗಿ ರಾಜ್ಯ ಮಟ್ಟಡ ಜಾನಪದ ಸುಗ್ಗಿ ಕಾರ್ಯಕ್ರಮ ಕುವೆಂಪು ಕನ್ನಡ ಭವನ, ದಾವಣಗೆರೆ. |
| 24–9–2016 | ಶ್ರೀ ಗುರು ಮಹಾಲಿಂಗೇಶ್ವರ ಜಾತ್ರಾ ಮಹೋತ್ಸವದಲ್ಲಿ ಕಾರ್ಯಕ್ರಮ |
| 1–10–2016 | ಶ್ರೀ ಬನಶಂಕರಿದೇವಿ ದೇವಸ್ಥಾನದಲ್ಲಿ ನವರಾತ್ರಿ ನಿಮಿತ್ಯ ನಡೆದ ಶ್ರೀ ದೇವಿ ಪುರಾಣ ಹಾಗೂ ದಸರಾ ಸಂಸ್ಕೃತಿ ವೈಭವದಲ್ಲಿ ಕಾರ್ಯಕ್ರಮ. |
| 5–10–2016 | ತುಮಕುರ ಸಿದ್ಧಗಂಗಾ ಮಠದಲ್ಲಿ ಡಾ॥ ಶಿವಕುಮಾರ ಸ್ವಾಮಿಗಳ ಸಮ್ಮುಖದಲ್ಲಿ ಕಾರ್ಯಕ್ರಮ ಸಿದ್ಧಗಂಗಾ ಮಠ, ತುಮಕೂರ. |
| 8–1–2017 | ಗೋದಾವರಿ ಶುಗರ್ಸ ಮಾಲಿಕರಾದ ಶ್ರೀ ಸಮೀರ ಸೋಮೈಯಾ ಅವರ ಸಮ್ಮುಖದಲ್ಲಿ ಕಾರ್ಯಕ್ರಮದ, ಸಮೀರವಾಡಿ. |
| 16–8–2016 | ಕರ್ನಾಟಕ ಜಾನಪದ ಅಕಾಡೆಮಿಯುವರು ಮಹಾಲಿಂಗಪುರದಲ್ಲಿ ನಡೆಸಿದ ಜಾನಪದ ಸಂಭ್ರಮದಲ್ಲಿ ಕಾರ್ಯಕ್ರಮ. |
| 06–10–2016 | ನಾಡಹಬ್ಬ ಮೈಸೂರ ದಸರಾ ಮಹೋತ್ಸವ –2016 ಚಿಕ್ಕ ಗಡಿಯಾರ ಮೈದಾನದಲ್ಲಿ ಕಾರ್ಯಕ್ರಮ |





**1960 ರಲ್ಲಿ ಪ್ರಥಮ ರಾಷ್ಟ್ರಪತಿಗಳಾದ**
**ಶ್ರೀ ಡಾ॥ ಬಾಬು ರಾಜೇಂದ್ರ ಪ್ರಸಾದ ಅವರೊಂದಿಗೆ**
**ಸ್ಥಳ : ರಾಷ್ಟ್ರಪತಿ ಭವನ, ದೆಹಲಿ**






**1960ರ ಗಣರಾಜ್ಯೋತ್ಸವದಲ್ಲಿ ಪ್ರಥಮ ಪ್ರಧಾನ ಮಂತ್ರಿಗಳಾದ ಶ್ರೀ ಪಂಡಿತ ಜವಹಾರಲಾಲ ನೆಹರು ಅವರೊಂದಿಗೆ.**

**ಸ್ಥಳ : ದೆಹಲಿ**



**1962ರಲ್ಲಿ ರಾಜಸ್ಥಾನ ರಾಜ್ಯದಲ್ಲಿ ಕಾರ್ಯಕ್ರಮ ನೀಡುತ್ತಿರುವ ಹಿರಿಯ ಕಲಾವಿದರು**



**1966ರ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಪ್ರಥಮ ಮಹಿಳಾ ಪ್ರಧಾನ ಮಂತ್ರಿಯಾದ ಶ್ರೀಮತಿ ಇಂದಿರಾ ಗಾಂಧಿ ಹಾಗೂ ಶ್ರೀ ರಾಮಕೃಷ್ಣ ಹೆಗಡೆ ಮತ್ತು ಜೀವರಾಜ ಆಳ್ವಾ ಅವರೊಂದಿಗೆ**




**1986ರಲ್ಲಿ ದೆಹಲಿ ಅಪನಾ ಉತ್ಸವದ ಸಂದರ್ಭದಲ್ಲಿ**
**ಪ್ರಧಾನ ಮಂತ್ರಿ ಶ್ರೀ ರಾಜೀವ ಗಾಂದಿ ಹಾಗೂ**
**ಈಗಿನ ಕಾಂಗ್ರೇಸ್ ಅಧ್ಯಕ್ಷೆ**
**ಶ್ರೀಮತಿ ಸೋನಿಯಾ ಗಾಂದಿ ಅವರೊಂದಿಗೆ**



**1963 ರಲ್ಲಿ ಶ್ರೀ ಎಮ್. ಎಸ್. ನಟರಾಜನ ಮತ್ತು**
**ಶ್ರೀಮತಿ ಮಾಯಾರಾವ್ ಅವರು ಮಹಾಲಿಂಗಪುರಕ್ಕೆ**
**ಬೆಟ್ಟಿ ನೀಡಿದ ಸಂದರ್ಭ**



**1986ರಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ**
**ಜೆ. ಹೆಚ್. ಪಟೇಲ ಅವರೊಂದಿಗೆ  ಸ್ಥಳ : ದೆಹಲಿ**



**1986 ರಲ್ಲಿ ದೆಹಲಿಯಲ್ಲಿ 45 ದಿನಗಳ ವರೆಗೆ ನಡೆದ**
**ಅಪನಾ ಉತ್ಸವದಲ್ಲಿ ಸನ್ಮಾನ್ಯ ರಾಷ್ಟ್ರಪತಿಗಳಾದ**
**ಶ್ರೀ ಶಂಕರ ದಯಾಳ ಶರ್ಮಾ ಅವರೊಂದಿಗೆ**



**1989ರಲ್ಲಿ ಯುವ ಸಂಗೀತ ನೃತ್ಯ ಮಹೋತ್ಸವದಲ್ಲಿ**
**ಕಾರ್ಯಕ್ರಮ ನೀಡುತ್ತಿರುವ ಹಿರಿಯ ಕಲಾವಿದರು**
**ಸ್ಥಳ : ಬೆಂಗಳೂರು**



**1988 ರಲ್ಲಿ ಕೊಲ್ಕತಾದಲ್ಲಿ ನಡೆದ**
**ಅಕಾಡೆಮಿ ಅವಾರ್ಡ್ಸ್ – 1987**
**ಸಮಾರಂಭದಲ್ಲಿ ಕಾರ್ಯಕ್ರಮ ನೀಡುತ್ತಿರುವ**
**ಹಿರಿಯ ಕಲಾವಿದರು**



**1986 ರಲ್ಲಿ ದೆಹಲಿ ಅಶೋಕಾ ಹೋಟೆಲನಲ್ಲಿ**
**ಶ್ರೀ ರಾಮಕೃಷ್ಣ ಹೆಗಡೆ ಅವರೊಂದಿಗೆ**



**1986 ರಲ್ಲಿ ದೆಹಲಿಯಲ್ಲಿ**
**ಶ್ರೀ ಎಮ್. ಪಿ. ಪ್ರಕಾಶ ಅವರೊಂದಿಗೆ**




**1987ರಲ್ಲಿ ಪಾಂಟಿಚೇರಿಯಲ್ಲಿ ಕಾರ್ಯಕ್ರಮ ನೀಡುತ್ತಿರುವ ಹಿರಿಯ ಕಲಾವಿದರು**




**1992 ರಲ್ಲಿ ಸಾರ್ಕ ದೇಶಗಳ ದಕ್ಷಿಣ ಏಷ್ಯಾ ಉತ್ಸವದಲ್ಲಿ ಕಾರ್ಯಕ್ರಮ ನೀಡುತ್ತಿರುವ ಕಲಾವಿದರು**
**ಸ್ಥಳ : ರವೀಂದ್ರ ಕಲಾಕ್ಷೇತ್ರ ಬೆಂಗಳೂರು**



**1986ರಲ್ಲಿ ದೆಹಲಿಯ ಅಪನಾ ಉತ್ಸವ ಸಂದರ್ಭದಲ್ಲಿ ನಮ್ಮ ಹಿರಿಯ ಕಲಾವಿದರು**








**2012 ರಲ್ಲಿ ರನ್ನ ವೈಭವ ಕಾರ್ಯಕ್ರಮ ನೀಡುತ್ತಿರುವ ಕಲಾವಿದರು**



2005ರಲ್ಲಿ ನಮ್ಮ ಕರಡಿ ಮನೆತನದ ಹಿರಿಯ ಕಲಾವಿದ
ಶ್ರೀ ಚನ್ನಪ್ಪ ವಿ. ಕರಡಿ ಇವರಿಗೆ ಜಾನಪದ ಶ್ರೀ 2004 ಪ್ರಶಸ್ತಿಯನ್ನು
ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ ಹಾಗೂ
ಸಚಿವ ಶ್ರೀ ಎಮ್. ಪಿ. ಪ್ರಕಾಶ ಇವರು ಪ್ರಶಸ್ತಿ ನೀಡಿ ಗೌರವಿಸಿದ್ದು




2012 ರಲ್ಲಿ ರನ್ನ ವೈಭವ ಸಾಂಸ್ಕೃತಿಕ ಉತ್ಸವದಲ್ಲಿ ಕಾರ್ಯಕ್ರಮ
ನೀಡುತ್ತಿರುವ ಕಲಾವಿದರು ಹಾಗೂ ಸಂಸ್ಕೃತಿ ಇಲಾಖೆಯ ಜಂಟಿ
ನಿರ್ದೇಶಕರಾದ ಶ್ರೀ ಬಳವಂತರಾವ ಪಾಟೀಲ ಅವರೊಂದಿಗೆ
ಸ್ಥಳ : ಮುಧೋಳ



**2016 ಧಾರವಾಡ ಆಹಾರ ಮೇಳದ ಮೆರವಣಿಗೆಯಲ್ಲಿ ಕಾರ್ಯಕ್ರಮ ನೀಡುತ್ತಿರುವ ಕಲಾವಿದರು.**




**2009 ರಲ್ಲಿ ಎಸ್.ಸಿ.ಪಿ, ಕಲಾ ಹಾಗೂ ಡಿ.ಡಿ.ಎಸ್ ಮಹಾವಿದ್ಯಾಲಯ ಮಹಾಲಿಂಗಪುರದಲ್ಲಿ ಕಾರ್ಯಕ್ರಮ ನೀಡುತ್ತಿರುವ ಕಲಾವಿದರು**




**2010ರಲ್ಲಿ ನಡೆದ ಕನ್ನಡ ಸಂಸ್ಕೃತಿ ಸಮಾವೇಶದಲ್ಲಿ ಕಾರ್ಯಕ್ರಮ ನೀಡುತ್ತಿರುವ ಕಲಾವಿದರು**

**ಸ್ಥಳ : ಪುಣೆ**




**2000 ರಲ್ಲಿ ಶ್ರೀಮತಿ ಸುಮಂಗಲಾ ಬಾದರದಿನ್ನಿಯವರು**
**ವಿಜಯ ಕರ್ನಾಟಕದಲ್ಲಿ ಬರೆದ ಲೇಖನ**

# ದಿಲ್ಲಿಯಲ್ಲಿ ಅಂದಿನ ಕರಡಿ ಮೇಳ



'ಕರಡಿ ಮೇಳ ಅಥವಾ ಕರಡಿ ಮಜಲು' ಎನ್ನುವುದು ಜಾನಪದದ ಒಂದು ಪ್ರಕಾರ. ಬಿಜಾಪುರ ಜಿಲ್ಲೆಯ ಮಹಾಲಿಂಗಪುರದ ಚನ್ನಪ್ಪ ಕರಡಿ ಅವರಿಗೆ ಈ ಕಲೆ ದೈವದತ್ತವಾಗಿ ಒಲಿದು ಬಂದಿದೆ. ಅವರು ಈ ಕಲಾಪ್ರತಿಭೆಯನ್ನು ಅರಳಿಸಿ, ಬೆಳೆಸಿ ರಾಷ್ಟ್ರಮಟ್ಟದಲ್ಲಿ ಪ್ರಖ್ಯಾತಿ ಪಡೆದಿದ್ದಾರೆ. ಕರಡಿ ಮೇಳ ತಮ್ಮ ತಂಡದೊಂದಿಗೆ ದಿಲ್ಲಿಯಲ್ಲಿ ನಡೆದ ಗಣರಾಜ್ಯೋತ್ಸವ ಸಂದರ್ಭದಲ್ಲಿ ಜನವರಿ 26, 1956 ಪ್ರದರ್ಶಿಸಿದರು. ಚನ್ನಪ್ಪ ಕರಡಿ ಅವರಿಗೆ ಈಗ 82 ವಯಸ್ಸು. ಈ ಕಲೆಯ ಬಗ್ಗೆ ಅವರ ಉತ್ಸಾಹ ಎಳ್ಳಷ್ಟೂ ಕುಗ್ಗಿಲ್ಲ. ದಿಲ್ಲಿಯ ಪತ್ರಿಕೆಗಳು ಈ ಕಲಾ ಪ್ರದರ್ಶನದ ಬಗ್ಗೆ ಮೆಚ್ಚುಗೆಯ ವಿಮರ್ಶೆಯನ್ನು ಬರೆದಿದ್ದವು.



1956ರ ಜನವರಿ 26ರ ಗಣರಾಜ್ಯೋತ್ಸವದಂದು ಹಿಂದಿನ ಪ್ರಧಾನಿ ಪಂ. ಜವಾಹರಲಾಲ್ ನೆಹರೂರ ನಿವಾಸದಲ್ಲಿ ಕರಡಿ ಮೇಳ ಕಲಾವಿದರ ಪ್ರದರ್ಶನ.

ಜನವರಿ 26, 1956 ರಂದು ಆಗಿನ ಸರಕಾರ, ವಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ಮಹಾಲಿಂಗಪುರದ 'ಕರಡಿಮೇಳ' ಅಥವಾ 'ಕರಡಿ ಮಜಲು' ಹಾಗೂ ಕೋಲಾರ ಜಿಲ್ಲೆಯ 'ಚಿಕ್ಕ ಜಡೆ ಕೋಲಾಟ' ಜಾನಪದ ನಾಟ್ಯ, ಸಂಗೀತ, ತಂಡಗಳನ್ನು ಗಣರಾಜ್ಯೋತ್ಸವದ ಸಂದರ್ಭದಲ್ಲಿ ಪ್ರದರ್ಶನ ನೀಡಲು ದಿಲ್ಲಿಗೆ ಕಳುಹಿಸಿತ್ತು. ಅಂದು ಮತಿಘಟ್ಟ ಕೃಷ್ಣಮೂರ್ತಿಯವರು ರಚಿಸಿದ 'ನಾಡು ಕಟ್ಟುವರ ಹಾಡು' ದಿಲ್ಲಿಯ ಆಕಾಶವಾಣಿಯಿಂದ ಪ್ರಸಾರವಾಯಿತು.

'ಚಿಕ್ಕ ಜಡೆ ಕೋಲಾಟ' ಎನ್ನುವುದು ಅಂಥ ಒಂದು ನೃತ್ಯ. ಕೈಯಲ್ಲಿ ಗೆಜ್ಜೆಗಳನ್ನು ಹಿಡಿದ ಕಲಾವಿದರು, ಗುಂಪಿನ ನಾಯಕ ಮತ್ತು ಹಾಡುಗಾರರು ಹಾಡುವ ಭಜನೆ, ಗೀತೆಗಳ ತಾಳ ಲಯಕ್ಕನುಗುಣವಾಗಿ ವೃತ್ತಾಕಾರವಾಗಿ ಕುಣಿಯುವುದರಿಂದ ಆರಂಭಿಸಿ, ಮೇಲಿನಿಂದ ಇಳಿಬಿಟ್ಟ ಹಗ್ಗ ಹಿಡಿದು ಕುಣಿಯುತ್ತ ಜಡೆ ಹೆಣೆಯುವುದರಲ್ಲಿ ಈ ನೃತ್ಯ ಮುಕ್ತಾಯವಾಯಿತು. ತಾಳಕ್ಕೆ ತಕ್ಕಂತೆ ನಾದ, ಆ ನಾದಕ್ಕೆ ತಕ್ಕಂತೆ ಹೆಜ್ಜೆಗಳು ಮತ್ತು ಒಬ್ಬರನ್ನೊಬ್ಬರು ಬಳಸಿ ಸುತ್ತುತ್ತ ವರ್ತುಲದಲ್ಲಿ ನಾಟ್ಯ ಮಾಡುತ್ತಿದ್ದ ವೇಗ, ಗತಿ, ರೀತಿಗಳು ಮೆಚ್ಚುಗೆ ಗಳಿಸಿದವು.

ಮಹಾಲಿಂಗಪುರ, ಮುಧೋಳ ತಾಲ್ಲೂಕಿನ ಒಂದು ವಾಣಿಜ್ಯ ಕೇಂದ್ರ. 'ಬೆಲ್ಲ' ತಯಾರಿಕೆಯಲ್ಲಿ ಪ್ರಖ್ಯಾತ ಪಡೆದಿರುವ ಮಹಾಲಿಂಗಪುರ ಮಹಾರಾಷ್ಟ್ರ, ಗುಜರಾತ ಮುಂತಾದ ರಾಜ್ಯಗಳಿಗೆ ಬೆಲ್ಲ ಪೂರೈಸುತ್ತಿದೆ. ಇಂಥ ಬೆಲ್ಲದ ನಾಡಿನಲ್ಲಿ 'ಕರಡಿ ಮೇಳ' ಅಥವಾ 'ಕರಡಿ ಮಜಲು' ಕಲೆ ಸಮೃದ್ಧವಾಗಿ ಬೆಳೆದು ರಾಷ್ಟ್ರಮಟ್ಟದಲ್ಲಿ ಪ್ರಖ್ಯಾತಿ ಪಡೆದಿದೆ.

ಈ ಕರಡಿಮೇಳ ಅಥವಾ ಕರಡಿ ಮಜಲು ಎನ್ನುವುದು ಉತ್ತರ ಕರ್ನಾಟಕದ ಒಂದು ವಿಶಿಷ್ಟ ವಾದ್ಯಮೇಳ. ಈ ಮೇಳದ ವೃಂದದಲ್ಲಿ ಹನ್ನೊಂದು ಜನ ಕಲಾವಿದರಿದ್ದು, ಎರಡು ಡೋಲು, ಶೃತಿಯೂ ಸೇರಿ ಮೂರು ಭಜಂತ್ರಿಗಳು, ಎರಡು ದಿಮ್ಮಿ, ಎರಡು ಹಲಿಗೆ (ಹಣಿ) ಮತ್ತು ಎರಡು ತಾಳ ವಾದ್ಯಗಳು. ಈ ಕಲಾವಿದರೆಲ್ಲರೂ ಒಂದೇ ವಿಧವಾದ ಶುಭ್ರ ಶ್ವೇತ ವಸ್ತ್ರಗಳನ್ನು ಧರಿಸಿ, ವೇದಿಕೆಯ ಮೇಲೆ ಬಂದಾಗ, ಪ್ರೇಕ್ಷಕರು ಮೆಚ್ಚಿ ಕರತಾಡನ ಮಾಡಿದರು.

ಅಧಿಕೃತ ಕಾರ್ಯಕ್ರಮವಲ್ಲದೆ ರಾಷ್ಟ್ರಪತಿ ಭವನ ಪ್ರಧಾನ ಮಂತ್ರಿಗಳ ನಿವಾಸ ಮತ್ತು ದಿಲ್ಲಿ ಕರ್ನಾಟಕ ಸಂಘಗಳಲ್ಲಿ ಈ ವಾದ್ಯಗೋಷ್ಠಿಗಳ ಪ್ರದರ್ಶನ ನಡೆಯಿತು. ತಮ್ಮದೇ ಆದ ಖಚಿತ ಮತ್ತು ಅಪರೂಪದ ತಾಳಗಳನ್ನು ನುಡಿಸಿ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದ ಕೀರ್ತಿ ಈ ಮೇಳಕ್ಕೆ ಲಭಿಸಿತು.


ತಾಳವಾದ್ಯಗಳ ವೈಭವ, ವೇಗ, ಗತಿ ಕೃತಿಗಳ ವೈವಿಧ್ಯವನ್ನು ನೋಡಿ, ಕೇಳಿದ ಶ್ರೋತೃಗಳಿಗೆ ನಟರಾಜನ ತಾಂಡವ ನೃತ್ಯದ ವಿವಿಧ ಕಲಾಪ್ರಕಾರದ ಕಲ್ಪನೆ ಮಾಡುವಂತಿತ್ತು. ಈ ವಾದ್ಯದ ನಡುಗೆ ಬಹುಶಃ ಶಿವಾಂಶ ಸಂಭೂತರಲ್ಲದ ನರ್ತಕರಾರೂ ಕುಣಿಯುವುದು ಸಾಧ್ಯವೇ ಇಲ್ಲವೆನಿಸುತ್ತಿತ್ತು. ಈ ಮೇಳದ ಇನ್ನೊಂದು ವೈಶಿಷ್ಟ್ಯವೆಂದರೆ ಹಲವಾರು ಗಜಗಳ ದೂರದಲ್ಲಿ ಎರಡು ಗುಂಪುಗಳಾಗಿ ನಿಂತು ವಾದ್ಯಗಳ ಮೂಲಕವೇ ಸಂದೇಶಗಳನ್ನು ಕಳುಹಿಸುವುದು. ಈ ಬುದ್ಧಿವಂತಿಕೆಯ ಸಂದೇಶ ವಾಹಕ ರೀತಿಯನ್ನು ರಾಷ್ಟ್ರಪತಿ ಡಾ. ಬಾಬೂ ರಾಜೇಂದ್ರ ಪ್ರಸಾದ ಮತ್ತು ಪ್ರಧಾನಮಂತ್ರಿ ಪಂಡಿತ ಜವಾಹರಲಾಲ್ ನೆಹರು ವೀಕ್ಷಿಸಿ ಮೂಕವಿಸ್ಮಿತರಾಗಿ ರೋಮಾಂಚನಗೊಂಡರು. ಈ ತಂಡವನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು.

■ ಬಿ.ಎಚ್. ಕೊಪ್ಪರ

**2009 ರಲ್ಲಿ ಶ್ರೀ ಬಿ. ಎಚ್. ಕೋಪ್ಪರ ಬೆಂಗಳೂರ ಇವರು ಸಂಯುಕ್ತ ಕರ್ನಾಟಕದಲ್ಲಿ ಬರೆದ ಪರಿಚಯ ಲೇಖನ**

# ಕರಡಿ ಮಜಲು

ಪದ್ಮಾ ಶಿವಮೊಗ್ಗ



ದೇಗುಲದೆದುರು ಮಹಾಲಿಂಗಪುರ ಹುಣಸ್ಯಾಳ ಮನೆತನದವರ ಕರಡಿ ಮಜಲು ಮೆರುಗು

ವಿವಿಧ ವಾದ್ಯಗಳನ್ನು ಹಿಡಿದ ಎಂಟು ಹತ್ತು ಮಂದಿ ವೃತ್ತಾಕಾರವಾಗಿ ನಿಂತಿದ್ದಾರೆ. ಎಲ್ಲರದೂ ಒಂದೇ ರೀತಿಯ ಉಡುಪು. ಡೋಲು, ಶ್ರುತಿ, ದಿಮ್ಮಿ, ಹಲಿಗೆ (ಕಣಿ), ತಾಳ, ಶಹನಾಯಿ, ಸಂಬಾಳ ಗಳೊಂದಿಗೆ ಕರಡಿ ವಾದ್ಯವನ್ನು ಹಿಡಿದಿದ್ದಾರೆ. ಮಂದಗತಿಯಲ್ಲಿ ಆದಿತಾನದಲ್ಲಿ ಕರಡಿ ವಾದನ ಶುರುವಾಗುತ್ತದೆ. ಝುಂಪೆ ತಾಳ, ಆಟ ತಾಳ, ಚೌತಾಳಗಳಲ್ಲಿ ವಾದ್ಯಗಳು ಪರಸ್ಪರ ಜುಗಲ್‌ಬಂದಿ ಪ್ರಾರಂಭಿಸುತ್ತಿದ್ದಂತೆ, ವೇಗ, ಗತಿ, ವೈಭವವನ್ನು ಪಡೆದುಕೊಂಡು ಧ್ರುವಗತಿಗೇರಿ ವಿಜೃಂಭಿಸುತ್ತದೆ. ವಾದ್ಯ ಮೇಳ ತಾರಕಕ್ಕೇರುತ್ತದೆ. ಕೇಳುಗರ ಎದೆಯನ್ನು ಝಲ್ಲೆನ್ನಿಸುತ್ತದೆ. ಒಂದು ಕ್ಷಣ ಶಿವತಾಂಡವವನ್ನು ನೆನಪಿಸಿ ಬೇರೆಯದೇ ಲೋಕಕ್ಕೆ ಕರೆದೊಯ್ಯುತ್ತದೆ.

ಇದು ಕರಡಿ ಮಜಲು ಅಥವಾ ಕರಡಿ (ಚೌಗಡ) ಮೇಳ. ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಲಯ, ಗತಿ, ಶ್ರುತಿ ಈ ಜಾನಪದ ಕಲೆಯಲ್ಲಿದೆ. ಉತ್ತರ ಕರ್ನಾಟಕದ ಈ ವಿಶಿಷ್ಟ ಕಲೆಗೆ ನೂರಾರು ವರ್ಷಗಳ ಇತಿಹಾಸವಿದೆ.

ಕರಡೆ ಮಜಲು ಎಂದೂ ಕರೆಯಲಾಗುವ ಈ ಕಲೆಯಲ್ಲಿ ಮುಖ್ಯ ವಾದ್ಯ ಕರಟವಾದ್ಯ. ಆನೆಯ ಮಸ್ತಕಕ್ಕೆ ಕರಟ ಎನ್ನುತ್ತಾರೆ. ಇದನ್ನು ಕರಡಿ ವಾದ್ಯ ಎಂದು ಕರೆಯುತ್ತಾರೆ. ಇದು ಚರ್ಮ ವಾದ್ಯ.

## ಪುರಾಣೇತಿಹಾಸ

ಪುರಾಣ ಕಥೆಗಳಲ್ಲಿ ಹಲವು ಕಡೆ ಈ ವಾದ್ಯದ ಪ್ರಸ್ತಾಪ ಬರುತ್ತದೆ. ಸ್ಕಂದ ಪುರಾಣದಲ್ಲಿ ಕರಟ ವಾದ್ಯ ಸೃಷ್ಟಿಯಾದ ಬಗ್ಗೆ ಈ ರೀತಿಯ ವಿವರಣೆ ಬರುತ್ತದೆ: ಗಜಾಸುರನೆಂಬ ರಾಕ್ಷಸನಿದ್ದ. ಸುರ-ಅಸುರರ ಯುದ್ಧದಲ್ಲಿ ಗಜಾಸುರನ ವಧೆಯಾಗುತ್ತದೆ. ಆಗ ಗಜಾಸುರ ಬ್ರಹ್ಮನನ್ನು 'ಶಿವನ ಪರಮ ಭಕ್ತ ನಾನು. ನನ್ನನ್ನು ಶಾಶ್ವತವಾಗಿರುವಂತೆ ಮಾಡು' ಎಂದು ಕೇಳಿಕೊಳ್ಳುತ್ತಾನೆ. ಆಗ ಬ್ರಹ್ಮ ಗಜಾಸುರನ ಮಸ್ತಕದಿಂದ ವಾದ್ಯವನ್ನು ಮಾಡುತ್ತಾನೆ. ಆನೆಯ ಅಗಲವಾದ ಎರಡೂ ಕಿವಿಯ ಚರ್ಮದಿಂದ ವಾದ್ಯದ ಎರಡೂ ಬದಿಯಲ್ಲಿ ಮುಚ್ಚುತ್ತಾನೆ. ದಂತದಿಂದ ವಾದ್ಯವನ್ನು ಬಾರಿಸುತ್ತಾನೆ. ಹೀಗೆ ಕರಡಿ ವಾದ್ಯದ ಸೃಷ್ಟಿಯಾಯಿತು.

ಶಿವನ ಪ್ರಿಯವಾದ ವಾದ್ಯ ಇದು. ಶಿವನು ತ್ರಿಪುರಾಸುರ ಮತ್ತು ದಕ್ಷಬ್ರಹ್ಮನ ಸಂಹಾರ ಮಾಡಿದ ನಂತರ ತಾಂಡವ ನೃತ್ಯ ಮಾಡುವಾಗ ಶಿವನ ಭಕ್ತಶ್ರೇಷ್ಠ ನಂದಿಯು ನೃತ್ಯಕ್ಕೆ ತಕ್ಕಂತೆ ಕರಟ ವಾದ್ಯ ನುಡಿಸುತ್ತಾನೆ. ಹಿಂದೆ ರಾಜ-ಮಹಾರಾಜರ ಕಾಲದಲ್ಲಿ ಸೈನಿಕರನ್ನು ಎಚ್ಚರಿಸಲು, ವಿಶೇಷ ಸಂದರ್ಭಗಳಲ್ಲಿ ಕೋಟೆಯ ಎತ್ತರದಲ್ಲಿ ನಿಂತು ಕರಡಿ ವಾದ್ಯವನ್ನು ನುಡಿಸಲಾಗುತ್ತಿತ್ತು.

ಕೇಶೀರಾಜನ 'ಶಬ್ದಮಣಿದರ್ಪಣ' ಮತ್ತು ಹರಿಹರ ಕವಿಯ 'ಗಿರಿಜಾ ಕಲ್ಯಾಣ'ಕೃತಿಗಳಲ್ಲಿ ಕರಡಿ ವಾದನದ ಪ್ರಸ್ತಾಪ ಬರುತ್ತದೆ. 'ಗಿರಿಜಾ ಕಲ್ಯಾಣ'ದಲ್ಲಿ 'ವರ ಶಂಖ ರವಂ, ಕಹಳೆಗಳ ರವಂ, ಡಿಂಡಿಮ ರವಂ, ಕರಟಗಳ ರವಂ, ನಿಸ್ಸಾಳ ರವಂ, ಭೇಡಿ ರವಂ, ಮೃದಂಗ ರವಂಗಳ್...' ಎಂದು ಉಲ್ಲೇಖ ಮಾಡಲಾಗಿದೆ. ಕರಡಿ ವಾದ್ಯ ವಾದನವು ಶಾಸ್ತ್ರೀಯ ಕಲೆ. ಇದರಲ್ಲಿ, ವಿವಿಧ ರಾಗ, ತಾಳ, ಶ್ರುತಿ, ಲಯ, ಸಂಬಾಳ, ನಾಗಸ್ವರ ವಾದ್ಯಗಳು ಮೇಳೈಸಿರುತ್ತವೆ.

ಹಿಂದೆ ಮುಧೋಳ ಸಂಸ್ಥಾನ ಆಳುತ್ತಿದ್ದ ಮಾಲೋಜಿ ರಾವ್ ಘೋರ್ಪಡೆ ಸವಾರಿ ಮಾಡುತ್ತಿದ್ದ ಆನೆ ಒಮ್ಮೆ ಮದವೇರಿ ಹುಚ್ಚೆದ್ದು ಮನಬಂದಂತೆ ಓಡಾಡಿತು. ಆಗ ವೀರಭದ್ರಪ್ಪ ಕರಡಿ ಎಂಬ ಕಲಾವಿದ ತನ್ನ ತಂಡದೊಂದಿಗೆ ಕರಡಿ ವಾದ್ಯವನ್ನು ನುಡಿಸಿದಾಗ ಆನೆ ಶಾಂತವಾಯಿತು ಎಂಬುದು ಪ್ರತೀತಿ.

ಕರಡಿ ಮಜಲನ್ನು ರಾಷ್ಟ್ರಮಟ್ಟದಲ್ಲಿ ಪ್ರಚುರಪಡಿಸಿದ ಮನೆತನ ಮಹಾಲಿಂಗಪುರದಲ್ಲಿದೆ. ಬಾಗಲಕೋಟೆ ಜಿಲ್ಲೆಯ

**ನಮ್ಮ ಜಾನಪದ ಶ್ರೀಮಂತಿಕೆಯ ವೈವಿಧ್ಯಕ್ಕೆ ಮತ್ತೊಂದು ಉದಾಹರಣೆ ಕರಡಿ ಮಜಲು.**



ಮುಧೋಳ ತಾಲ್ಲೂಕಿನ ಮಹಾಲಿಂಗಪುರ, ಮಹಾಲಿಂಗೇಶ್ವರ ಸ್ವಾಮಿಯ ನೆಲೆವೀಡು. ಈ ಗ್ರಾಮಕ್ಕೆ ಮೊದಲು ನರಗಟ್ಟ ಎಂಬ ಹೆಸರಿತ್ತು. 12ನೆ ಶತಮಾನಕ್ಕಿಂತ ಮೊದಲು ಅವತರಿಸಿದರೆನ್ನಲಾದ ಮಹಾತಪಸ್ವಿ ಶ್ರೀ ಮಹಾಲಿಂಗೇಶ್ವರರ ಪಾದ ಸ್ಪರ್ಶದಿಂದ ಇದಕ್ಕೆ ಮಹಾಲಿಂಗಪುರ ಎಂಬ ಹೆಸರು ಬಂತೆನ್ನಲಾಗಿದೆ. ಮಹಾಲಿಂಗೇಶ್ವರರು ಕರಡಿ ಮಜಲು ಕಲೆಯನ್ನು ಈ ಊರಿನ ಕಲಾವಿದರಿಗೆ ಧಾರೆಯೆರೆದು ಆ ಮನೆತನಕ್ಕೆ 'ಕರಡಿ' ಎಂದು ನಾಮಕರಣ ಮಾಡಿದರು ಎನ್ನಲಾಗಿದೆ. ಅಂದಿನಿಂದ ಇಂದಿನವರೆಗೆ ಆ ಕರಡೆ ವಾದ್ಯವನ್ನು ಮನೆಯ ಜಗುಲಿಯ ಮೇಲಿಟ್ಟು ಪೂಜೆ ಸಲ್ಲಿಸಲಾಗುತ್ತಿದೆ. ಅಲ್ಲದೆ, ಸ್ವಾಮಿಯ ಅಪ್ಪಣೆಯಂತೆ ಪ್ರತಿದಿನ ಕರಡೆ ಕಲಾವಿದರು ಮಹಾಲಿಂಗೇಶ್ವರ ಸ್ವಾಮಿ ದೇವಾಲಯದ ಪೂಜಾಕಾರ್ಯದಲ್ಲಿ ಕರಡೆ ಮಜಲು ಸೇವೆಯನ್ನೂ ಮಾಡುತ್ತಾ ಬಂದಿದ್ದಾರೆ. ಇಲ್ಲಿ ಇನ್ನೊಂದು ವಿಶೇಷವಿದೆ. ಶರಣೆ ಸಿದ್ದಾಯಿ ತಾಯಿಯ ಶಿವ ಭಕ್ತಿಗೆ ಒಲಿದ ಮಹಾಲಿಂಗೇಶ್ವರ ಸ್ವಾಮಿಗಳು ತಮ್ಮ ಐದು ಬಳೆ ಜಡೆಗಳ ಮುಂಗುರುಳನ್ನು ಈ ಮನೆತನಕ್ಕೆ ನೀಡಿದ್ದು ಅದು ಪ್ರತಿವರ್ಷ ಒಂದು ಸಾಸಿವೆಯಷ್ಟು ಉದ್ದ ಬೆಳೆಯುತ್ತದೆ ಎಂಬುದು ಭಕ್ತರ ನಂಬಿಕೆ. ಆದ್ದರಿಂದ ಈ ಜಡೆಯನ್ನೇ ಮಹಾಲಿಂಗೇಶ್ವರನೆಂದು ಭಾವಿಸಿ ಭಕ್ತಿಯಿಂದ ಜಟಾಭಿಷೇಕವನ್ನೂ ಮಾಡುತ್ತಾ ಬಂದಿದ್ದಾರೆ.

'ಶಿವನ ಪೂಜೆ (ಗುಗ್ಗುಳೋತ್ಸವ)ಯಲ್ಲಿ ಇದನ್ನು ಸಾಂಪ್ರದಾಯಿಕವಾಗಿ ಬಳಸುತ್ತಾರೆ. ಅಲ್ಲದೆ, ಶುಭಕಾರ್ಯಗಳಲ್ಲಿ ಕರಡಿ ಮೇಳವನ್ನು ಏರ್ಪಡಿಸುತ್ತಾರೆ. ವರ್ಷದಲ್ಲಿ 25ರಿಂದ 30 ಕಾರ್ಯಕ್ರಮಗಳು ಸಿಕ್ಕರೆ ಹೆಚ್ಚು. ಇದರಿಂದಲೇ ಬದುಕು ಸಾಗಿಸಬೇಕಾಗಿದೆ. ಮಹಾಲಿಂಗೇಶ್ವರ ಸ್ವಾಮಿಗಳೇ ಈ ಕಲಾಸೇವೆಯನ್ನು ಮುಂದುವರಿಸಿಕೊಂಡು ಹೋಗಲು ಅಪ್ಪಣೆ ಕೊಡಿಸಿದ್ದಾರೆ. ನಮ್ಮ ಮಕ್ಕಳೂ ಇದನ್ನೇ ಮುಂದುವರಿಸುತ್ತಿದ್ದಾರೆ' ಎನ್ನುತ್ತಾರೆ ಮಹಾಲಿಂಗಪುರದ ಹುಣಸ್ಯಾಳ ಮನೆತನದ ಕಲಾವಿದರಲ್ಲಿ ಒಬ್ಬರಾದ ಚೆನ್ನಮಲ್ಲು.

ಇವರು ಇದರಲ್ಲಿ ಎಷ್ಟು ಪರಿಣತಿ ಪಡೆದಿದ್ದಾರೆ ಎಂದರೆ, ಒಬ್ಬ ಕಲಾವಿದ ನಾವು ಗುಟ್ಟಾಗಿ ನೀಡಿದ ಹೆಸರು, ದೂರವಾಣಿ ಸಂಖ್ಯೆ, ಪದ ಯಾವುದನ್ನು ಬೇಕಾದರೂ ವಾದ್ಯದಲ್ಲಿ ನುಡಿಸುತ್ತಾನೆ. ಅದನ್ನು ಕೇಳಿಸಿಕೊಂಡ ದೂರದಲ್ಲಿ ಕುಳಿತ ಇನ್ನೊಬ್ಬ ಕಲಾವಿದ ಅದೇನೆಂದು ಕರಾರುವಾಕ್ಕಾಗಿ ಹೇಳುತ್ತಾನೆ. ಇವರ ಈ ಕೌಶಲ್ಯ ಗಿನ್ನಿಸ್ ದಾಖಲೆ ಮಾಡಿದೆ.

ಉತ್ತರ ಕರ್ನಾಟಕದ ರಾಯಚೂರು, ಬಳ್ಳಾರಿ, ಬಿಜಾಪುರ, ಬೆಳಗಾವಿ, ಬೀದರ್, ಗುಲ್ಬರ್ಗಾ ಮುಂತಾದ ಕಡೆಗಳಲ್ಲಿ ಕರಡಿ ಮಜಲು ಕಲೆಯ ಕಂಪು ಕಂಡುಬರುತ್ತದೆ.

ಮಹಾಲಿಂಗಪುರದ ಮನೆತನದಲ್ಲಿ 60-70 ಕುಟುಂಬಗಳು ಕರಡಿ ಮಜಲು ಕಲೆಯಲ್ಲಿ ತೊಡಗಿಸಿಕೊಂಡಿವೆ. ಈ ಕುಟುಂಬದ ಮಕ್ಕಳಿಗೂ ಈ ಕಲೆ ಚಿರಪರಿಚಿತ. ಒಂದೆಡೆ ಕಲೆಯನ್ನು ಉಳಿಸಬೇಕಾದ ಕರ್ತವ್ಯ, ಇನ್ನೊಂದೆಡೆ ಹೊಟ್ಟೆಪಾಡಿಗೆ ಉದ್ಯೋಗ ಮಾಡಬೇಕಾದ ಅನಿವಾರ್ಯತೆಯಲ್ಲಿರುವ ಈ ಕುಟುಂಬಗಳು ಕಲೆಯನ್ನು ಬಿಡದೆ ಪೋಷಿಸಿಕೊಂಡು ಬಂದಿವೆ.

feedback@bodhivruksha.com.

**ಬೋಧಿವೃಕ್ಷದಲ್ಲಿ ಶ್ರೀಮತಿ ಪದ್ಮಾ ಶಿವಮೊಗ್ಗ ಇವರು ಬರೆದ ಪರಿಚಯ ಲೇಖನ**

www.prabhatkiran.in इंदौर, मंगलवार 16 नवंबर 2010 email : dainikprabhat1@yahoo.com

# प्रभातकिरण



उज्जैन के कालिदास समारोह में आए कर्नाटक के कलाकार गाजे-बाजे के साथ।

## कालिदास महोत्सव शुरू

### रामघाट पर किया पूजन

उज्जैन: रामचंद्र गिरी। आज सुबह यहां रामघाट पर नांदी कलश पूजन कर अ.भा. कालिदास महोत्सव शुरू हो गया। इस उपलक्ष्य में निकाली गई यात्रा के आगे-आगे रंगोली बनाकर उसका स्वागत किया गया। सात दिनी इस आयोजन में आज शाम को अनूप जलोटा की भजन संध्या होगी।

इस मौके पर राज्यमंत्री पारस जैन, कुलपति टीआर थापक, अकादमी निदेशक पीएन शास्त्री भी उपस्थित थे। समारोह की शुरुआत राज्यपाल रामेश्वर ठाकुर, स्वामी सत्यमित्रानंद महाराज, संस्कृति मंत्री डॉ. लक्ष्मीकांत शर्मा कल दोपहर दो बजे करेंगे। समारोह में शामिल होने कर्नाटक से भी कलाकारों का दल आया हुआ है।

रंगकर्मी राजेंद्रनाथ को कालिदास अलंकरण से सम्मानित किया जाएगा। इस बार रेणु मजूमदार का बांसुरी वादन, डोना गांगुली का ओडिसी नृत्य, देबू चतुर्वेदी का शास्त्रीय गायन भी कालिदास समारोह के आयोजन में शामिल हैं।

## मिट्टी में धंस ग[या]
## रेल इंजन

इंदौर : नगर प्रतिनिधि। सुबह लक्ष्मीबाई नगर रेलवे स्टे[शन के] पास रेल इंजन पटरी से नीचे मि[ट्टी में] धंस गया। उसे निकालने के लि[ए] क्रेनों को बुलाया गया है।

सुबह साढ़े आठ बजे स्टेशन से एक डीजल इंजन ग[या] खींचकर लाने के लिए लक्ष्मीबा[ई] रेलवे स्टेशन भेजा गया। इंज[न] को खींचने के लिए डेड एंड पटरी पर लाया गया तो बारिश [से] हो गई पटरी से पहले दो पहिये मिट्टी में धंस गए। बाद में सारे पहि[ए] गए। डेड एंड पटरी पर होने से उज्जैन रेल रूट बंद नहीं हुआ।

### अवंतिका पांच घंटे लेट

इंदौर। बड़ौदा सेक्श[न] दाहोद-गोधरा खंड पर बिजली के तार टूटने से मुंबई अवंतिका एक्सप्रेस पांच घंटे [देरी से] इंदौर पहुंचेगी।

## भोपाल में फिल्म सि[टी]
## पर आज फैसला

### संस्कृति विभाग को जिम्मेदारी

भोपाल : निप्र। भोपाल में फिल्म सिटी बनेगी। आज मंत्रिमंडल की बैठक में फैसला लिया जाएगा। फिल्म सिटी निर्माण का काम संस्कृति मंत्रालय को सौंपा जाएगा।

भोपाल की लोकेशन फिल्म निर्माता निर्देशकों और ... तैयारी शुरू कर दी है। ... मद्देनजर भोपाल में ... सिटी बनाने का फैसल[ा] मंत्रिमंडल की बैठक में ... फैसला भी लिया ...

विधानसभा के ... नवंबर से ... रहे सत्र में अनुपूरक ... पेश करें ...

ಮಧ್ಯಪ್ರದೇಶ ಉಜನಿಯಲ್ಲಿ ಕಾರ್ಯಕ್ರಮ ನೀಡಿದ ಬಗ್ಗೆ
ಅಲ್ಲಿನ ಪತ್ರಿಕೆಯಲ್ಲಿ ಪ್ರಕಟವಾದ ವರದಿ



ಸಮಸ್ತ ಕನ್ನಡಿಗರ ಹೆಮ್ಮೆ
...ಟಕ

ನಮ್ಮ **ಬಾಗಲಕೋಟೆ**

ಸಕಾರಾತ್ಮಕ ಕ್ರಿಯೆಗೆ ಚಾಲನೆ ನೀಡಬೇಕೆಂದರೆ, ನಾವು ಅಂಥದ್ದೇ ದೂರದರ್ಶಿತ್ವವನ್ನು ಬೆಳೆಸಿಕೊಳ್ಳಬೇಕಾಗುತ್ತದೆ.
-ದಲೈ ಲಾಮಾ

ಹವಾಮಾನ → 23 ↑33

ಪ್ರಸಕ್ತ ವರ್ಷ ಉತ್ತಮ ಮಳೆ: ಭವಿಷ್ಯ » II
ಹೆಮ್ಮರವಾಗಿ ಬೆಳೆದ ಸಾಹಿತ್ಯ ಕೃಷಿ » III
ಸೌಲಭ್ಯವಿಲ್ಲದ ಮುಧೋಳ ಸಂತೆ » IV

ಕಲೆಯ ತವರಿನಲ್ಲೊಂದು ಕಲಾ ಕುಟುಂಬ

# ಕರಡಿಮಜಲಿಗೆ ಮನೆಯೇ ಗರಡಿ...ಕುಟುಂಬವೇ ತಂಡ..

**ಶಿವಲಿಂಗ ಸಿದ್ನಾಳ** ಮಹಾಲಿಂಗಪುರ

ಉತ್ತರ ಕರ್ನಾಟಕದ ಜನಪದ ಕಲೆಗಳಲ್ಲಿ ಅಗ್ರಸ್ಥಾನದಲ್ಲಿರುವ ಕರಡಿಮಜಲು ಕಲೆಯಲ್ಲಿ ಮಹಾಲಿಂಗಪುರದ ಕಲಾವಿದರೂ ಮುಂಚೂಣಿಯಲ್ಲಿದ್ದಾರೆ.

ಲಿಮ್ಕಾ ದಾಖಲೆಯಲ್ಲಿ ಸ್ಥಾನ ಪಡೆಯುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಇಲ್ಲಿನ ಕರಡಿಮೇಳದ ಜನಪ್ರಿಯತೆಗೆ ಇನ್ನೊಂದು ಗರಿಯೆಂಬಂತೆ ಹಿರಿಯ ಕರಡಿ ಕಲಾವಿದ ಮಡಿವಾಳಪ್ಪ ಕರಡಿ ಅವರನ್ನು ಕರ್ನಾಟಕ ಜನಪದ ಅಕಾಡೆಮಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ.

ತಿಳಿ ಸುದ್ದಿ

ಕರಡಿ ಮಜಲಿನ ಕಲಾವಿದನೊಬ್ಬ ಜನಪದ ಅಕಾಡೆಮಿ ಸದಸ್ಯರಾಗುತ್ತಿರುವುದು ಇದೇ ಮೊದಲು.

ಉತ್ತರ ಕರ್ನಾಟಕದಲ್ಲಿ ಕರಡಿಮಜಲು ಎಂಬ ಹೆಸರಿನಲ್ಲಿ ನಾನಾ ತಂಡಗಳಿವೆ. ಆದರೆ ಕರಡಿ ಕಲೆಯ ಮೂಲಕ ಮನೆತನದ ಹೆಸರನ್ನೇ ಬದಲಿಸಿಕೊಂಡು ಕಲಾಸೇವೆಗಾಗಿ ತಮ್ಮ ವಂಶವನ್ನೇ ಮುಡಿಪಾಗಿಟ್ಟಿರುವ ಅಪರೂಪದ ಕಲಾ ಪರಿವಾರ ಮಹಾಲಿಂಗಪುರದಲ್ಲಿದೆ.

**ರಾಷ್ಟ್ರಮಟ್ಟದಲ್ಲಿ ಹೆಸರು**

ಗೋಕಾಕ ತಾಲೂಕು ಹುಣಶಾಳದಿಂದ ವಲಸೆ ಬಂದ ಇವರ ಅಡ್ಡ ಹೆಸರು ಹುಣಶಾಳ ಎಂದಾಗಿತ್ತು.

ನೇಕಾರಿಕೆ ಇವರ ಮೂಲ ವೃತ್ತಿ. ಮುಧೋಳ ಅರಸರ ಕಾಲದಲ್ಲಿ ಪವಾಡ ಪುರುಷ ಮಹಾಲಿಂಗೇಶ್ವರರು ಕರಡಿ ವಾದ್ಯನೀಡಿ ಶ್ರೀ ಮಠದ ಕಲಾ ಸೇವೆ ಮಾಡುವಂತೆ ಅನುಗ್ರಹಿಸಿದ್ದರಿಂದ ಎಲ್ಲರೂ ಕರಡಿ ಕಲೆಯತ್ತ ಒಲಿದು ತಲೆಮಾರುಗಳ ನಂತರ ಮನೆಯೇ ಗರಡಿಯಾಗಿ, ಕುಟುಂಬವೇ ತಂಡವಾಗಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡುತ್ತಿದೆ.

ವರವಾಗಿ ಬಂದ ಆ ವಾದ್ಯವನ್ನು ನಿತ್ಯ ಜಗುಲಿ ಮೇಲಿಟ್ಟು, ವರ್ಷದಲ್ಲಿ 2 ಬಾರಿ ಮಹಾಲಿಂಗೇಶ್ವರ ಜಟೋತ್ಸವದಂದು ದೇವಸ್ಥಾನದಲ್ಲಿಟ್ಟು ಪೂಜಿಸುತ್ತಾರೆ.

ಸಂಗ್ರಹ ಚಿತ್ರ

ಕರಡಿಮಜಲನ್ನು ಕುಟುಂಬವೇ ತಂಡವಾಗಿ ಮಹಾ ವೇದಿಕೆಗಳಲ್ಲಿ ಕಲೆ ಪ್ರದರ್ಶಿಸುತ್ತಿರುವುದು.

**ಕಲಾ ಪ್ರದರ್ಶನ**

ಕಲಾ ಕುಟುಂಬದ ಕುಡಿ ಮಡಿವಾಳಪ್ಪ ಕಲಿಕಾಸಕ್ತಿಗಿಂತ ಕಲಾಸಕ್ತಿಯುಳ್ಳವರು. ಮಧುರವಾಗಿ ಹಾಡಿ ಮೆಚ್ಚಿ ಮನಗೆದ್ದು ಮುಂದಿನ ತರಗತಿಗೆ ವರ್ಗಾಯಿಸಲ್ಪಟ್ಟವರು. 4ನೇ ವರ್ಗದಿಂದಲೇ ತಮ್ಮ ದೊಡ್ಡಪ್ಪ ರಾಷ್ಟ್ರಪ್ರಶಸ್ತಿ ವಿಜೇತ ವೀರಭದ್ರಪ್ಪ, ಸಹೋದರರಾದ ಚನ್ನಪ್ಪ, ಗುರುಲಿಂಗಪ್ಪನವರಿಂದ ಕಲಾ ಪ್ರಭಾವ ಬೆಳೆಸಿಕೊಂಡರು.

ನಂತರ ಪರಿವಾರವನ್ನೇ ತಂಡ ಮಾಡಿಕೊಂಡು ರಾಜ್ಯ, ರಾಷ್ಟ್ರ ಮಟ್ಟದ ಜಾನಪದ ಕಲಾಮೇಳಗಳಾದ 1983ರ ದೆಹಲಿಯ ಕಥಕ್ ಮಹೋತ್ಸವ, 1985ರ ಲೋಕೋತ್ಸವ, 1987ರ ಪಾಂಡಿಚೇರಿ ಉತ್ಸವ, 1988ರ ಕರ್ನಾಟಕ ಉತ್ಸವ, ಯುವಸಂಗೀತ ನೃತ್ಯ ಮಹೋತ್ಸವ, ಕರಾವಳಿ ಉತ್ಸವ, ವಿಜಯನಗರ ದಸರಾ ಉತ್ಸವ, ಬೆಂಗಳೂರಿನಲ್ಲಿ ನಡೆದ 1992ರ ಸಾರ್ಕ್ ಉತ್ಸವ, 1993ರ ಕೋಲ್ಕತ್ತದ ಇಂಡಿಯನ್ ಇಂಟರ್‌ನ್ಯಾಷನಲ್ ಮ್ಯೂಸಿಕ್ ಫೆಸ್ಟಿವಲ್, ಹರಿಯಾಣದಲ್ಲಿ 2013ರ 27ನೇ ಸೂರಜಕುಂಡ ಅಂತಾರಾಷ್ಟ್ರೀಯ ಕರಕುಶಲ ಮೇಳ ಹೀಗೆ ನಾಡಿನುದ್ದಕ್ಕೂ ಮಹಾ ವೇದಿಕೆಗಳಲ್ಲಿ ಕಲಾ ಪ್ರದರ್ಶನ ಮಾಡಿದವರು.

ಅದರಲ್ಲೂ 1986ರಲ್ಲಿ ದೆಹಲಿಯ 45 ದಿನಗಳ ಅಪನಾ ಉತ್ಸವ್‌ದಲ್ಲಿ ಅಂದಿನ ರಾಷ್ಟ್ರಪತಿ ಶಂಕರದಯಾಳ ಶರ್ಮಾ, ಪ್ರಧಾನಿ ರಾಜೀವ್ ಗಾಂಧಿ, ಸೋನಿಯಾ ಗಾಂಧಿ ಸಮ್ಮುಖದಲ್ಲಿ ಕರಡಿಕಲೆ ಪ್ರದರ್ಶಿಸಿ ಪ್ರಶಂಸೆಗೆ ಪಾತ್ರರಾಗಿದ್ದು ಅವರಿಗೆ ಅವಿಸ್ಮರಣೀಯ ಘಟನೆ.

ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ, ರಾಜ್ಯ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಜಾನಪದ, ಯಕ್ಷಗಾನ ಅಕಾಡೆಮಿಗಳಿಗೆ ನಿರಂತರ ಕಲಾ ಸೇವೆ ಮಾಡಿದ್ದಾರೆ.

ತಮ್ಮ ಪರಿವಾರದಿಂದ ಅನೇಕ ಯುವ ಕಲಾವಿದರನ್ನು ಪ್ರೋತ್ಸಾಹಿಸಿ ಕಲಾ ಸೌರಭ ಹರಡುತ್ತಿದ್ದಾರೆ. ಇವರ ಸಾಧನೆಗೆ ಬೆಂಗಳೂರಿನ ಕರ್ನಾಟಕ ಜಾನಪದ ಪರಿಷತ್ ಜಾನಪದ ಲೋಕ ಪ್ರಶಸ್ತಿ ನೀಡಿ ಗೌರವಿಸಿದೆ. ಈಗ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಸ್ಥಾನ ದೊರೆತಿದ್ದು ಇವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿ ಮೂಡಿದಂತಾಗಿದೆ.

**ಸ್ಥಳಿಯ ವಿಜಯ ಕರ್ನಾಟಕ ವರದಿಗಾರರಾದ**
**ಶ್ರೀ ಶಿವಲಿಂಗ ಸಿದ್ನಾಳ ಇವರು ಬರೆದ ಕಲೆಯ ಪರಿಚಯ ಲೇಖನ**




## ಲಿಮ್ಕಾ ದಾಖಲೆ ಸೇರಿದ

# ಮಹಾಲಿಂಗಪುರ ಕರಡಿ ಕಲೆ

ಬಾಗಲಕೋಟ ಜಿಲ್ಲೆ ಮುಧೋಳ ತಾಲೂಕಿನ ಮಹಾಲಿಂಗಪುರವು ಕಲೆ, ಸಾಹಿತ್ಯ, ಸಂಗೀತ ಮತ್ತು ಧಾರ್ಮಿಕತೆಯಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಇಲ್ಲಿಯ ಜಾನಪದ ಕರಡಿ ಮಜಲು ಸಂಘವು ತನ್ನಲ್ಲಿರುವ ಅದಮ್ಯ ಕಲಾ ಪ್ರತಿಭೆ, ತನ್ಮಯತೆ, ಕಲಾಭಿವ್ಯಕ್ತಿ ಹಾಗೂ ಕರಡಿ ಕಲೆಯನ್ನೇ ಜೀವಾಳವಾಗಿಸಿಕೊಂಡು ವಂಶಪಾರಂಪರಿಕವಾಗಿ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ 'ಕರಡಿ' ಮನೆತನದ ಅವಿರತ ಪರಿಶ್ರಮದ ಫಲವಾಗಿ ಇಂದು ಮಹಾಲಿಂಗಪುರ ಕರಡಿಮಜಲು ಕಲೆಯು ಲಿಮ್ಕಾ ದಾಖಲೆ ಸೇರಿದ್ದು ನಮ್ಮೆಲ್ಲರ ಸೌಭಾಗ್ಯ ಮತ್ತು ಹೆಮ್ಮೆಯ ಸಂಗತಿ.

ಕರಡಿ ಮಜಲು ಕಲೆಯ ಪರಿಚಯ :

ಕರಡಿ ಮಜಲು ಎಂದರೆ ಇದು ಜನಪದ ಸಂಗೀತ ಕಲೆಯ ಒಂದು ಭಾಗ. ಕರಡಿ ಎನ್ನುವುದು ಕರಟ ಎಂಬ ಮೂಲ ಶಬ್ದದ ರೂಪ. ಕರಟ ಎಂದರೆ ಆನೆಯ ಮಸ್ತಕ ಎಂಬ ಅರ್ಥವಿದೆ. ಆ ಅರ್ಥವ್ಯಾಪ್ತಿ ಇನ್ನೂ ನಿಗೂಢ : ಹಿಂದಿನ ಕಾಲದಲ್ಲಿ ಕೋಟೆಯ ಮೇಲೆ ಕುಳಿತು ನುಡಿಸುವ ಚರ್ಮವಾದ್ಯ ಚೌಗಡವನ್ನು ಸಂಜ್ಞೆಗಳ ಸೂಚಕವಾಗಿ ಬಳಸುತ್ತಿದ್ದರು. ಕೋಟೆಯ ಮೇಲೆ ದಂಡೆತ್ತಿ ಬರುವ ವೈರಿಗಳ ಸುಳಿವನ್ನು ದುರ್ಬಿನುಗಳಿಂದ ಕಂಡುಕೊಂಡು ಚೌಗಡ ವಾದ್ಯ ಸಂಗೀತ ಮೂಲಕ ಎಚ್ಚರಿಕೆಯ ಮಾಹಿತಿಯನ್ನು ರಾಜರಿಗೆ ಮುಟ್ಟಿಸುವುದು ಹಾಗೂ ಕೋಟೆಯ ಬಾಗಿಲು ತೆರೆಯುವಾಗ ಮತ್ತು ಮುಚ್ಚುವಾಗ ಈ ಚೌಗಡ (ಕರಡಿ) ವಾದ್ಯ ಬಾರಿಸಲಾಗುತ್ತಿತ್ತು.

ಕರಡಿ ಮಜಲು ಎಂದರೆ ವಿವಿಧ ಲಯ, ರಚನೆಗಳನ್ನು ನಿರ್ಮಿಸುವ ಒಂದು ವಾದ್ಯಗೋಷ್ಠಿ ಇಲ್ಲಿ ಒಟ್ಟು ೮ ಜನ ಕಲಾವಿದರ ಜುಗಲ್‌ಬಂದಿ ನೋಡುವುದೇ ಬಲು ಸೊಗಸು. ಸ್ವರ ಮಾಧುರ್ಯ, ರಾಗ-ತಾಳಗಳ ವಿಶಿಷ್ಟ ವಿನ್ಯಾಸದ ರೋಮಾಂಚನಕಾರಿಯಾದ ಈ ಕಲೆಯನ್ನು ಉತ್ತರ ಕರ್ನಾಟಕದಲ್ಲಿ ಎಲ್ಲಾ ಶುಭಕಾರ್ಯಗಳಲ್ಲಿ ತಪ್ಪದೆ ಉಪಯೋಗಿಸುತ್ತಾರೆ. ಅಲ್ಲದೆ, ಶಿವನ ಪೂಜೆಗೆ (ಗುಗ್ಗಳೋತ್ಸವ) ಸಾಂಪ್ರದಾಯಕವಾಗಿ ಇವತ್ತಿಗೂ ಬಳಸುವುದುಂಟು. ಈ ಕರಡಿ ಕಲೆಗೆ ಮೊದಲು ಕರ್ನಾಟಕ ಸಂಗೀತವೇ ಆಗಿತ್ತು, ಆದರ ರಾಗ-ತಾಳ, ಶ್ರವಣಕ್ಕೆ ಕರ್ಕಶವಾಗಿದ್ದರಿಂದ ಕಾಲಾಂತರದಲ್ಲಿ ಕರಡಿ ಕಲೆಗೆ ಹಿಂದುಸ್ತಾನಿ ಸಂಗೀತದ ಸ್ವರೂಪ ನೀಡಲಾಯಿತು.

ಜಾನಪದ ಕರಡಿ ಮಜಲು ಸಂಘದ ಎಲ್ಲ ಕಲಾವಿದರ ಪ್ರಕಾರ ಕರಡಿ

> ಹಿಂದಿನ ಕಾಲದಲ್ಲಿ ಕೋಟೆಯ ಮೇಲೆ ಕುಳಿತು ನುಡಿಸುವ ಚರ್ಮವಾದ್ಯ ಚೌಗಡವನ್ನು ಸಂಜ್ಞೆಗಳ ಸೂಚಕವಾಗಿ ಬಳಸುತ್ತಿದ್ದರು. ಕೋಟೆಯ ಮೇಲೆ ದಂಡೆತ್ತಿ ಬರುವ ವೈರಿಗಳ ಸುಳಿವನ್ನು ದುರ್ಬಿನುಗಳಿಂದ ಕಂಡುಕೊಂಡು ಚೌಗಡ ವಾದ್ಯ ಸಂಗೀತ ಮೂಲಕ ಎಚ್ಚರಿಕೆಯ ಮಾಹಿತಿಯನ್ನು ರಾಜರಿಗೆ ಮುಟ್ಟಿಸುವುದು ಹಾಗೂ ಕೋಟೆಯ ಬಾಗಿಲು ತೆರೆಯುವಾಗ ಮತ್ತು ಮುಚ್ಚುವಾಗ ಈ ಚೌಗಡ (ಕರಡಿ) ವಾದ್ಯ ಬಾರಿಸಲಾಗುತ್ತಿತ್ತು.

■ ಚಂದ್ರಶೇಖರ ಮೋರೆ

46 ಕರ್ಮವೀರ | ಜೂನ್ | ೬ | ೨೦೧೦

**ಸ್ಥಳೀಯ ಉದಯವಾಣಿ ವರದಿಗಾರರಾದ**
**ಶ್ರೀ ಚಂದ್ರಶೇಖರ ಮೋರೆಯವರು ಬರೆದ ಕಲೆಯ ಪರಿಚಯ ಲೇಖನ**

ಮಜಲು ಎಂದರೆ ಅದೊಂದು ತಪಸ್ಸು, ಧ್ಯಾನ, ಅಪಾರ ಶ್ರದ್ಧೆ ಮತ್ತು ಭಕ್ತಿಯೇ ಈ ಕಲೆಯ ಜೀವಾಳ. ಎಂಥವರನ್ನೂ ಸಹ ಮಂತ್ರಮುಗ್ಧರನ್ನಾಗಿಸುವ ಅಪರೂಪದ ವಾದ್ಯಕಲೆ ಇದಾಗಿದೆ.



**ಶ್ರೀ ಮಹಾಲಿಂಗೇಶ್ವರರ ಕೃಪೆಯೆ ಕರಡಿ ಕಲೆಗೆ ಶ್ರೀರಕ್ಷೆ :**

ಈ ವೈಶಿಷ್ಟ್ಯಪೂರ್ಣ ಕರಡಿ ಮಜಲು ಕಲೆಗೆ ೧೫ ತಲೆಮಾರುಗಳ ಇತಿಹಾಸವಿದೆ. ೧೨ನೇ ಶತಮಾನದ ಬಸವಣ್ಣನವರಿಗಿಂತ ಮುಂಚೆಯೇ ಅವತರಿಸಿದರೆನ್ನಲಾದ ಮಹಾತಪಸ್ವಿ ಶ್ರೀ ಮಹಾಲಿಂಗೇಶ್ವರರು ಈ ಕಲೆಯ ಮೂಲದಲ್ಲಿ ಇಲ್ಲಿಯ ಕಲಾವಿದರಿಗೆ ಧಾರೆಯೆರೆದು ಈ ಮನೆತನಕ್ಕೆ ಕರಡಿ ಎಂದು ನಾಮಕರಣ ಮಾಡಿದರು. ಶ್ರೀ ಮಹಾಲಿಂಗೇಶ್ವರರು ಅನುಗ್ರಹಿಸಿದ ಕರಡಿ ವಾದ್ಯವನ್ನು ಈ ಮನೆತನದವರು ಇಂದಿಗೂ ದೇವರ ಜಗುಲಿಯ ಮುಂದೆ ಇಟ್ಟು ಪೂಜೆಸಲ್ಲಿಸುತ್ತಿದ್ದಾರೆ. ಅಲ್ಲದೆ, ಅಂದಿನಿಂದ ಇಂದಿನವರೆಗೂ ಈ ಕಲಾವಿದರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಿರಂತರ ಕರಡಿ ಕಲಾ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಈ ಭಕ್ತಿ ಪೂರ್ವಕ ಶ್ರದ್ಧೆ, ನಿಷ್ಠೆಯೇ ಈ ಲಿಮ್ಕಾ ದಾಖಲೆಯ ಸಾಧನೆಗೆ ಶ್ರೀರಕ್ಷೆ ಎಂದರೆ ತಪ್ಪಾಗಲಾರದು.

**ಅಗ್ರಗಣ್ಯರ ಸಮ್ಮುಖದಲ್ಲಿ ಕಲಾ ಪ್ರದರ್ಶನ :**

ತಮ್ಮ ಕಲಾ ಪ್ರೌಢಿಮೆಯಿಂದ ಮಹಾಲಿಂಗಪುರದ ಕೀರ್ತಿಪತಾಕೆಯನ್ನು ರಾಷ್ಟ್ರಮಟ್ಟದಲ್ಲಿ ಬೆಳಗಿದ ಕರಡಿ ಮನೆತನದ ಕಲಾವಿದರಾದ ದಿ. ವೀರಭದ್ರಪ್ಪ ಮತ್ತು ದಿ. ಚೆನ್ನಪ್ಪ ಇವರ ಕಲಾ ತಂಡವು ೧೯೬೦ ರಲ್ಲಿ ದೇಶದ ಪ್ರಥಮ ಪ್ರಧಾನಿ ಜವಾಹರಲಾಲ ನೆಹರು, ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದರವರ ಸಮ್ಮುಖದಲ್ಲಿ ಕರಡಿ ಕಲೆ ಪ್ರದರ್ಶನ ನಡೆಸಿ ರಾಷ್ಟ್ರಪ್ರಶಸ್ತಿ ಪಡೆದಿರುವುದು ಅವಿಸ್ಮರಣೀಯ ಸಂಗತಿ. ಮುಂದೆ ೧೯೬೮ರ ಜನವರಿ



೧೧ ರಂದು ದೆಹಲಿಯ ವಿಜ್ಞಾನ ಭವನದಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಮುಂದೆ ಕಾರ್ಯಕ್ರಮ ನೀಡಿ ಭೇಷ್ ಎನಿಸಿಕೊಂಡಿದ್ದಾರೆ.

ಅಲ್ಲದೆ ೧೯೬೩ ರಲ್ಲಿ ಪಶ್ಚಿಮ ಬಂಗಾಳ, ೧೯೬೪ ರಲ್ಲಿ ಆಸ್ಸಾಂ, ಮಣಿಪುರ, ೧೯೬೫ ರಲ್ಲಿ ಜಮ್ಮು-ಕಾಶ್ಮೀರ, ೧೯೬೬ ರಲ್ಲಿ ಮಹಾರಾಷ್ಟ್ರ, ೧೯೬೭ ರಲ್ಲಿ ಒರಿಸ್ಸಾ, ೧೯೬೮ ರಲ್ಲಿ ಆಂಧ್ರಪ್ರದೇಶ, ೧೯೫೯ರಲ್ಲಿ ತಮಿಳ್ನಾಡು ಸೇರಿದಂತೆ ಭಾರತದಾದ್ಯಂತ ವಿವಿಧ ಸ್ಥಳಗಳಲ್ಲಿ ತಿಂಗಳುಗಟ್ಟಲೆ ಕಾರ್ಯಕ್ರಮ ನೀಡಿದ ಕೀರ್ತಿ ಈ ಜನಪದ ಕರಡಿ ಮೇಳ ತಂಡಕ್ಕಿದೆ.

೧೯೮೬ ರಲ್ಲಿ ದೆಹಲಿಯಲ್ಲಿ ೪೫ ದಿನಗಳವರೆಗೆ ನಡೆದ ಉತ್ಸವದಲ್ಲಿ ರಾಷ್ಟ್ರಪತಿ ಶಂಕರದಯಾಳ ಶರ್ಮಾ, ಪ್ರಧಾನಮಂತ್ರಿ ರಾಜೀವ ಗಾಂಧಿ ಹಾಗೂ ಪ್ರಸಕ್ತ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಸಮ್ಮುಖದಲ್ಲಿ ಕಲಾಸೇವೆಗೈದು ಪ್ರಶಂಸೆಗೆ ಪಾತ್ರರಾಗಿದ್ದಾರೆ.

೧೯೬೩ ರಿಂದ ೨೦೧೦ರ ವರೆಗೆ ಈ ಕಲಾ ತಂಡವು ಪಾಂಡೀಚೆರಿ, ಕಲ್ಕತ್ತಾ, ದೆಹಲಿ, ಮದ್ರಾಸ, ಮಂತ್ರಾಲಯ ಸೇರಿದಂತೆ ಕರ್ನಾಟಕದ ಪಟ್ಟದಕಲ್ಲು, ಬಿಜಾಪೂರ, ಹುಬ್ಬಳ್ಳಿ, ಬೀದರ, ಹಂಪಿ, ಸಮೀರವಾಡಿ ಸೇರಿದಂತೆ ದೇಶಾದ್ಯಂತ ಜರುಗಿದ ಎಲ್ಲಾ ಸಾಂಸ್ಕೃತಿಕ ಉತ್ಸವ, ಕನ್ನಡ ಸಾಹಿತ್ಯ ಸಮ್ಮೇಳನ, ಜನಪದ ಕಲಾ ಉತ್ಸವ, ಜಗತ್ಪ್ರಸಿದ್ಧ ಮೈಸೂರು ದಸರಾ ಉತ್ಸವ, ಸುವರ್ಣ ಸಾಂಸ್ಕೃತಿಕ ದಿಬ್ಬಣ ಹಾಗೂ ದೂರದರ್ಶನದ ಚಂದನ ಮತ್ತು ಸುವರ್ಣ ವಾಹಿನಿ ಸೇರಿದಂತೆ ನೂರಾರು ಸ್ಥಳಗಳಲ್ಲಿ ಸಾವಿರಾರು ಕಲಾ ಪ್ರದರ್ಶನ ನೀಡಿರುವ ಈ ಜನಪದ ಕರಡಿ ಮಜಲು ಸಂಘದ ಸಾಧನೆಯ ಶಿಖರವನ್ನು ಬಣ್ಣಿಸಲು ಪದಗಳೇ ಸಾಲವು. ಅಷ್ಟೊಂದು ಅದ್ಭುತ, ಅಮೋಘ ಕಲಾ ಪ್ರತಿಭೆಯಿಂದಾಗಿಯೇ ಇಂದು ಲಿಮ್ಕಾ ದಾಖಲೆಗೆ ಸೇರ್ಪಡೆಯಾಗಿದ್ದು, ಇದು ಈ ಕಲಾ ತಂಡದಲ್ಲಿ ದುಡಿದ ಎಲ್ಲಾ ಕಲಾವಿದರಿಗೆ ಸಿಕ್ಕ ಮಹಾಜಯ. ಮಹಾಲಿಂಗಪುರದ ಹೆಸರು ರಾಷ್ಟ್ರವ್ಯಾಪಿ ಪ್ರಖ್ಯಾತಿ ಪಡೆದಿರಲು ಅವರ ಕರಡಿ ಕಲೆಯೇ ಕಾರಣ ಎಂಬುದು ಹೆಮ್ಮೆಯ ಸಂಗತಿ.

**ಕರಡಿ ಮನೆತನದ ಕಲಾ ಪ್ರತಿಭೆಗಳು :**

ಕರಡಿಕಲಾ ಸೇವೆಯಲ್ಲಿ ಮಗ್ನರಾಗಿರುವ ಕರಡಿ ಮನೆತನವು ಅನುವಂಶಿಕ ಕರಡಿ ಮಜಲು ಕಲೆಯ ಪರಿಣತಿ ಹೊಂದಿರುವ ಭಾರತದ ಏಕೈಕ ಮನೆತನ ಎಂಬುದೇ ಮಹಾಲಿಂಗಪುರದ ಹೆಗ್ಗಳಿಕೆ ಹಾಗೂ ಕರ್ನಾಟಕ ಜನಪದ ಕಲೆಯ ಹಿರಿಮೆಗೆ ಜೀವಂತ ಸಾಕ್ಷಿಯಾಗಿದೆ.

ಈ ಮನೆತನದಲ್ಲಿಯ ದಿ. ರುದ್ರಪ್ಪ, ರಾಷ್ಟ್ರಪ್ರಶಸ್ತಿ ವಿಜೇತ ದಿ. ವೀರಭದ್ರಪ್ಪ, ದಿ. ಚನ್ನಪ್ಪ, ದಿ. ಗುರಲಿಂಗಪ್ಪ ಕರಡಿ ಹಾಗೂ ಗಂಗಪ್ಪ, ವೀರಣ್ಣ, ಅಶೋಕ, ಚನಮಲ್ಲಪ್ಪ ಕರಡಿಯವರು ಸೇರಿದಂತೆ ಒಟ್ಟು ೩೭ ಜನ ಹಿರಿಯ-ಕಿರಿಯ ಕಲಾವಿದರು ಈ ಕರಡಿ ಕಲೆಯ ಉಳಿವಿಗಾಗಿ ಶ್ರಮಿಸಿದ ಮತ್ತು ಶ್ರಮಿಸುತ್ತಿರುವ ಕಲಾವಿದರು.

ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಕರಡಿ ವಾದ್ಯ ನುಡಿಸುವ ಮೂಲಕ ಹಾಗೂ ಬೆನ್ನಿನಿಂದ ಬಾರಿಸುವ ಮತ್ತು ಕೈತಾಳವೆಂಬ ವಿಭಿನ್ನ ಕಲೆಯ ಪರಿಣತಿ ಪಡೆದು, ಶಬ್ದ ನುಡಿಸುವ ವಿಶೇಷ ಕಲೆಯನ್ನು ಕರಗತ ಮಾಡಿಕೊಂಡು ಕಲೆಯಲ್ಲಿ ಪೂರ್ಣ ಪ್ರಾವಿಣ್ಯತೆಯನ್ನು ಸಾಧಿಸಿದ್ದರಿಂದಾಗಿಯೇ ನಾವು ನಮ್ಮ ಕರಡಿ ಕಲೆಯನ್ನು ಲಿಮ್ಕಾ ದಾಖಲೆಗೆ ಸೇರಿಸಲು ಸಾಧ್ಯವಾಯಿತು ಎಂಬುದು ಅಶೋಕ ಕರಡಿ ಮತ್ತು ಚನಮಲ್ಲಪ್ಪ ಕರಡಿಯವರ ಅಭಿಪ್ರಾಯವಾಗಿದೆ.

ಇಷ್ಟೆಲ್ಲಾ ಸಾಧನೆ ಮಾಡಿರುವ ಈ ತಂಡದ ಕಲಾವಿದರಿಗೆ ಪ್ರಶಸ್ತಿ ಸಿಕ್ಕಿದ್ದು ವಿರಳ. ೧೯೫೯ ರಲ್ಲಿ ದಿ. ವೀರಭದ್ರಪ್ಪ ಕರಡಿ ಇವರಿಗೆ ನೆಹರು ಅವರಿಂದ ರಾಷ್ಟ್ರಪ್ರಶಸ್ತಿ ಗೌರವ ಹಾಗೂ ೨೦೦೩ ರಲ್ಲಿ ಚನ್ನಪ್ಪ ಕರಡಿಯವರಿಗೆ ರಾಜ್ಯ ಸರ್ಕಾರದ ಜಾನಪದಶ್ರೀ ಪ್ರಶಸ್ತಿಬಿಟ್ಟರೆ ಇನ್ನುಳಿದ ಯಾವುದೇ ಕಲಾವಿದರಿಗೆ ಅವರ ಪ್ರತಿಭೆಗೆ ತಕ್ಕ ಪುರಸ್ಕಾರ ಸಿಕ್ಕಿಲ್ಲವೆಂಬುದೇ ಬೇಸರದ ಸಂಗತಿ.

ಇನ್ನು ಮುಂದಾದರೂ ನಗರದ ಸಂಘಟನೆಗಳು, ಜಿಲ್ಲಾಢಳಿತ, ರಾಜ್ಯ ಸರ್ಕಾರದಿಂದ ಈ ಜಾನಪದ ಕರಡಿ ಮಜಲು ಸಂಘದ ಎಲ್ಲ ಕಲಾವಿದರ ಪ್ರತಿಭೆಗೆ ತಕ್ಕ ಹೆಚ್ಚಿನ ಪ್ರಶಸ್ತಿ, ಗೌರವ, ಸನ್ಮಾನಗಳು ದೊರೆತು ಅವರ ಕಲಾ ಸೇವೆಯು ನಿತ್ಯ-ನೂತನ-ನಿರಂತವಾಗಿರಲೆಂದು ಆಶಿಸೋಣ.



**ಸ್ಥಳೀಯ ಉದಯವಾಣಿ ವರದಿಗಾರರಾದ**

**ಶ್ರೀ ಚಂದ್ರಶೇಖರ ಮೋರೆಯವರು ಬರೆದ ಕಲೆಯ ಪರಿಚಯ ಲೇಖನ**

# ಸೂರಜ್‌ಕುಂಡದಲ್ಲಿ ಮಿಂಚಿದ ಕರಡಿ ಮಜಲು

• ವಿಕ ಸುದ್ದಿಲೋಕ ಮಹಾಲಿಂಗಪುರ

ಭಾರತ ಸರಕಾರ, ಹರಿಯಾಣ ಮತ್ತು ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಸಂಯುಕ್ತಾಶ್ರಯದಲ್ಲಿ ಹರಿಯಾಣದಲ್ಲಿ ಫೆ.1ರಿಂದ ಆರಂಭಗೊಂಡಿರುವ '27ನೇ ಸೂರಜ್‌ಕುಂಡ ಅಂತಾರಾಷ್ಟ್ರೀಯ ಕರಕುಶಲ ಮೇಳ'ದಲ್ಲಿ ಮಹಾಲಿಂಗಪುರದ ಕಲಾಜ್ಯೋತಿ ವೀರಭದ್ರಪ್ಪನವರ ಕರಡಿ ಮಜಲು ಸಂಘದ 10 ಜನ ಕಲಾವಿದರು ಭಾಗವಹಿಸಿ ಕರಡಿ ಮಜಲು ಪ್ರದರ್ಶನ ನೀಡಿ ಗಮನ ಸೆಳೆದಿದ್ದಾರೆ.

ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಒಟ್ಟು 150 ಜನಪದ ಕಲಾವಿದರು ಮೇಳದಲ್ಲಿ ಭಾಗವಹಿಸಿದ್ದಾರೆ.

ಒಂದು ವಾರದಿಂದ ಈ ಕಲಾವಿದರು ಹಲವು ಕಾರ್ಯಕ್ರಮ ನೀಡುತ್ತಿದ್ದು, ವಿಶೇಷವಾಗಿ 'ಕರ್ನಾಟಕ ಡೇ', 'ಕರ್ನಾಟಕ ಉತ್ಸವ' ಕಾರ್ಯಕ್ರಮ ನಡೆಸಿ ಜನಮೆಚ್ಚುಗೆಗೆ ಗಳಿಸಿದ್ದಾರೆ. ಅಲ್ಲದೆ ಫೆ.15ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಈ ತಂಡ ಮುಖ್ಯ ಕಾರ್ಯಕ್ರಮ ನೀಡಲಿದೆ.

13 ರಾಷ್ಟ್ರಗಳ ಕಲಾವಿದರು ಮೇಳದಲ್ಲಿ ಭಾಗವಹಿಸಿದ್ದಾರೆ. ಇತ್ತೀಚೆಗೆ ಲಿಮ್ಕಾ ದಾಖಲೆಯಲ್ಲಿ ಸ್ಥಾನ ಗಿಟ್ಟಿಸಿರುವ ಈ ತಂಡ ಅಂತಾರಾಷ್ಟ್ರೀಯ ಮಟ್ಟದ ಮೇಳದಲ್ಲಿ ಮಿಂಚುತ್ತಿರುವುದು ಹೆಮ್ಮೆಯ ಸಂಗತಿ. ಮಡಿವಾಳಪ್ಪ ಕರಡಿ, ಚಂದ್ರಶೇಖರ ಕರಡಿ, ಮಹಾಲಿಂಗ ಕರಡಿ, ನವೀನ ಕರಡಿ, ವಿಜಯಕುಮಾರ ಹುಣಶ್ಯಾಳ, ಹನುಮಂತ ಭಜಂತ್ರಿ, ಮಲ್ಲಪ್ಪ, ಮಹಾದೇವ ಭಜಂತ್ರಿ, ಚೆನ್ನಪ್ಪ ಜೋಗಿ ತಂಡದಲ್ಲಿದ್ದಾರೆ.



ಹರಿಯಾಣದಲ್ಲಿ ನಡೆದಿರುವ '27ನೇ ಸೂರಜ್‌ಕುಂಡ ಅಂತಾರಾಷ್ಟ್ರೀಯ ಕರಕುಶಲ ಮೇಳ'ದಲ್ಲಿ ಮಹಾಲಿಂಗಪುರದ ಕರಡಿ ಮಜಲು ತಂಡ ಕಾರ್ಯಕ್ರಮ ಪ್ರದರ್ಶಿಸಿತು.

**ಸೂರಜ ಕುಂಡದಲ್ಲಿ ನಮ್ಮ ಕಲೆಯನ್ನು ಪ್ರದರ್ಶಿಸಿ ಬಂದ ನಂತರ ಸ್ಥಳಿಯ ಪತ್ರಿಕೆಯಲ್ಲಿ ಪ್ರಕಟವಾದ ವರದಿ**

ಸಂಯುಕ್ತ ಕರ್ನಾಟಕ
ಹುಬ್ಬಳ್ಳಿ । 7-6-2010 10

# ಲಿಮ್ಕಾ ದಾಖಲೆಗೆ ಕರಡಿ ಮಜಲಿನ ಕಲಾವಿದರು

ಮಹಾಲಿಂಗಪುರ: ಕರಡಿ ಮಜಲು ಕಲೆಯ ಮೂಲಕ ನಾದ ಹೊರಹೊಮ್ಮಿಸಿ ಭಾಷೆ ರೂಪಿಸಬಲ್ಲ ಇಲ್ಲಿಯ ಕರಡಿ ಮನೆತನದ ಸಹೋದರರ ಸಾಧನೆ ಪ್ರತಿಷ್ಠಿತ 'ಲಿಮ್ಕಾ ಬುಕ ಆಪ್ ರಕಾರ್ಡ್ಸ್-2010' ರಲ್ಲಿ ದಾಖಲಾಗಿದೆ.

ವಂಶ ಪಾರಂಪರಿಕವಾಗಿ ಬಂದ ಕರಡಿ ಮಜಲು ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಮಹಾಲಿಂಗಪುರದ ಕರಡಿ ಮನೆತನದ ಅಶೋಕ ಕರಡಿ ಹಾಗೂ ಸಹೋದರ ಚನ್ನಮಲ್ಲ ಕರಡಿಯವರು ಈಗ ಲಿಮ್ಕಾ ದಾಖಲೆಗೆ ಭಾಜನರಾಗಿದ್ದಾರೆ. ಇವರಿಬ್ಬರು ಎದುರು ಬದುರಾಗಿ ಕುಳಿತು ಕೇವಲ ಕರಡಿ ವಾದನದ ಮೂಲಕವೇ ಮಾತನಾದಬಲ್ಲರು. ಬಿಟ್ಟರಿಗೆ ತಿಳಿಯದಂತೆ ಬರೆದುಕೊಟ್ಟ ಶಬ್ದವನ್ನು ಕರಡಿ ಸಂಗಿತ ಸಾಧನದ ಮೂಲಕ ಹೊರಹೊಮ್ಮಿಸುವ ಸಂಗೀತವನ್ನು ಅರಿತು ಆ ಶಬ್ದವನ್ನು ಇನ್ನೊಬ್ಬ ಹೇಳಬಲ್ಲ.

ಸಾಮಾನ್ಯವಾಗಿ ಇದು ಕರಡಿ ಮಜಲು ಕಲೆಯ ಭಾಗವಲ್ಲ. ಆದರೆ ಕರಡಿ ಮನೆತನ ಈ ಕಲೆಯಲ್ಲಿಯೇ ವಿಶೇಷ ರೀತಿಯಿಂದ ಇದನ್ನು ಅಭಿವೃದ್ಧಿಪಡಿಸಿದೆ ಎಂದು ಲಿಮ್ಕಾ ದಾಖಲೆ ಪುಸ್ತಕದಲ್ಲಿ 'ಸಂಗೀತ ಭಾಷೆ ..ಸಾಹಿತ್ಯ' ಎಂಬ ಶೀರ್ಷಿಕೆಯಡಿ ವಿಶೇಷವಾಗಿ ಉಲ್ಲೇಖ ಮಾಡಲಾಗಿದೆ.

ಜನಪದ ಕಲೆಯ ಒಂದು ಭಾಗವಾಗಿರುವ ಕರಡಿ ಮಜಲು ವಿವಿದ ಲಯ, ರಚನೆಗಳನ್ನು ನಿರ್ಮಿಸುವ ಒಂದು ವಾದ್ಯಗೋಷ್ಠಿಯಾಗಿದ್ದು, ಉತ್ತರ ಕರ್ನಾಟಕ ಭಾಗದಲ್ಲಿ ಶುಭಕಾರ್ಯಗಳಲ್ಲಿ ಈ ಕಲೆಯನ್ನು ಪ್ರಸ್ತುತಪಡಿಸಲಾಗುತ್ತದೆ. ಒಟ್ಟು ಎಂಟು ಜನ ಕಾವಿದರ ತಂಡದ ಜುಗಲ್ಬಂದಿ ಈ ಕರಡಿ ಮಜಲು ಕಲೆಯಲ್ಲಿ ಮೇಳೈಸುತ್ತದೆ. ಇಂತಹ ಕಲೆಯಲ್ಲಿಯೇ ವಿಶಿಷ್ಟರೀತಿಯಿಂದ ಸಾಧನೆತೋರಿಸದ್ದು, ಲಿಮ್ಕಾ ದಾಖಲೆಯಲ್ಲಿ ಹೆಸರು ಬರೆಸಿರುವ ಮಹಾಲಿಂಗಪುರದ ಕರಡಿ ಮನೆತನಕ್ಕೆ ಸರಿಸುಮಾರು 15 ತಲೆಮಾರಿನ ಇತಿಹಾಸವಿದೆ.

ಮಹಾಲಿಂಗಪುರದ ಕ್ಷೇತ್ರಾಧಿಪತಿ ಮಹಾಲಿಂಗೆಶ್ವರರು ಈ ಕಲೆಯನ್ನು ಕರಡಿ ಮನೆತನಕ್ಕೆ ಅನುಗ್ರಹಿಸಿದ್ದಾರೆ ಎನ್ನಲಾಗುತ್ತದೆ. ಹೀಗಾಗಿ ಇಂದಿಗೂ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಕರಡಿ ಮಜಲಿನ ಸೇವೆ ಕಾಣಬಹುದುದಾಗಿದೆ. ಕರಡಿ ಮಜಲು ಕಲೆಯನ್ನು ರಾಷ್ಟ್ರವ್ಯಾಪಿ ಪ್ರಚುರ ಪಡಿಸಿದ ಕೀರ್ತಿ ಕರಡಿ ಮನೆತನದ ದಿ।ವೀರಭದ್ರಪ್ಪ ಕರಡಿ ಹಾಗೂ ದಿ। ಚನ್ನಪ್ಪ ಕರಡಿ ಅವರಿಗೆ ಸಲ್ಲುತ್ತದೆ. ಕರಡಿ ಮನೆತನದಲ್ಲಿಯೇ ಹಿರಿಕಿರಿಯ ಸುಮಾರು 37ಕಲಾವಿದರು ಈ ಕಲೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಆದರೆ ಈ ಕಲೆಯ ಕಲಾವಿದರು ಮಾತ್ರ ಸರ್ಕಾರದ ಅನಾದರಕ್ಕೊಳಗಾಗಿದ್ದು ವಿಪರ್ಯಾಸದ ಸಂಗತಿ. ದಿ। ವೀರಭದ್ರಪ್ಪ ಕರಡಿ ಅವರಿಗೆ 1969ರಲ್ಲಿ ರಾಷ್ಟ್ರ ಪ್ರಶಸ್ತಿ ಹಾಗೂ ದಿ।ಚನ್ನಪ್ಪ ಕರಡಿ ಅವರಿಗೆ 2003 ರಲ್ಲಿ ಸರ್ಕಾರದ ಜಾನಪದ ಶ್ರೀ ಪ್ರಶಸ್ತಿ ಲಭಿಸಿದ್ದು ಬಿಟ್ಟರೆ ಮತ್ತೇ ಯಾವ ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಒಲಿದು ಬಂದಿಲ್ಲ.



ಚನಮಲ್ಲ ಕರಡಿ ಹಾಗೂ ಅವರ ಸಹೋದರ ಅಶೋಕ ಕರಡಿ ಅವಶ್ಯಕತೆಗೆ ಅನುಗುಣವಾಗಿ ಆಂಗ್ಲ ಮತ್ತು ಹಿಂದಿ ಭಾಷೆಯಲ್ಲಿ ಕರಡಿ ವಾದನವನ್ನು ವಿವಿದ ರಾಗದಲ್ಲಿ ನುಡಿಸುವ ನೈಪುಣ್ಯತೆಯನ್ನು ರೂಢಿಸಿಕೊಳ್ಳಲು ತಮ್ಮ ತಂಡಕ್ಕೆ ಸೂಚಿಸಿರುವುದು ವಿಶೇಷ . ಲಿಮ್ಕಾ ದಾಖಲೆ ಪುಸ್ತಕದಲ್ಲಿ 'ಮ್ಯೂಜಿಕಲ್ ಲ್ಯಾಂಗವೇಜ್ ಲಿಟ್ರಲ್ಲಿ' ಆಗಿ ನಮೂದಾಗಿರುವುದು ಬಾಗಲಕೋಟ ಜಿಲ್ಲೆಯ ಕಲೆಗೆ ಗರಿ ಮೂಡಿದಂತಾಗಿದೆ. ಸಂಗೀತ ಸಾಧನದ ಮೂಲಕ ಏನನ್ನಾದರು ಸಾಧಿಸಬಹುದು ಎನ್ನುವುದಕ್ಕೆ ಕರಡಿ ಮನೆತನದ ಈ ಕಲಾವಿದರೆ ಸಾಕ್ಷಿ. ಕರಡಿ ಮಜಲಿನ ವಾದಕರಲ್ಲಿ ಕರಡಿ ಮನೆತನ, ಬಡಿಗೇರ ಮನೆತನ ಹಾಗೂ ಜಂಗಮ ಬಾಂಧವರು ಕೂಡಾ ಕಲೆಗಾರಿಕೆಯಲ್ಲಿ ಪ್ರಸಿದ್ಧರಾಗಿದ್ದಾರೆ.

**ಸ್ಥಳಿಯ ಸಂಯುಕ್ತ ಕರ್ನಾಟಕ ವರದಿಗಾರರಾದ**
**ಶ್ರೀ ಜಯರಾಮ ಶೆಟ್ಟಿಯವರು ಬರೆದ ಕಲೆಯ ಲಿಮ್ಕಾ ದಾಖಲೆ ಲೇಖನ**

guitar and percussion, travelled to 208 countries. In 2004, he was invited to play at the Athens Olympics.

**First music video shot in mobile cinemascope**
AR Rahman in collaboration with Nokia lent his voice for an English single *Pray For Me Brother*, making a poignant statement about life and poverty. The song was developed as the UN anthem to end poverty, hunger and disease by 2015. The single has been composed by AR Rahman with lyrics by Blaaze. The album is shot in a vertical format of black and white on the streets of Los Angeles, USA by Bharatbala. The album includes an instrumental theme and the making of the video.

**Most national anthems on piano from memory**
Arjun Narasimhan Ayyangar (b June 8, 1998) can play national anthems of 244 countries of the world from memory including sovereign states (192 UN member countries + Vatican City); three non-state countries (Puerto Rico, Greenland & Virgin Islands) and three states lacking general international recognition (Taiwan, Palestine & Kosovo). His repertoire of national anthems also includes anthems of Scotland, England and Wales (all part of the United Kingdom). He regularly appears on various television talent shows and competitions. His first public performance was at Old Bridge Public Library, New Jersey, USA on Feb 17, 2002. Till May 31, 2009, Arjun has given 134 public performances.



**Musical language... literally**
Ashok C Karadi (b March 14, 1966) and his brother Channamalla G Karadi (b July 22, 1982) of Bagalkot, Karnataka are exponents in the field of Karadi music which they have been performing since they were 15 years old. What sets these two apart from more than 500-600 Karadi players is their unique ability to transform music played on Karadi (instrument) into words or sentences and vice-versa. The activity consists of a person playing the Karadi and another person sitting at a distance, who has the knowledge of this art deciphering the sounds into words or sentences. This technique is not a part of usual Karadi play but has been developed exclusively by the Karadi family. The brothers are also the members of the Kala Jyothi Veerabhadrappa's Karadi Majalu Sangh, Bagalkot, Karnataka.



**Non-stop morsing recital**
A morsing (also mourching or morching) is a percussion instrument, mainly used in the Carnatic music. It consists of a metal ring in the shape of a horseshoe with two parallel forks forming the frame and a metal tongue in the middle between the forks. It is fixed in such a way to ring at one end and free to vibrate at the other. The metal tongue is bent at the free end in a plane perpendicular to the circular ring so that it can be struck and is made to vibrate.

Satya Sai Ghantasala of Hyderabad performed morsing non-stop for 24 hr at Anandbagh, Sanakaramath, Kanakaraju Gardens, Malkajgiri starting at 10.44 am on Feb 23 to 10.5 am on Feb 24, 2009. Actual performance time was 22 hr 53 min with break time totalling to 1 hr 7 min.



**ಶಬ್ದ ನುಡಿಸುವ ನಮ್ಮ ಕಲೆಯ ಬಗ್ಗೆ ಲಿಮ್ಕಾ ಬುಕ್ಕ ಆಫ್ ರಿಕಾರ್ಡದಲ್ಲಿ ಸೇರಿಸಿದ ನಂತರ ಇಂಗ್ಲಿಷನಲ್ಲಿ ಪ್ರಕಟವಾದ ವರದಿ**